ಬುಧವಾರ, ಜುಲೈ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 198 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಹಾಲಿನ ಪೊಟ್ಟಣವನ್ನು ಕತ್ತರಿಸದೆಯೇ ಬಳಸಲು ನೆರವಾಗುವ ಸಾಧನವೊಂದು ಸಿದ್ಧವಾಗಿದೆ



ಆಳ-ಅಗಲ
'ಉಗ್ರ' ತಂತ್ರ ಬದಲು
'ಸುಪ್ರೀಂ'ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ 11
ಪರಿಷತ್‌ನಲ್ಲಿ 'ಪೋಸ್ಟರ್ ವಾರ್' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,716	24,613	₹75,930 (ಬೆಂಗಳೂರು)	₹94,600 (ಬೆಂಗಳೂರು)	83.58

ಶೃಂಗೇರಿಯಲ್ಲಿ ಪ್ರವಾಹ ಸ್ಥಿತಿ ● ಆಲಮಟ್ಟಿ ಜಲಾಶಯದ 14 ಗೇಟ್‌ಗಳ ಮೂಲಕ ನೀರು ಹೊರಕ್ಕೆ

ಗುಡ್ಡ ಕುಸಿತ: ಆರು ಸಾವು

ಪ್ರಜಾವಾಣಿ ವಾರ್ತೆ

ಕಾರವಾರ/ಅಂಕೋಲಾ/ಗೋಕರ್ಣ: ರಾಜ್ಯದ ವಿವಿಧೆಡೆ ಮಂಗಳವಾರವೂ ಧಾರಾಕಾರ ಮಳೆಯಾಗಿದೆ. ಕೆಲವೆಡೆ ಗುಡ್ಡ ಕುಸಿದು ಸಂಚಾರಕ್ಕೆ ಅಡಚಣೆಯಾಗಿದ್ದರೆ, ಹಲವೆಡೆ ರಸ್ತೆಗಳು ಜಲಾವೃತವಾಗಿವೆ. ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಮಂಗಳವಾರ ರಾಷ್ಟ್ರೀಯ ಹೆದ್ದಾರಿ–66ರ ಅಂಚಿನ ಗುಡ್ಡ ಕುಸಿದು, ಒಂದೇ ಕುಟುಂಬದ ನಾಲ್ವರು ಸೇರಿ ಐದು ಮಂದಿ ಮೃತಪಟ್ಟಿದ್ದು, 11 ಜನ ನಾಪತ್ತೆ ಆಗಿದ್ದಾರೆ.

ಮತ್ತೊಂದು ಘಟನೆಯಲ್ಲಿ, ಕಾರವಾರ ತಾಲ್ಲೂಕಿನ ಕಿನ್ನರ ಗ್ರಾಮದಲ್ಲಿ ಮನೆ ಮೇಲೆ ಗುಡ್ಡ ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

'ಹೆದ್ದಾರಿ ನಿರ್ಮಾಣಕ್ಕೆ ಕಡಿದಿದ್ದ ಗುಡ್ಡ ಮುಂಜಾನೆ 8.45ರ ಸುಮಾರಿಗೆ ಏಕಾಏಕಿ ಕುಸಿದಿದೆ. ಅದರ ರಭಸಕ್ಕೆ ಹೆದ್ದಾರಿಯಲ್ಲಿದ್ದ ಗ್ಯಾಸ್ ಟ್ಯಾಂಕರ್ ಸೇರಿ ಕೆಲ ವಾಹನಗಳು ಮಣ್ಣಿನ ಸಮೇತ ಪಕ್ಕದಲ್ಲಿದ್ದ ಗಂಗಾವಳಿ ನದಿಗೆ ಬಿದ್ದು ಕೊಚ್ಚಿ ಹೋಗಿವೆ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಅಡುಗೆ ಅನಿಲ (ಎಲ್‌ಪಿಜಿ) ತುಂಬಿಕೊಂಡಿರುವ ಟ್ಯಾಂಕರ್ ನದಿಯಲ್ಲಿ ತೇಲುತ್ತಿರುವುದನ್ನು ಕಂಡು ಜನ ಆತಂಕಗೊಂಡರು. ಹೆದ್ದಾರಿ ಪಕ್ಕದಲ್ಲಿ ಚಹಾ ಅಂಗಡಿ ಹೊಂದಿದ್ದ ಲಕ್ಷ್ಮಣ ನಾಯ್ಕ (47), ಅವರ ಪತ್ನಿ ಶಾಂತಿ (36), ಮಗ ರೋಶನ್ (11) ಮತ್ತು ಒಬ್ಬ ಅಪರಿಚಿತ ಪುರುಷನ ಮೃತದೇಹ ಗೋಕರ್ಣದ ದುಬ್ಬನಸಸಿ ಕಡಲತೀರದಲ್ಲಿ ಸಿಕ್ಕಿದೆ.



ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ–66ರ ಮೇಲೆ ಗುಡ್ಡ ಕುಸಿದು ಬಿದ್ದು ಲಾರಿ, ಟ್ಯಾಂಕರ್ ಸಿಲುಕಿದ್ದವು

9ನೇ ಪುಟ ನೋಡಿ

ಮೃತರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ

ಬೆಂಗಳೂರು: ಅಂಕೋಲಾ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತದ ಅವಘಡದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಈ ಕುರಿತು ಹೇಳಿಕೆ ನೀಡಿದ ಅವರು, 'ಭೂಕುಸಿತದಿಂದ ಡಾಬಾದ ನಾಲ್ಕು ಮಂದಿ ಮತ್ತು ಅನಿಲ ಟ್ಯಾಂಕರ್‌ಗಳ ಮೂರು ಮಂದಿ ಮಣ್ಣಿನಲ್ಲಿ ಕೊಚ್ಚಿ ಹೋಗಿದ್ದಾರೆ' ಎಂದು ಅವರು ಹೇಳಿದರು.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ತ್ಯಾಜ್ಯ ನಿರ್ವಹಣೆಗೆ ಐದು ಪಟ್ಟು ಹೆಚ್ಚು ವೆಚ್ಚಕ್ಕೆ ತಯಾರಿ
₹94 ಸಾವಿರ ಕೋಟಿ ಗುತ್ತಿಗೆ?

● ಆರ್. ಮಂಜುನಾಥ್

ಬೆಂಗಳೂರು: ತ್ಯಾಜ್ಯ ವಿಲೇವಾರಿಗೆ 'ಸಮಗ್ರ ಘನತ್ಯಾಜ್ಯ ನಿರ್ವಹಣೆ' ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಿರುವ ಬಿಬಿಎಂಪಿ, ಮುಂದಿನ 30 ವರ್ಷದ ಅವಧಿಗೆ ₹94 ಸಾವಿರ ಕೋಟಿ ಮೊತ್ತದ ಗುತ್ತಿಗೆ ನೀಡಲು ತಯಾರಿ ನಡೆಸಿದೆ.

ಬೆಂಗಳೂರಿನಲ್ಲಿ ಪ್ರತಿನಿತ್ಯ 3,500 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರ ನಿರ್ವಹಣೆಗೆ ಸದ್ಯ ವರ್ಷಕ್ಕೆ ₹450 ಕೋಟಿ ವೆಚ್ಚ ಮಾಡಲಾಗುತ್ತಿದೆ. 2022ರಲ್ಲಿ ಕರೆದ ಹೊಸ ಪ್ಯಾಕೇಜ್ ಅನುಸಾರ ಈ ಮೊತ್ತವು ₹510 ಕೋಟಿ ಎಂದು ಟೆಂಡರ್ ದಾಖಲೆಗಳಲ್ಲಿ ಪ್ರಸ್ತಾವಿಸಲಾಗಿದೆ. ಬಿಬಿಎಂಪಿಯು ಹೊಸ ವ್ಯವಸ್ಥೆ ಅಳವಡಿಸಿಕೊಳ್ಳಲು ತಯಾರಿ ನಡೆಸಿದೆ. ಪ್ರತಿನಿತ್ಯ 6,571 ಟನ್ ಉತ್ಪತ್ತಿಯಾಗಬಹುದು ಎಂದು ಅಂದಾಜಿಸಿ, ಬೃಹತ್ ಮೊತ್ತಕ್ಕೆ ಟೆಂಡರ್ ಕರೆಯುವ ಸಿದ್ಧತೆ ನಡೆಸಿದೆ. ಹೊಸ ವ್ಯವಸ್ಥೆ ಜಾರಿಯಾದರೆ, ಪ್ರತಿ ವರ್ಷ ₹3,163 ಕೋಟಿ ವೆಚ್ಚವಾಗಲಿದೆ.

ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ, ನಿರ್ವಹಣೆಯ ಜವಾಬ್ದಾರಿ ಹೊಂದಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್ ಕಂಪನಿ ಹೊಸ ವ್ಯವಸ್ಥೆಯನ್ನು ನಾಲ್ಕು ಪ್ಯಾಕೇಜ್‌ಗಳಲ್ಲಿ ಜಾರಿಗೆ ತರಲು ಉದ್ದೇಶಿಸಿದೆ. ಇದಕ್ಕಾಗಿ, ರೈಟ್ಸ್ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿದೆ. ಇದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮನೆಗಳಿಂದ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ವರ್ಗಾವಣೆ ಕೇಂದ್ರಗಳಿಗೆ ವಿಲೇವಾರಿ, ಆ ಕೇಂದ್ರಗಳಿಂದ ಸಂಸ್ಕರಣೆ ಕೇಂದ್ರಗಳಿಗೆ ತ್ಯಾಜ್ಯ ಸಾಗಣೆ ಮತ್ತು ವಿಲೇವಾರಿ ಮಾಡಲು 'ಸಮಗ್ರ ಘನತ್ಯಾಜ್ಯ ನಿರ್ವಹಣೆ' ವ್ಯವಸ್ಥೆಯನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ರೂಪಿಸಲಾಗಿದೆ.

10ನೇ ಪುಟ ನೋಡಿ

ಮೇಜರ್ ಸೇರಿ ನಾಲ್ವರು ಹುತಾತ್ಮ

ಶ್ರೀನಗರ: ಜಮ್ಮು–ಕಾಶ್ಮೀರದ ಡೋಡಾ ಜಿಲ್ಲೆಯ ದೇಸಾ ಅರಣ್ಯ ಪ್ರದೇಶದಲ್ಲಿ ಸೋಮವಾರ ತಡರಾತ್ರಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೇಜರ್ ಬ್ರಿಜೇಶ್ ಥಾಪಾ, ಒಬ್ಬ ಪೊಲೀಸ್ ಸೇರಿದಂತೆ ನಾಲ್ವರು ಸೇನೆಯ ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ಸಿಪಾಯಿಗಳಾದ ಬಿಜೇಂದ್ರ, ಅಜಯಕುಮಾರ್ ಸಿಂಗ್ ಮತ್ತು ದೊಕ್ಕರಿ ರಾಜೇಶ್ ಹುತಾತ್ಮರಾದ ಯೋಧರು. '10 ರಾಷ್ಟ್ರೀಯ ರೈಫಲ್ಸ್'ನ ಮೇಜರ್ ಥಾಪಾ, ಇತ್ತೀಚೆಗಷ್ಟೆ ಬಡ್ತಿ ಹೊಂದಿದ್ದರು. 11

ರಿಪಬ್ಲಿಕನ್ ಸಮಾವೇಶದಲ್ಲಿ ಟ್ರಂಪ್ ಭಾಗಿ 10

ಬೆಟ್ಟಹಲಸೂರು ಗ್ರಾ.ಪಂ.ಗೆ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬೆಟ್ಟಹಲಸೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಹೇಮಾವತಿ ಎನ್. ನಾಗರಾಜು ಹಾಗೂ ಉಪಾಧ್ಯಕ್ಷರಾಗಿ ಬಿ.ಆರ್.ಪ್ರವೀಣ್ ಆಯ್ಕೆಯಾಗಿದ್ದಾರೆ.

ಸೋಮವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಪ್ರೇಮಾ ಚಂದ್ರಮೂರ್ತಿ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಹೇಮಾವತಿ ನಾಗರಾಜು ನಾಮಪತ್ರ ಸಲ್ಲಿಸಿದ್ದರು. ಒಟ್ಟು 26 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಹೇಮಾವತಿ 13 ಹಾಗೂ ಪ್ರೇಮಾ 12 ಮತಗಳನ್ನು ಪಡೆದರು. ಒಂದು ಮತ ತಿರಸ್ಕೃತವಾಯಿತು. ಉಪಾಧ್ಯಕ್ಷರ ಸ್ಥಾನಕ್ಕಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಬಿ.ಆರ್.ಪ್ರವೀಣ್ 14 ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಬಿ.ಆರ್.ರಾಮಾಂಜಿನಿ 12 ಮತಗಳನ್ನು ಪಡೆದರು.

ಆಸ್ತಿ ತೆರಿಗೆ: ₹694 ಕೋಟಿ ಸಂಗ್ರಹ

13ನೇ ಲೋಕ ಅದಾಲತ್ ಯಶಸ್ವಿ: 40 ಲಕ್ಷಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ

ಪ್ರಜಾವಾಣಿ ವಾರ್ತೆ



ರಾಷ್ಟ್ರೀಯ ಲೋಕ್ ಅದಾಲತ್‌ನ ವಿವರಗಳನ್ನು ಹೈಕೋರ್ಟ್ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು

ಬೆಂಗಳೂರು: 'ಆಸ್ತಿ ತೆರಿಗೆ ಪಾವತಿಯ ರಿಯಾಯಿತಿ ಗಡುವು ವಿಸ್ತರಿಸಿ, ರಾಷ್ಟ್ರೀಯ ಲೋಕ ಅದಾಲತ್‌ನಲ್ಲೂ ಇಂತಹ ಪ್ರಕರಣಗಳ ರಾಜಿ ಸಂಧಾನ ನಡೆದ ಪರಿಣಾಮ ಈ ಬಾರಿ ಒಟ್ಟು 9 ಲಕ್ಷಕ್ಕೂ ಹೆಚ್ಚು ಪ್ರಕರಣಗಳಲ್ಲಿ ತೆರಿಗೆ ಪಾವತಿದಾರರಿಂದ ರಾಜ್ಯ ಸರ್ಕಾರ ₹694 ಕೋಟಿಯಷ್ಟು ಬೃಹತ್ ಮೊತ್ತವನ್ನು ಸಂಗ್ರಹಿಸಲು ಸಾಧ್ಯವಾಗಿದೆ' ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ವಿ.ಕಾಮೇಶ್ವರ ರಾವ್ ತಿಳಿಸಿದರು.

ಇದೇ 13ರಂದು ನಡೆದ ರಾಷ್ಟ್ರೀಯ ಲೋಕ್ ಅದಾಲತ್ ವಿವರಗಳನ್ನು ಸೋಮವಾರ ಹೈಕೋರ್ಟ್‌ನಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ವಿವರಿಸಿದ ಅವರು, 'ಈ ಬಾರಿಯ ಲೋಕ ಅದಾಲತ್‌ನಲ್ಲಿ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳೂ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ನಡೆಸಲಾದ ಅದಾಲತ್‌ನಲ್ಲಿ ಒಟ್ಟು 40 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಪರಿಹಾರದ ಮೊತ್ತ ₹2,640 ಕೋಟಿಯಷ್ಟಾಗಿದೆ' ಎಂದು ಮಾಹಿತಿ ನೀಡಿದರು.

'1,550 ವೈವಾಹಿಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇವುಗಳಲ್ಲಿ 259 ದಂಪತಿ ರಾಜಿ ಸಂಧಾನದಿಂದ ಪುನಃ ಒಂದಾಗಿ ಜೀವನ ನಡೆಸಲು ತೀರ್ಮಾನಿಸಿದ್ದಾರೆ. ವಿಭಾಗ ದಾವೆಗಳಲ್ಲಿ 3,356 ಪ್ರಕರಣ ಇತ್ಯರ್ಥಗೊಳಿಸಲಾಗಿದೆ. ಎಕ್ಸಿಕ್ಯೂಷನ್ ಪ್ರಕರಣಗಳಲ್ಲಿ ಒಟ್ಟು 3,769 ಪ್ರಕರಣ ಇತ್ಯರ್ಥಪಡಿಸಲಾಗಿದೆ. ಇವುಗಳಲ್ಲಿ ₹118 ಕೋಟಿ ಮೊತ್ತ ನೀಡಲಾಗಿದೆ' ಎಂದು ವಿವರಿಸಿದರು.

'15 ರೇರಾ ಪ್ರಕರಣಗಳನ್ನು (ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ) ಇತ್ಯರ್ಥಪಡಿಸಲಾಗಿದ್ದು ₹1 ಕೋಟಿ ₹22 ಲಕ್ಷ ಹಾಗೂ ಗ್ರಾಹಕರ ವ್ಯಾಜ್ಯಗಳಲ್ಲಿ 69 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು ₹3 ಕೋಟಿ ₹92 ಲಕ್ಷ ಮೊತ್ತವನ್ನು ಇತ್ಯರ್ಥದ ಮೊತ್ತವಾಗಿ ನೀಡಲಾಗಿದೆ' ಎಂದರು.

ಮುಖ್ಯಾಂಶಗಳು

- 5,220 ಮೋಟಾರು ವಾಹನ ಅಪಘಾತ ಪ್ರಕರಣ ಇತ್ಯರ್ಥ
- ₹ 260 ಕೋಟಿ ಮೊತ್ತ ಪರಿಹಾರವಾಗಿ ನೀಡಿಕೆ
- 11,155 ಚೆಕ್ ಬೌನ್ಸ್ ಪ್ರಕರಣ ಇತ್ಯರ್ಥ

'ಬೆಂಗಳೂರಿನ ಲಘು ವ್ಯಾಜ್ಯಗಳ ನ್ಯಾಯಾಲಯದಲ್ಲಿ (ಎಸ್‌ಸಿಸಿಎಚ್-24) ಮೋಟಾರು ವಾಹನ ಪ್ರಕರಣಗಳಲ್ಲಿ ವಿಶಾಖ ಈಶ್ವರ ಪ್ರಸಾದ್ ವಿರುದ್ಧದ ಏಐಜಿ ವಿಮಾ ಕಂಪನಿಯ ಪ್ರಕರಣವನ್ನು ₹4.05 ಕೋಟಿಗೆ ಇತ್ಯರ್ಥಪಡಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 40 ವರ್ಷಗಳಷ್ಟು ಹಳೆಯದಾದ ಶಾಶ್ವತ ಪ್ರತಿಬಂಧಕಾಜ್ಞೆ ಪ್ರಕರಣ ವೊಂದನ್ನು ಇತ್ಯರ್ಥಪಡಿಸಲಾಗಿದೆ' ಎಂದರು.

ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್, ಪ್ರಾಧಿಕಾರದ ಸಾರ್ವಜನಿಕ ಸಂಪರ್ಕಾಧಿಕಾರಿ ಪಿ.ಎಂ. ಬಾಲಸುಬ್ರಮಣಿ ಇದ್ದರು.

ಸುದ್ದಿ 2 ನಿಮಿಷ

ನಗರದ ಗರಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆ

ಬೆಂಗಳೂರು: ನಗರದಲ್ಲಿ ಮಳೆ ಹಾಗೂ ಮೋಡ ಕವಿದ ವಾತಾವರಣದಿಂದ ತಾಪಮಾನ ಇಳಿಮುಖ ಕಂಡಿದ್ದು, ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ತಾಪಮಾನ 24.1 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಇದು ಈ ವರ್ಷದ ಎರಡನೇ ಅತೀ ಕಡಿಮೆ ಗರಿಷ್ಠ ಉಷ್ಣಾಂಶವಾಗಿದೆ. ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ ಈ 4.2 ಡಿಗ್ರಿ ಸೆಲ್ಸಿಯಸ್ ಕಡಿಮೆ ಉಷ್ಣಾಂಶ ವರದಿಯಾಗಿದೆ. ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಇದರಿಂದ ನಗರದಲ್ಲಿ ಚಳಿ ಕಾಣಿಸಿಕೊಂಡಿದೆ.

ಈ ತಿಂಗಳ ಪ್ರಾರಂಭದಲ್ಲಿ ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿತ್ತು. ಮಳೆಯಿಂದಾಗಿ ನಗರದಲ್ಲಿ ತಾಪಮಾನ ಕ್ರಮೇಣ ತಗ್ಗಿದೆ.

ಮುಂದಿನ ಐದು ದಿನಗಳ ನಗರದಲ್ಲಿ ಗರಿಷ್ಠ ತಾಪಮಾನ 25 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜಪಾನ್–ಆರ್.ವಿ ವಿ.ವಿ ಒಪ್ಪಂದ



ಬೆಂಗಳೂರು: ಭಾರತೀಯ ವಿದ್ಯಾರ್ಥಿಗಳಿಗೆ ಜಪಾನ್‌ನಲ್ಲಿ ತರಬೇತಿ ಮತ್ತು ಉದ್ಯೋಗ ಅವಕಾಶ ಒದಗಿಸುವ ಸಂಬಂಧ ಆರ್.ವಿ ವಿಶ್ವವಿದ್ಯಾಲಯ ಮತ್ತು ಜಪಾನ್‌ನ ಇಬರಾಕಿ ಪ್ರಿಫೆಕ್ಚರ್ ಪ್ರಾಂತ್ಯದ ಸರ್ಕಾರವು ಒಪ್ಪಂದ ಮಾಡಿಕೊಂಡಿವೆ.

ನಗರದ ಆರ್.ವಿ. ವಿಶ್ವವಿದ್ಯಾಲಯದಲ್ಲಿ, ಮಂಗಳವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಆರ್.ವಿ ವಿಶ್ವವಿದ್ಯಾಲಯದಲ್ಲಿ ಜಪಾನಿ ಭಾಷಾ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಾಗಿದೆ. ಭಾರತದಲ್ಲಿನ ಜಪಾನ್ ರಾಯಭಾರ ಕಚೇರಿಯ ಸಹಯೋಗದಲ್ಲಿ ಈ ಕೋರ್ಸ್ ನಡೆಸಲಾಗುತ್ತಿದೆ. ಈ ಕೋರ್ಸ್ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಜಪಾನ್‌ನಲ್ಲಿ ತರಬೇತಿ ಮತ್ತು ಉದ್ಯೋಗ ಅವಕಾಶ ಒದಗಿಸಲು ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

ಟೋಕಿಯೊ ಹೊರವಲಯದಲ್ಲಿರುವ ಇಬರಾಕಿ ಪ್ರಾಂತ್ಯದಲ್ಲಿ ಕೈಗಾರಿಕೆಗಳು ಮತ್ತು ಕೃಷಿ ಉತ್ಪನ್ನ ಆಧಾರಿತ ಉದ್ಯಮಗಳು ಹೇರಳವಾಗಿವೆ. ಆದರೆ ಅಲ್ಲಿ ಮಾನವ ಸಂಪನ್ಮೂಲ ಕೊರತೆ ಇದೆ. ಈ ಒಪ್ಪಂದವು ಆ ಕೊರತೆಯನ್ನು ನಿವಾರಿಸಲು ನೆರವಾಗಲಿದೆ ಎಂದು ಜಪಾನಿನ ರಾಯಭಾರ ಕಚೇರಿ ಹೇಳಿದೆ.

'ಅರಣ್ಯ ಒತ್ತುವರಿ ನಿಯಂತ್ರಣ ಸರ್ಕಾರದ ಆದ್ಯತೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಅರಣ್ಯ ಒತ್ತುವರಿ ಈಗಲೂ ನಿರಂತರವಾಗಿ ಸಾಗಿದೆ. ಒತ್ತುವರಿ ನಿಯಂತ್ರಣವನ್ನು ಸರ್ಕಾರ ಆದ್ಯತೆಯಾಗಿ ಪರಿಗಣಿಸಿ, ಪರಿಹಾರಾತ್ಮಕ ಕ್ರಮ ಕೈಗೊಳ್ಳಬೇಕು' ಎಂದು 'ಬೆಂಗಳೂರು ಕ್ಲೈಮೇಟ್ ಚೇಂಜ್ ಇನಿಸಿಯೇಟಿವ್-ಕರ್ನಾಟಕ (ಬಿಸಿಸಿಐ-ಕೆ)' ಸಂಘಟನೆ ಒತ್ತಾಯಿಸಿದೆ.

ಸಂಘಟನೆ ಪರವಾಗಿ ವಿಧಾನಪರಿಷತ್ ಮಾಜಿ ಸಭಾಪತಿ ಪ್ರೊ. ಬಿ.ಕೆ. ಚಂದ್ರಶೇಖರ್, ಪರಿಸರ ವಿಜ್ಞಾನಿ ಎನ್.ಎಚ್. ರವೀಂದ್ರನಾಥ, ಸಂರಕ್ಷಣಾ ಜೀವಶಾಸ್ತ್ರಜ್ಞ ಡಾ. ಕೇಶವ ಎಚ್. ಕೊರ್ಸೆ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ಅರಣ್ಯಒತ್ತುವರಿಯ ಬಹುತೇಕಪ್ರಕರಣಗಳುಇನ್ನೂಇತ್ಯರ್ಥವಾಗದೇ ಉಳಿದಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇದು ಬಹಳ ಕಳವಳಕಾರಿ. 'ಹವಾಮಾನ ಬದಲಾವಣೆ' ಪರಿಣಾಮದಿಂದ ವಾತಾವರಣದಲ್ಲಿ ಸರಾಸರಿ ತಾಪಮಾನ ತೀವ್ರ ಏರಿಕೆ, ನೆರೆ-ಬರ, ಅಕಾಲಿಕ ಮಳೆ, ಬಿಸಿಗಾಳಿ, ಭೂಕುಸಿತ, ಅಂತರ್ಜಲ ಕುಸಿತ, ಮೇಲ್ಮಣ್ಣು ಫಲವತ್ತತೆ ನಾಶಗಳ ಜನಜೀವನವನ್ನು ನಲುಗಿಸುತ್ತಿವೆ. ಇದನ್ನು ಎದುರಿಸಲು ಈಗಲೂ ಸಾಧ್ಯವಿರುವ ಪರಿಣಾಮಕಾರಿ ಮಾರ್ಗವೆಂದರೆ, ಕಾಡನ್ನು ರಕ್ಷಿಕೊಳ್ಳುವುದು ಹಾಗೂ ಹಸಿರಿನ ಕವಚ ಹಿಗ್ಗಿಸುವುದಾಗಿದೆ' ಎಂದಿದ್ದಾರೆ.

'ಅರಣ್ಯ ಸಂರಕ್ಷಣಾ ಕಾನೂನು' ಹಾಗೂ 'ವನ್ಯಜೀವಿ ಸಂರಕ್ಷಣಾ ಕಾನೂನುಗಳು' ಅರಣ್ಯಭೂಮಿ ರಕ್ಷಿಸಿಕೊಳ್ಳುವ ಅಧಿಕಾರ ಮತ್ತು ಅದರ ಉತ್ತರದಾಯಿತ್ವವನ್ನು ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ವಹಿಸಿದೆ. ಆದರೂ ಕಾನೂನು ಮೀರಿ ಅನ್ಯ ಉದ್ದೇಶಕ್ಕೆ ಅರಣ್ಯಭೂಮಿ ಪರಿವರ್ತಿಸುವುದು ಹಾಗೂ ಒತ್ತುವರಿ ಮಾಡುವುದನ್ನು ನಿಯಂತ್ರಿಸುವಲ್ಲಿ ಬಹುಪಾಲು ಅಧಿಕಾರಿಗಳು ವಿಫಲರಾಗಿದ್ದಾರೆ' ಎಂದಿದ್ದಾರೆ.

ಬೆಸ್ಕಾಂ: ಗ್ರಾಹಕ ಸಂವಾದ ಸಭೆ 20ಕ್ಕೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಇದೇ 20ರಂದು ಮಧ್ಯಾಹ್ನ 3ರಿಂದ 5.30ರವರೆಗೆ ಗ್ರಾಹಕ ಸಂವಾದ ಸಭೆ ಹಮ್ಮಿಕೊಂಡಿದೆ.

ಬೆಸ್ಕಾಂನ ಎಲ್ಲ ಕಾರ್ಯ ಮತ್ತು ಪಾಲನಾ ವಿಭಾಗದಲ್ಲಿ ನಡೆಯುವ ಈ ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು, ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಅಧಿಕಾರಿಗಳ ಜತೆಗೆ ಚರ್ಚಿಸಿ ಪರಿಹರಿಸಿಕೊಳ್ಳಬೇಕು ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಸ್ತುಶಿಲ್ಪಶಾಸ್ತ್ರ, ಡಿಪ್ಲೊಮಾ: 'ಸೀಟ್ ಮೆಟ್ರಿಕ್ಸ್' ಬಿಡುಗಡೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ವಾಸ್ತುಶಿಲ್ಪಶಾಸ್ತ್ರ ಕೋರ್ಸ್ ಮತ್ತು ವೃತ್ತಿಪರ ಡಿಪ್ಲೊಮಾ ಅಭ್ಯರ್ಥಿಗಳಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ಆಯ್ಕೆ, ಇಚ್ಛೆಗಳನ್ನು ದಾಖಲಿಸಲು ಜುಲೈ 18ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅವಕಾಶ ಕಲ್ಪಿಸಿದೆ.

ರಾಜ್ಯ ಸರ್ಕಾರ ಈ ಎರಡೂ ಕೋರ್ಸ್‌ಗಳಿಗೆ ಸೀಟ್ ಮೆಟ್ರಿಕ್ಸ್ ನೀಡಿದ್ದು, ಅಭ್ಯರ್ಥಿಗಳ ಮಾಹಿತಿಗಾಗಿ ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಲಿಂಕ್ ಆಯ್ಕೆ ಮಾಡಿ ಆದ್ಯತಾ ಕ್ರಮದಲ್ಲಿ ಇಚ್ಛೆಗಳನ್ನು ದಾಖಲಿಸಬಹುದು. 18ರ ಮಧ್ಯಾಹ್ನ 2 ಗಂಟೆಯ ಒಳಗೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಮೊದಲ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರದ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ತಿಳಿಸಿದ್ದಾರೆ.

ನಿಧನ ವಾರ್ತೆ

ಆರ್. ಕೃಷ್ಣಪ್ಪ

ಬೆಂಗಳೂರು: ಪತ್ರಕರ್ತ ಆರ್. ಕೃಷ್ಣಪ್ಪ (75) ಅವರು ಮಂಗಳವಾರ ನಿಧನರಾದರು.



ಆರ್. ಕೃಷ್ಣಪ್ಪ


ಅವರಿಗೆ ಪತ್ನಿ, ಪುತ್ರ ಇದ್ದಾರೆ. ಬುಧವಾರ ಮಧ್ಯಾಹ್ನ 12 ಗಂಟೆಗೆ ಪೀಣ್ಯ ಮೆಟ್ರೊ ನಿಲ್ದಾಣದ ಎದುರಿನ ಎಸ್.ಆರ್.ಎಸ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ತುಮಕೂರು ಜಿಲ್ಲೆಯ ಪಾವಗಡ ದವರಾದ ಕೃಷ್ಣಪ್ಪ ಅವರು 'ಪ್ರಜಾವಾಣಿ'ಯಲ್ಲಿ ಹಿರಿಯ ಉಪ ಸಂಪಾದಕರಾಗಿ ನಿವೃತ್ತರಾಗಿದ್ದರು. ಪತ್ರಕರ್ತರ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಅವರು, ಕರ್ನಾಟಕ ಪತ್ರಕರ್ತರ ಸಹಕಾರ ಸಂಘ ಹಾಗೂ ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಹಿರಿಯ ಪತ್ರಕರ್ತರ ವೇದಿಕೆಯ ಅಧ್ಯಕ್ಷರಾಗಿದ್ದರು.

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಿರ್ಬಂಧಿತ ನೇರ ಸಂದೇಶಗಳ,
ಮೂಲಕ, Instagram ನಲ್ಲಿರುವ ಹರೆಯದವರು
ಅವರು ಫಾಲೋ ಮಾಡುವ
ಅಥವಾ ಕನೆಕ್ಟ್ ಆಗಿರುವವರಿಂದ ಮಾತ್ರ ಸಂದೇಶಗಳನ್ನು
ಸ್ವೀಕರಿಸಬಹುದು.

instagram.com/familytools ಇಲ್ಲಿ ನಮ್ಮ 50+
ಟೂಲ್‌ಗಳೊಂದಿಗೆ ಪ್ರಾರಂಭಿಸಿ



ಕಳ್ಳತನದ ಬಗ್ಗೆ ಸುಳ್ಳು ದೂರು ನೀಡಿದ್ದ ಎಟಿಎಂ ನಿರ್ವಹಣೆ ಕೇಂದ್ರದ ಸಿಬ್ಬಂದಿ; ಐವರ ಬಂಧನ

₹16.50 ಲಕ್ಷ ಎಟಿಎಂಗೆ ತುಂಬದೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಟಿಎಂಗೆ ತುಂಬಿಸ ಬೇಕಿದ್ದ ಹಣ ಕಳವಾಗಿದೆ ಎಂದು ಸುಳ್ಳು ಹೇಳಿ' ದೂರು ನೀಡಿದ್ದ ಎಟಿಎಂ ನಿರ್ವಹಣೆ ಕಂಪನಿ ವಿರುದ್ಧವೇ ಬೆಳ್ಳಂದೂರು ಪೊಲೀಸರು ದೂರು ದಾಖಲಿಸಿಕೊಂಡು ಕಂಪನಿಯ ಐವರನ್ನು ಬಂಧಿಸಿದ್ದಾರೆ.

ಎಟಿಎಂ ನಿರ್ವಹಣಾ ಕಂಪನಿ ಆಗಿರುವ ಸೆಕ್ಯೂರ್ ವ್ಯಾಲ್ಯೂ ಕಂಪನಿ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಕರಣ ಸಂಬಂಧ ಕ್ಷೇತ್ರ ಕಾರ್ಯ ವ್ಯವಸ್ಥಾಪಕ ಪ್ರತಾಪ್, ಎಟಿಎಂ ಅಧಿಕಾರಿ ಪವನ್ ಕಲ್ಯಾಣ್, ಸೆಕ್ಯೂರ್ ವ್ಯಾಲ್ಯೂ ಕಂಪನಿ ಬೆಂಗಳೂರು ನಗರದ ಉಸ್ತುವಾರಿ ಧರ್ಮೇಂದ್ರ, ಇದೇ ಕಂಪನಿಯ ಮಡಿವಾಳ ವಿಭಾಗದ ಮುಖ್ಯಸ್ಥ ರಾಘವೇಂದ್ರ, ಕಂಪನಿಯ ಸಹಾಯಕ ವ್ಯವಸ್ಥಾಪಕ ಮಹೇಶ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಏನಿದು ಪ್ರಕರಣ?: ಸರ್ಜಾಪುರ ರಸ್ತೆಯ ದೊಡ್ಡ ಕನ್ನಹಳ್ಳಿಯ ಖಾಸಗಿ ಬ್ಯಾಂಕ್‌ನ ಎಂಟಿಎಂನಲ್ಲಿ ಕಳವು ನಡೆದಿತ್ತು. ಈ ಪ್ರಕರಣದ ತನಿಖೆಯ ಜಾಡು ಹಿಡಿದು ತನಿಖೆ ನಡೆಸಿದಾಗ ಸತ್ಯ ಬಯಲಾಗಿದೆ.

ಮುಖಕ್ಕೆ ಬೆಡ್‌ಶೀಟ್ ಸುತ್ತಿಕೊಂಡು ಬಂದಿದ್ದ ಕಳ್ಳರು, ಮೊದಲು ಎಟಿಎಂ ಯಂತ್ರವಿರುವ ಕೊಠಡಿಯ ಸಿಸಿ ಟಿ.ವಿ ಕ್ಯಾಮೆರಾಗಳಿಗೆ ಕಪ್ಪು ಸ್ಪ್ರೇ ಹೊಡೆದಿದ್ದರು. ನಂತರ, ಗ್ಯಾಸ್ ಕಟರ್ ಬಳಸಿ ಎಟಿಎಂ ಬಾಕ್ಸ್ ಕತ್ತರಿಸಿ ನಗದು ದೋಚಿದ್ದರು. ₹16.56 ಲಕ್ಷ ನಗದು ಕಳವು ಆಗಿದೆ ಎಂದು ಬೆಳ್ಳಂದೂರು ಠಾಣೆಗೆ ಸೆಕ್ಯೂರ್ ವ್ಯಾಲ್ಯೂ ಕಂಪನಿ ದೂರು ನೀಡಿತ್ತು. ದೂರು ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು.

ಅಂದು ಕಳ್ಳರು ₹6,500 ಮಾತ್ರ ಕಳವು ಮಾಡಿದ್ದರು. ಉಳಿದ ಹಣ ಎಲ್ಲಿಗೆ ಹೋಯಿತು ಎಂದು ತನಿಖೆ ಮುಂದುವರೆಸಿದಾಗ ಅಸಲಿಗೆ ಸೆಕ್ಯೂರ್ ವ್ಯಾಲ್ಯೂ ಕಂಪನಿಯ ಸಿಬ್ಬಂದಿ ₹16.50 ಲಕ್ಷವನ್ನು ಎಟಿಎಂಗೆ ತುಂಬಿಸಿರಲಿಲ್ಲ ಎಂಬುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು.

ಎಟಿಎಂ ಹಣ ಕಳ್ಳತನ ಮಾಡಿರುವ ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತನಿಖಾ ತಂಡ ರಚಿಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಸುಳ್ಳು ಪ್ರಕರಣ ದಾಖಲಿಸಿದ್ದ ಎಟಿಎಂ ನಿರ್ವಹಣಾ ಕಂಪನಿಯ ವಿರುದ್ಧವೇ ಸದ್ಯ ದೂರು ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಪನಿಯ ಐವರನ್ನು ಬಂಧಿಸಲಾಗಿದೆ. ನಗದು ದೋಚಿದ್ದ ಆರೋಪಿಗಳಿಗೆ ಶೋಧ ಮುಂದುವರೆದಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

153 ಪ್ರಕರಣ ದಾಖಲು

ಬೆಂಗಳೂರು: ಹೆಚ್ಚು ಪ್ರಖರವಾದ ದೀಪಗಳನ್ನು ಅಳವಡಿಸಿ ಕೊಂಡಿರುವ ವಾಹನ ಸವಾರರ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ನಗರದ ಸಂಚಾರ ಪೊಲೀಸರು ಎರಡನೇ ದಿನವಾದ ಮಂಗಳವಾರ 153 ಪ್ರಕರಣಗಳನ್ನು ದಾಖಲಿಸಿಕೊಂಡು, ₹76,500 ದಂಡ ಸಂಗ್ರಹಿಸಿದ್ದಾರೆ. ಸುಮಾರು 357 ವಾಹನಗಳ ತಪಾಸಣೆ ಮಾಡಲಾಗಿದೆ. ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಟ್ಯಾಬ್ ಕಳವು: ಮಾಜಿ ಗುತ್ತಿಗೆ ನೌಕರ ಬಂಧನ

ಬೆಂಗಳೂರು: ಜಯನಗರ 2ನೇ ಹಂತದ ಬಿಬಿಎಂಪಿ ಆರೋಗ್ಯ ಕೇಂದ್ರದಲ್ಲಿ ಟ್ಯಾಬ್ ಕಳವು ಮಾಡಿದ್ದ ಮಾಜಿ ಗುತ್ತಿಗೆ ನೌಕರ ಹೊಸಕೆರೆಹಳ್ಳಿಯ ಶ್ರೀನಿವಾಸ್ (37) ಅವರನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹19 ಲಕ್ಷ ಮೌಲ್ಯದ 62 ಟ್ಯಾಬ್, ಎರಡು ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ.

ಜಯನಗರ ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುವ ಆಶಾ ಕಾರ್ಯಕರ್ತೆಯರಿಗೆ ವಿತರಿಸಲೆಂದು ಟ್ಯಾಬ್ ಮತ್ತು ಬ್ಯಾಟರಿಗಳನ್ನು ಸರ್ಕಾರ ಖರೀದಿ ಮಾಡಿತ್ತು. ತಾತ್ಕಾಲಿಕ ಗೋದಾಮು ರೂಪದಲ್ಲಿ ಜಯನಗರ ಆರೋಗ್ಯ ಕೇಂದ್ರದಲ್ಲಿ ಸಂಗ್ರಹಿಸಿಟ್ಟುಕೊಂಡು ಹಂತಹಂತವಾಗಿ ವಿತರಿಸುತ್ತಿದ್ದರು. ಶ್ರೀನಿವಾಸ್ ಟ್ಯಾಬ್‌ಗಳನ್ನು ಕಳವು ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು ಜುಲೈ 13ರ ಜಯನಗರದ 2ನೇ ಹಂತದ ಖಾದಿ ಸ್ಟ್ರೀಟ್ ಹೋಟೆಲ್ ಮುಂಭಾಗದಲ್ಲಿ ಟ್ಯಾಬ್ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಶ್ರೀನಿವಾಸ್ ಅವರನ್ನು ಬಂಧಿಸಿದ್ದರು ಎಂದು ಹೇಳಿದರು.

2019ರಲ್ಲಿ ಗುತ್ತಿಗೆ ಆಧಾರದ ಮೇಲೆ ಆಂಬುಲೆನ್ಸ್ ಚಾಲಕನಾಗಿ ಸೇರಿದ್ದ ಶ್ರೀನಿವಾಸ್, ಎರಡು ವರ್ಷ ಕೆಲಸ ಮಾಡಿದ್ದರು. 2022ರ ಏಪ್ರಿಲ್‌ನಲ್ಲಿ ಕೆಲಸ ಬಿಟ್ಟಿದ್ದರು. ಸ್ವಂತ ಟ್ರಾವೆಲ್ ನಡೆಸುತ್ತಿದ್ದರು. ಇದರ ಜತೆಗೆ ಜಯನಗರ ಆರೋಗ್ಯ ಕೇಂದ್ರದಲ್ಲಿ ಅಧಿಕಾರಿ, ಸಿಬ್ಬಂದಿ ಪರಿಚಯವಿದ್ದ ಕಾರಣಕ್ಕೆ ಆಗಾಗ್ಗೆ ಬಂದು ಹೋಗುತ್ತಿದ್ದರು. ತುರ್ತಾಗಿ ಚಾಲಕ ಬೇಕಿದ್ದಾಗ ಶ್ರೀನಿವಾಸ್ ಅವರನ್ನೇ ಕರೆಯುತ್ತಿದ್ದರು. ಆಗ ಜಯನಗರ ಆರೋಗ್ಯ ಕೇಂದ್ರದಲ್ಲಿ ಟ್ಯಾಬ್‌ಗಳನ್ನು ದಾಸ್ತಾನು ಮಾಡಿದ್ದನ್ನು ಗಮನಿಸಿದ್ದ ಆರೋಪಿ ಕಳವು ನಡೆಸಿದ್ದರು ಎಂದು ಪೊಲೀಸರು ಹೇಳಿದರು.



ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಬುಧವಾರ ನಡೆದ ಪ್ರಾಪರ್ಟಿ ಪರೇಡ್‌ನಲ್ಲಿ ಸಿದ್ದಾಪುರ ಪೊಲೀಸ್ ಠಾಣಾ ಸರಹದ್ದಿನ ಪೊಲೀಸರು ವಶಪಡಿಸಿಕೊಂಡ ರೂ.19 ಲಕ್ಷದ 62 ಲೆನೊವೊ ಟ್ಯಾಬ್‌ಗಳನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಬ್ರೈನ್ ಮ್ಯಾಪಿಂಗ್ ಪರೀಕ್ಷೆಯಿಂದ ಕಳವು ಪ್ರಕರಣದ ಆರೋಪಿ ಪತ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಚಿನ್ನಾಭರಣ ದೋಚಿದ್ದ ಆರೋಪಿಯನ್ನು ಒಂದು ವರ್ಷದ ಬಳಿಕ ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಡಿಪಾಳ್ಯ ನಿವಾಸಿ ಶಾರದಮ್ಮ(67) ಬಂಧಿತ ಮಹಿಳೆ.

ಕೋಡಿಪಾಳ್ಯ ವಿನಾಯಕ ಲೇಔಟ್‌ನ ರಿಯಲ್ ಎಸ್ಟೇಟ್ ಏಜೆಂಟ್ ಶಶಿಕಾಂತ್ ಎಂಬುವರ ಮನೆಯಲ್ಲಿ 2023ರ ಜುಲೈನಲ್ಲಿ ಶಾರದಮ್ಮ ಚಿನ್ನಾಭರಣ ಕಳವು ಮಾಡಿದ್ದರು. ಆರೋಪಿಯಿಂದ ₹35 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಶಶಿಕಾಂತ್‌ರ ಪತ್ನಿ ಚಂದ್ರಿಕಾ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಅವರ ಮನೆಯಲ್ಲಿ ಶಾರದಮ್ಮ ಮನೆ ಕೆಲಸ ಮಾಡಿಕೊಂಡಿದ್ದರು.

ಈ ವೇಳೆ ದಂಪತಿ ಕೆಲಸಕ್ಕೆ ಹೋದಾಗ, ಅವರು ಕೀ ಇಡುತ್ತಿದ್ದ ಸ್ಥಳ ಗಮನಿಸಿ, 583 ಗ್ರಾಂ ಚಿನ್ನಾಭರಣ ದೋಚಿ ತಲೆ ಮರೆಸಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಈ ದೂರಿನ ಮೇರೆಗೆ ತನಿಖೆ ಕೈಗೊಂಡ ಪೊಲೀಸರು, ಶಾರದಮ್ಮ ಅವರನ್ನು ವಿಚಾರಣೆ ನಡೆಸಿದ್ದರು. ಆಗಲೂ ಆರೋಪಿ ಕಳ್ಳತನದ ಮಾಹಿತಿ ನೀಡಿರಲಿಲ್ಲ. ಘಟನಾ ಸ್ಥಳದ ಸಿಸಿ ಟಿ.ವಿ ಕ್ಯಾಮೆರಾ ಹಾಗೂ ಸ್ಥಳೀಯರ ಮಾಹಿತಿ ಪ್ರಕಾರ ಶಾರದಮ್ಮ ಅವರೇ ಕಳ್ಳತನ ಮಾಡಿದ್ದರು ಎಂಬುದಕ್ಕೆ ಪೊಲೀಸರಿಗೆ ಸುಳಿವು ಸಿಕ್ಕಿತ್ತು.

ಆರೋಪಿಗೆ ಬ್ರೈನ್ ಮ್ಯಾಪಿಂಗ್ ಮಾಡಲು ಕೋರ್ಟ್‌ಗೆ ಅರ್ಜಿ ಸಲ್ಲಿಸಿ, 2024 ಫೆಬ್ರುವರಿಯಲ್ಲಿ ಕೋರ್ಟ್‌ನಿಂದ ಅನುಮತಿ ಪಡೆದುಕೊಳ್ಳಲಾಗಿತ್ತು. ಮಡಿವಾಳದ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ (ಎಫ್‌ಎಸ್‌ಎಲ್) ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಳಪಡಿಸಿದಾಗ ಶಾರದಮ್ಮ ಅವರು ಚಿನ್ನಾಭರಣ ಕಳವು ಮಾಡಿರುವುದಾಗಿ ಹೇಳಿದ್ದರು. ಈ ಹೇಳಿಕೆ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ.



ಬಿಎಂಟಿಸಿ ನೌಕರ ಆತ್ಮಹತ್ಯೆ

ಬೆಂಗಳೂರು: ಶಾಂತಿನಗರ ಬಸ್ ನಿಲ್ದಾಣದ ಸ್ಟೋರ್ ರೂಂನಲ್ಲಿ ಬಿಎಂಟಿಸಿ ಸಿಬ್ಬಂದಿಯೊಬ್ಬರು ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿಎಂಟಿಸಿಯ ನೇಮಕಾತಿ ವಿಭಾಗದಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಮೋಹನ್(42) ಆತ್ಮಹತ್ಯೆ ಮಾಡಿಕೊಂಡವರು.

'ವಿಜಯಪುರ ಜಿಲ್ಲೆಯ ಕೌಲಗಿ ಗ್ರಾಮದ ಮೋಹನ್, ಕಳೆದ ಕೆಲವು ವರ್ಷಗಳಿಂದ ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದರು. ಕೌಟುಂಬಿಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು. 'ಸೋಮವಾರ ಸ್ಟೋರ್ ರೂಂನ ಕೀ ಪಡೆದು ಕೊಠಡಿಯ ಬಾಗಿಲು ಹಾಕಿಕೊಂಡಿದ್ದರು. ಅದಾದ ಮೇಲೆ ಹೊರಕ್ಕೆ ಬಂದಿರಲಿಲ್ಲ. ಅನುಮಾನಗೊಂಡ ಸಿಬ್ಬಂದಿ ಮಂಗಳವಾರ ಮಧ್ಯಾಹ್ನ ಕಿಟಕಿ ಮೂಲಕ ಪರಿಶೀಲನೆ ನಡೆಸಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.



ಪ್ರತಿಭಟನೆ

ನಿವೃತ್ತಿ ಹೊಂದಿದ ಹಾಗೂ ನಿವೃತ್ತಿ ಹೊಂದುತ್ತಿರುವ ಬಿಸಿಯೂಟ ನೌಕರರಿಗೆ ₹ 1 ಲಕ್ಷ ಮೊತ್ತದ ಇಡುಗಂಟು ನೀಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಸದಸ್ಯರು ಎರಡನೇ ದಿನವಾದ ಮಂಗಳವಾರ ಸಹ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ.

ಬಿಹಾರದ ಮೂವರ ಬಂಧನ

ಚಿನ್ನ, ಬೆಳ್ಳಿ ದರೋಡೆ ಮಾಡಿ ಪರಾರಿಯಾಗಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೀ ಎಸ್ಟೇಟ್ ಮಾಲೀಕರೊಬ್ಬರ ಫ್ಲ್ಯಾಟ್‌ನಲ್ಲಿ ಚಿನ್ನಾಭರಣ ದರೋಡೆ ಮಾಡಿದ್ದ ಬಿಹಾರದ ಮೂವರು ಆರೋಪಿಗಳನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಅಮೀರ್ ಅಲಿಯಾಸ್ ಅಜಿತ್ ಮುಖ್ಯ(24), ರಾಜ್ ಮುಖ್ಯ (21) ಹಾಗೂ ಶರವಣ ಮುಖ್ಯ (25) ಬಂಧಿತ ಆರೋಪಿಗಳು.

'ಆರೋಪಿಗಳಿಂದ ₹30 ಲಕ್ಷ ಮೌಲ್ಯದ 26 ಕೆ.ಜಿ ಬೆಳ್ಳಿ ಸಾಮಗ್ರಿ, 34 ಗ್ರಾಂ ಚಿನ್ನದ ಒಡವೆಗಳು, 5 ರೇಷ್ಮೆ ಸೀರೆಗಳು, 2 ಸ್ಮಾರ್ಟ್ ಫೋನ್‌ಗಳು, ಒಂದು ಕ್ಯಾಮೆರಾ, ವಿವಿಧ ಕಂಪನಿಯ 10 ವಾಚ್‌ಗಳು, 6 ಕೆ.ಜಿ ಕಂಚಿನ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಟೀ ಎಸ್ಟೇಟ್ ಮಾಲೀಕ ರಾಜೇಂದ್ರ ಅವರು ಸ್ಯಾಂಕಿ ರಸ್ತೆಯ ಸ್ಯಾಂಕಿ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ನೆಲೆಸಿದ್ದರು. ಆರೋಪಿಗಳು ಅವರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿ ಯಾಗಿದ್ದರು. ಈ ಸಂಬಂಧ ದಾಖಲಾದ ದೂರಿನ ಅನ್ವಯ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಾಜೇಂದ್ರ ಅವರು, ಅಡುಗೆ ಕೆಲಸಕ್ಕಾಗಿ ಅಜಿತ್ ಮುಖ್ಯ ಮತ್ತು ಮನೆಯ ಭದ್ರತೆಗಾಗಿ ರಾಜ್ ಮುಖ್ಯ ಎಂಬುವವರನ್ನು ನೇಮಕ ಮಾಡಿಕೊಂಡಿದ್ದರು. ಮಾಲೀಕರು ಜುಲೈ 7ರಂದು ಊಟಕ್ಕೆ ಹೊರಕ್ಕೆ ತೆರಳಿದ್ದರು. ಆಗ ಮನೆಯ ಕೀಯನ್ನು ರಾಜ್ ಮುಖ್ಯ ಅವರಿಗೆ ನೀಡಿದ್ದರು. ಮತ್ತಿಬ್ಬರು ಸ್ನೇಹಿತರನ್ನು ಕರೆಸಿಕೊಂಡಿದ್ದ ರಾಜ್ ಮುಖ್ಯ ಚಿನ್ನದ ಒಡವೆಗಳು, ಬೆಳ್ಳಿ ಸಾಮಗ್ರಿ, ದೇವರ ವಿಗ್ರಹಗಳು ಪೂಜೆ ಸಾಮಗ್ರಿಗಳು, ರೇಷ್ಮೆ ಸೀರೆಗಳನ್ನು ಕಳ್ಳತನ ಮಾಡಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ಕಳ್ಳತನ ಮಾಡಿದ ಮೇಲೆ ಆರೋಪಿಗಳು ಬಿಹಾರಕ್ಕೆ ತೆರಳಿ ತಲೆಮರೆಸಿಕೊಂಡಿದ್ದರು. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ಬಿಹಾರದಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆ ತರಲಾಗಿದೆ' ಎಂದು ಪೊಲೀಸರು ಹೇಳಿದರು.

ಡೆಂಗಿ: ಕಾಲೇಜು ಯುವತಿ ಸಾವು

ಕುದೂರು: ಡೆಂಗಿ ಜ್ವರಕ್ಕೆ ಚಿಕಿತ್ಸೆ ಪಡೆಯಲು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಕುದೂರಿನ ಯುವತಿ ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

ಪಟ್ಟಣದ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿ.ಕಾಂ ವಿದ್ಯಾರ್ಥಿನಿ, ಮಹಾತ್ಮನಗರ ಬಡಾವಣೆ ನಿವಾಸಿ ಹೇಮಾ (19) ಮೃತ ಯುವತಿ.

ಹೇಮಾ ಅವರ ಸಹೋದರ ಮತ್ತು ತಾಯಿಗೂ ಕೆಲ ದಿನಗಳ ಹಿಂದೆ ಡೆಂಗಿ ಜ್ವರ ಕಾಣಿಸಿತ್ತು. ತಾಯಿ ತುಮಕೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಸಹೋದರ ನೆಲಮಂಗಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಇದರ ಬೆನ್ನಲ್ಲೇ ಹೇಮಾಗೂ ಡೆಂಗಿ ಜ್ವರ ಬಂದಿತ್ತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಡೆಂಗಿ ಜ್ವರದಿಂದಲೇ ಹೇಮಾ ಮೃತಪಟ್ಟಿರುವುದು ಇನ್ನೂ ಖಚಿತವಾಗಿಲ್ಲ. ಪರಿಶೀಲಿಸಲು ಮಾಗಡಿ ತಾಲ್ಲೂಕು ಆರೋಗ್ಯಾಧಿಕಾರಿಗೆ ಸೂಚಿಸಿದ್ದೇನೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್ ಎಂದರು.

ನಕಲಿ ಎನ್‌ಒಸಿ ಸೃಷ್ಟಿಸಿ ಕಾರು ಮಾರಾಟ

ಬೆಂಗಳೂರು: ಸಾಲ ಪಾವತಿಸದೆ ಬಾಕಿ ಉಳಿಸಿಕೊಂಡಿದ್ದ ಕಾರುಗಳನ್ನು ಅಡಮಾನ ಇಟ್ಟುಕೊಂಡು, ಅವುಗಳಿಗೆ ನಕಲಿ ಎನ್‌ಒಸಿ ಸೃಷ್ಟಿಸಿ ಮಾರಾಟ ಮಾಡಿ ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಗೋವಾದ ಆಸ್ಟಿನ್ ಕಾರಾಡೋಸ್ ಅಲಿಯಾಸ್ ಚಿಂಟು(37) ಮತ್ತು ನಗರದ ಫ್ರೇಜರ್‌ಟೌನ್ ನಿವಾಸಿ ಸೈಯದ್ ರಿಯಾಜ್(35) ಬಂಧಿತರು.

ಆರೋಪಿಗಳಿಂದ ₹2.56 ಕೋಟಿ ಮೌಲ್ಯದ ರೇಂಜ್ ರೋವರ್, ಜಾಗ್ವಾರ್ ಸೇರಿದಂತೆ ವಿವಿಧ ಕಂಪನಿಯ 17 ಕಾರುಗಳನ್ನು ಜಪ್ತಿ ಮಾಡಲಾಗಿದೆ. ಇಬ್ಬರು ಆರೋಪಿಗಳ ವಿರುದ್ಧ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

'ಕಳವು ಮಾಡಿದ್ದ ಕಾರುಗಳು, ವಿಮೆ ಪಾವತಿಸದ ಹಾಗೂ ಸಾಲ ಬಾಕಿಯಿರುವ ವಾಹನಗಳನ್ನು ಆರೋಪಿ ಸೈಯದ್ ರಿಯಾಜ್ ಕಡಿಮೆ ಮೊತ್ತಕ್ಕೆ ಖರೀದಿ ಅಥವಾ ಅಡಮಾನ ಇಟ್ಟುಕೊಳ್ಳುತ್ತಿದ್ದರು. ನಂತರ, ಕಾರಿನ ಮೇಲೆ ಯಾವುದೇ ಸಾಲ ಇಲ್ಲದಂತೆ ನಕಲಿ ದಾಖಲೆ ಸೃಷ್ಟಿಸುತ್ತಿದ್ದರು. ಬ್ಯಾಂಕ್‌ಗಳು ಹಾಗೂ ಫೈನಾನ್ಸ್‌ಗಳಿಂದ ಎನ್‌ಒಸಿ ಪಡೆದು ಹೊರ ರಾಜ್ಯಗಳ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು. ಇದಕ್ಕೆ ಕೆಲವರು ನೆರವು ನೀಡುತ್ತಿದ್ದರು' ಎಂದು ಪೊಲೀಸರು ಹೇಳಿದರು.


ರಿಯಾಜ್


ಆಸ್ಟಿನ್

ಇನ್ನೊಂದು ಪ್ರಕರಣದಲ್ಲಿ ಬಂಧಿತ ಆರೋಪಿ ಗೋವಾದ ಆಸ್ಟಿನ್, ಮೈಸೂರಿನ ಉದ್ಯಮಿಯೊಬ್ಬರಿಂದ ರೇಂಜ್ ರೋವರ್ ಕಾರು ಖರೀದಿಸಿದ್ದರು. ಈ ಕಾರಿಗೆ ಹರಿಯಾಣ ನೋಂದಣಿಯ ಕಾರಿನ ನಂಬರ್ ಪ್ಲೇಟ್ ಅಳವಡಿಸಿ, ನಕಲಿ ದಾಖಲೆ ಸೃಷ್ಟಿಸಿ ಹಣಕಾಸು ಸಂಸ್ಥೆಗಳಿಂದ ಎನ್‌ಒಸಿ ಪಡೆದು, ದೆಹಲಿಯ ಗ್ರಾಹಕರೊಬ್ಬರಿಗೆ ಮಾರಾಟ ಮಾಡಿದ್ದರು ಎಂದು ಹೇಳಿದರು.

₹12 ಕೋಟಿ ಅಕ್ರಮ ವರ್ಗಾವಣೆ

ಕೆಐಎಡಿಬಿ: 13 ವರ್ಷ ಕಳೆದರೂ ಪಿಎನ್‌ಬಿಯಿಂದ ವಸೂಲಾಗದ 'ನಿಶ್ಚಿತ ಠೇವಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿಮೂರು ವರ್ಷಗಳ ಹಿಂದೆ ಒಂದು ವರ್ಷಕ್ಕೆ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ (ಪಿಎನ್‌ಬಿ) ನಿಶ್ಚಿತ ಠೇವಣಿ ಇಟ್ಟಿದ್ದ ತನ್ನ ₹25 ಕೋಟಿಯಲ್ಲಿ, ₹12 ಕೋಟಿಯನ್ನು ಬಡ್ಡಿ ಸಹಿತ ವಾಪಸ್ ಪಡೆಯಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹರಸಾಹಸ ಪಡುತ್ತಿದೆ.

ವಿಧಾನಮಂಡಲದ ಸಾರ್ವಜನಿಕ ಲೆಕ್ಕಪರಿಶೋಧನಾ ಸಮಿತಿಯ (ಪಿಎಸಿ) ಸಭೆಯಲ್ಲಿಯೂ ಈ ವಿಷಯ ಚರ್ಚೆಗೆ ಬಂದಿದ್ದು, ಹಣ ವಾಪಸ್ ಮಾಡುವಂತೆ ಪಿಎನ್‌ಬಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ.

ಅಲ್ಲದೆ, ಪಿಎನ್‌ಬಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅವರಿಗೆ ಪತ್ರ ಬರೆದಿರುವ ಆರ್ಥಿಕ ಇಲಾಖೆಯ ಕಾರ್ಯದರ್ಶಿ, ಪಿಎನ್‌ಬಿ ಅಧ್ಯಕ್ಷರ ಜೊತೆ ಚರ್ಚಿಸಿ ಕೆಐಎಡಿಬಿಗೆ ಬರಬೇಕಾದ ₹12 ಕೋಟಿಯನ್ನು ತಕ್ಷಣ ವಾಪಸ್ ಮಾಡಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಏನಿದು ಪ್ರಕರಣ?: ಕೆಐಎಡಿಬಿ 2011ರ ಸೆ. 14ರಂದು ₹25 ಕೋಟಿಯನ್ನು ಶೇ 9.75ರ ಬಡ್ಡಿ ದರದಲ್ಲಿ ರಾಜಾಜಿನಗರದ ಪಿಎನ್‌ಬಿ ಶಾಖೆಯಲ್ಲಿ ಒಂದು ವರ್ಷಕ್ಕೆ ನಿಶ್ಚಿತ ಠೇವಣಿ ಇಟ್ಟಿತ್ತು. ಠೇವಣಿ ಅವಧಿ ಪೂರ್ಣಗೊಂಡ ಬಳಿಕ ₹27.52 ಕೋಟಿ 2012ರ ಸೆ. 14ರಂದು ಕೆಐಎಡಿಬಿಗೆ ಮರು ಪಾವತಿಸಲಾಗುವುದು. ತಪ್ಪಿದರೆ, ಪಾವತಿ ಮಾಡುವ ದಿನಗಳಿಗೆ ಶೇ 18ರಂತೆ ಬಡ್ಡಿ ಪಾವತಿಸುವುದಾಗಿ ಬ್ಯಾಂಕಿನ ವ್ಯವಸ್ಥಾಪಕರು ಲಿಖಿತ ಭರವಸೆ ನೀಡಿದ್ದರು.

ಆದರೆ, ಈ ಹಣವನ್ನು ತಮಿಳುನಾಡಿನ ಸೇಲಂನ ಶಂಕರಿ ವೆಸ್ಟ್‌ನಲ್ಲಿ ಶಾಖೆಗೆ ಅಕ್ರಮವಾಗಿ ವರ್ಗಾವಣೆ ಮಾಡಿ, ಅಲ್ಲಿಂದ ₹13 ಕೋಟಿ ಮತ್ತು ₹12 ಕೋಟಿ ಎರಡು ನಿಶ್ಚಿತ ಠೇವಣಿಯ ಸ್ವೀಕೃತಿಗಳನ್ನು ಬ್ಯಾಂಕಿನ ವ್ಯವಸ್ಥಾಪಕರು ಕೆಐಎಡಿಬಿಗೆ ನೀಡಿದ್ದರು. ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ಹಣ ವರ್ಗಾವಣೆಯು ಬ್ಯಾಂಕಿನ ಆಂತರಿಗೆ ವಿಚಾರ ಎಂಬ ಕಾರಣಕ್ಕೆ ಕೆಐಎಡಿಬಿ ಯಾವುದೇ ತಗಾದೆ ಮಾಡಿರಲಿಲ್ಲ.

ಠೇವಣಿ ಅವಧಿ ಪೂರ್ಣಗೊಂಡ ಹಣವನ್ನು ಮರುಪಾವತಿಸುವಂತೆ ಕೆಐಎಡಿಬಿ ಅಧಿಕಾರಿಗಳು 2012ರ ಸೆ. 7ರಂದು ರಾಜಾಜಿನಗರ ಶಾಖೆಗೆ ತಿಳಿಸಿದ್ದರು. ಆಗ, ಸೇಲಂನ ಶಂಕರಿ ವೆಸ್ಟ್ ಶಾಖೆಯವರು ಸೆ. 17ರಂದು ₹13 ಕೋಟಿ ಮತ್ತು ಅದರ ಬಡ್ಡಿಯನ್ನು ಮರು ಪಾವತಿಸಿದ್ದಾರೆ. ₹12 ಕೋಟಿ ಮರು ಪಾವತಿಯಾಗದ ಕಾರಣ ಸೆ. 21ರಂದು ರಾಜಾಜಿನಗರ ಶಾಖೆಯ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದ ಕೆಐಎಡಿಬಿ, ಹಣ ಮರು ಪಾವತಿಸಬೇಕು, ತಪ್ಪಿದರೆ ಬಡ್ಡಿಯನ್ನು ದಂಡ ರೂಪದಲ್ಲಿ ಪಾವತಿಸಬೇಕು ಎಂದೂ ತಿಳಿಸಿತ್ತು.

ಆ ಪತ್ರಕ್ಕೆ ಸೆ. 29ರಂದು ಉತ್ತರಿಸಿದ್ದ ರಾಜಾಜಿನಗರ ಶಾಖೆಯ ವ್ಯವಸ್ಥಾಪಕರು, ₹12 ಕೋಟಿಯನ್ನು ಸೇಲಂನಲ್ಲಿ ಶಂಕರಿ ವೆಸ್ಟ್ ಶಾಖೆಗೆ ವರ್ಗಾವಣೆ ಮಾಡಿರುವುದರಿಂದ ಆ ಶಾಖೆಯ ಜೊತೆ ವ್ಯವಹರಿಸುವತೆ ಸಲಹೆ ನೀಡಿದ್ದರು. ಅದಕ್ಕೆ ಒಪ್ಪದ ಕೆಐಎಡಿಬಿ, ರಾಜಾಜಿನಗರ ಶಾಖೆಯ ಹೆಸರಿನಲ್ಲಿ ₹25 ಕೋಟಿಯನ್ನು ಸ್ವೀಕರಿಸಿರುವುದರಿಂದ, ಅವರೇ ₹12 ಕೋಟಿ ಮತ್ತು ಬಡ್ಡಿ ಮರು ಪಾವತಿಸಬೇಕು ಎಂದು ಒತ್ತಾಯಿಸುತ್ತಲೇ ಬಂದಿದೆ.

ಕೆಐಎಡಿಬಿ ಪತ್ರಕ್ಕೆ ಉತ್ತರಿಸಿದ್ದ ರಾಜಾಜಿನಗರ ಶಾಖೆಯ ವ್ಯವಸ್ಥಾಪಕರು, ಶಂಕರಿ ವೆಸ್ಟ್ ಶಾಖೆಯು ಶೇ 9.75 ಬಡ್ಡಿಯ ಭರವಸೆ ನೀಡಿದ್ದರಿಂದ ಮಂಡಳಿಯ ಸೂಚನೆಯಂತೆ ಹಣವನ್ನು ಆ ಶಾಖೆಗೆ ವರ್ಗಾವಣೆ ಮಾಡಲಾಗಿದೆ ಎಂದೂ ಹೇಳಿದ್ದರು.

ಈ ಪ್ರಕರಣದ ತನಿಖೆಯನ್ನು ಪಿಎನ್‌ಬಿಯವರು ಸಿಬಿಐಗೆ ವಹಿಸಿದ್ದು, 2013ರಲ್ಲಿಯೇ ಸಿಬಿಐ ತನಿಖಾ ವರದಿಯನ್ನು ಕೆಐಎಡಿಬಿಗೆ ಕಳುಹಿಸಿದೆ. ₹12 ಕೋಟಿ ಮತ್ತು ಬಡ್ಡಿ ಮೊತ್ತದ ವಸೂಲಿಗೆ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ವಸೂಲಿ ದಾವೆ ದಾಖಲಿಸಿದ ಕೆಐಎಡಿಬಿಯು, ಹಣ ಮರಳಿ ಪಡೆಯಲು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಪ್ರಕರಣ ಇನ್ನೂ ವಿಲೇವಾರಿ ಆಗಿಲ್ಲ.

ವಿವಿಧ ನಿಗಮಗಳಲ್ಲಿ ಬಹುಕೋಟಿ ಅಕ್ರಮ

ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿ ಹಾಗೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿವಿಧ ನಿಗಮಗಳಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆಯ ವಿವರವನ್ನು ಮುಖ್ಯಮಂತ್ರಿ ಸಚಿವಾಲಯ ಬಿಡುಗಡೆ ಮಾಡಿದೆ

ನಿಗಮ	ಪ್ರಕರಣ	ಭಾಗಿಯಾಗಿರುವ ಬ್ಯಾಂಕ್	ತನಿಖಾ ಏಜೆನ್ಸಿ
ಭೋವಿ ನಿಗಮ	₹87 ಕೋಟಿ ವಿವಿಧ ಖಾತೆಗಳಿಗೆ	ಯಸ್ ಬ್ಯಾಂಕ್, ಯಾದಗಿರಿ ಶಾಖೆ	ಸಿಐಡಿ
ಕೃಷಿ ಮಾರುಕಟ್ಟೆ ಮಂಡಳಿ	₹47.16 ಕೋಟಿ ನಿಶ್ಚಿತ ಠೇವಣಿ ಚಾಲ್ತಿ ಖಾತೆಗಳಿಗೆ	ಸಿಂಡಿಕೇಟ್ ಬ್ಯಾಂಕ್	ಸಿಬಿಐ, ಬ್ಯಾಂಕಿನವರು ಇಲಾಖೆಗೆ ಹಣ ಮರುಪಾವತಿಸಿದ್ದಾರೆ
ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ	ವಿಜಯಾ ಬ್ಯಾಂಕಿನಲ್ಲಿದ್ದ ₹22.43 ಕೋಟಿ ಎಸ್‌ಬಿಐಗೆ ವರ್ಗಾಯಿಸಿ ಅಕ್ರಮ	ಎಸ್‌ಬಿಐ, ಬೆಂಗಳೂರು	ಸಿಐಡಿ 3 ಚಾರ್ಜ್ ಶೀಟ್ ಸಲ್ಲಿಸಿದ್ದು, ₹2.50 ಕೋಟಿಯ ಮೌಲ್ಯದ ಚರಾಸ್ತಿ ವಶ
ಅಂಬೇಡ್ಕರ್ ನಿಗಮ	ಬ್ಯಾಂಕಿನಲ್ಲಿದ್ದ ₹4.95 ಕೋಟಿ 10 ಜನರಿಗೆ ವರ್ಗಾವಣೆ	ಕೆನರಾ ಬ್ಯಾಂಕ್ ಕಲ್ಕೆರೆ ಶಾಖೆ	ಇಲಾಖಾ ತನಿಖೆ, ವಾಲ್ಮೀಕಿ ನಿಗಮದ ಹಗರಣದ ಆರೋಪಿ ಪದ್ಮನಾಭ ಅವರನ್ನು ಈ ಪ್ರಕರಣದಲ್ಲಿ ಅಮಾನತು.ಅಂಬೇಡ್ಕರ್ ನಿಗಮದ ಅಕ್ರಮದಲ್ಲಿ ತಪ್ಪಿತಸ್ಥರು ಎಂದು ಸಾಬೀತಾಗಿಲ್ಲ
ದೇವರಾಜ ಅರಸು ಟ್ರಕ್ ಟರ್ಮಿನಲ್	₹47 ಕೋಟಿ ಅಕ್ರಮ. ಅಧ್ಯಕ್ಷರಾಗಿದ್ದ ವೀರಯ್ಯ ಖಾತೆಗೆ ₹3 ಕೋಟಿ	----	ಸಿಐಡಿ, ಮಾಜಿ ಅಧ್ಯಕ್ಷ ಮತ್ತು ಎಂಡಿ ಬಂಧನ
ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ	₹10 ಕೋಟಿ ಅಕ್ರಮ ವರ್ಗಾವಣೆ	ಎಸ್‌ಬಿಎಂ ಬ್ಯಾಂಕ್	ಸಿಐಡಿಯಿಂದ ಸಿಬಿಐಗೆ ವರ್ಗಾವಣೆ

'ಹಣ ನಿರ್ವಹಣೆಯಲ್ಲಿ ಲೋಪ'

ಕೆಐಎಡಿಬಿಯ ಹಣ ನಿರ್ವಹಣೆ ಲೋಪದ ಕಾರಣದಿಂದ ನಿಶ್ಚಿತ ಠೇವಣಿಯ ಅವಧಿ ಮುಗಿದ ನಂತರವೂ ಹಣ ನಗದೀಕರಿಸಲು ಸಾಧ್ಯವಾಗಿಲ್ಲ ಎಂದು ಲೆಕ್ಕ ಪರಿಶೋಧನೆಯಲ್ಲಿ ಗೊತ್ತಾಗಿದೆ. ಬ್ಯಾಂಕಿನವರು ವಾರ್ಷಿಕ ಶೇ 9.60 ಬಡ್ಡಿ ನೀಡುವುದಾಗಿ ಹೇಳಿದರೂ ಶೇ 9.75 ಬಡ್ಡಿ ದರದ ನಿರೀಕ್ಷೆಯಲ್ಲಿ ₹25 ಕೋಟಿಯನ್ನು ರಾಜಾಜಿನಗರ ಶಾಖೆಯಲ್ಲಿ ಕೆಐಎಡಿಬಿ ಇಟ್ಟಿತ್ತು. ಆದರೆ, ನಿರೀಕ್ಷೆಗೆ ಪೂರಕವಾಗಿ ಬ್ಯಾಂಕ್ ಬದ್ಧತೆ ನೀಡಿರಲಿಲ್ಲ. ನಿಶ್ಚಿತ ಠೇವಣಿಯ ಅವಧಿ ಪೂರ್ಣಗೊಂಡ ಬಳಿಕ, ಹಣ ಪಾವತಿಸದೇ ಇದ್ದರೆ ವಾರ್ಷಿಕ ಶೇ 18ರಂತೆ ಬಡ್ಡಿ ದರ ನೀಡುವುದಾಗಿ ಯಾವುದೇ ಬ್ಯಾಂಕ್ ವಾಗ್ದಾನ ನೀಡುವುದಿಲ್ಲ. ಹೀಗಾಗಿ, 'ಅಷ್ಟು ಬಡ್ಡಿ ನೀಡುತ್ತೇವೆ' ಎಂದಿರುವುದೇ ಸಂದೇಹ ಮೂಡಿಸುವಂತಿದೆ. ಅಲ್ಲದೆ, ಇನ್ನೊಂದು ಬ್ಯಾಂಕಿನ ನಿಶ್ಚಿತ ಠೇವಣಿ ಸ್ವೀಕೃತಿಯನ್ನು ಕೆಐಎಡಿಬಿ ಒಪ್ಪಿಕೊಂಡಿರುವುದು ಯಾಕೆ ಎನ್ನುವುದಕ್ಕೆ ಯಾವುದೇ ಸ್ಪಷ್ಟತೆ ಇಲ್ಲ ಎಂದೂ ಲೆಕ್ಕ ಪರಿಶೋಧನಾ ವರದಿಯಲ್ಲಿದೆ.

'ರಾಜ್ಯದ ನ್ಯಾಯಮೂರ್ತಿಗಳ ನಿರ್ಲಕ್ಷ್ಯ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ನ್ಯಾಯಮೂರ್ತಿಗಳು ಅರ್ಹತೆಯಲ್ಲಿ ಅತ್ಯುತ್ತಮ ಎನಿಸಿಕೊಂಡಿದ್ದರೂ ಅಂತಹವರಿಗೆ ದೇಶದ ಇತರ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಾಗುವ ಅವಕಾಶ ದೊರೆಯುತ್ತಿಲ್ಲ' ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

'ಇಂತಹ ನಿರ್ಲಕ್ಷ್ಯ ನ್ಯಾಯಾಂಗದ ಉನ್ನತ ಶ್ರೇಣಿಯಲ್ಲಿ ವೈವಿಧ್ಯತೆ ಮತ್ತು ಪ್ರಾದೇಶಿಕ ಪ್ರಾತಿನಿಧ್ಯದ ಕೊರತೆಯನ್ನು ಸೂಚಿಸುತ್ತದೆ. ರಾಜ್ಯದ ಹಿರಿಯ ನ್ಯಾಯಮೂರ್ತಿಗಳಿಗೆ ಸೂಕ್ತ ಸ್ಥಾನಮಾನ, ಅವಕಾಶ ನೀಡದ ಈ ಪ್ರವೃತ್ತಿ ಒಪ್ಪುವಂತಹುದಲ್ಲ. ಕೂಡಲೇ, ಈ ಸಮಸ್ಯೆಯನ್ನು ಕೂಲಂಕಶವಾಗಿ ಪರಿಶೀಲಿಸಿ ಅಸಮತೋಲನ ಪರಿಹರಿಸಲು ಕೊಲಿಜಿಯಂ ಮುಖ್ಯಸ್ಥರಾದ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಕರ್ನಾಟಕದ ಗಣನೀಯ ಸಂಖ್ಯೆಯ ವಕೀಲರು ವೃತ್ತಿ ಬದುಕಿನಲ್ಲಿ ಅಭೂತಪೂರ್ವ ಕಾನೂನು ಚಾತುರ್ಯ ಮತ್ತು ನ್ಯಾಯಾಂಗದ ಮನೋಧರ್ಮವನ್ನು ಎತ್ತಿಹಿಡಿಯುವಲ್ಲಿ ಬದ್ಧತೆ ಪ್ರದರ್ಶಿಸಿದ್ದಾರೆ. ಕರ್ನಾಟಕವೂ ಸೇರಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಪ್ರದೇಶಗಳಿಂದ ಅರ್ಹರನ್ನು ಗುರುತಿಸಲು ಮತ್ತು ಉತ್ತೇಜಿಸಲು ತಾವು ಸಂಘಟಿತ ಪ್ರಯತ್ನ ಮಾಡುತ್ತೀರಿ' ಎಂದಿದ್ದಾರೆ.

'ಡಬಲ್ ಡೆಕರ್' ರಸ್ತೆಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ಮೆಟ್ರೊ ಮಾರ್ಗದಲ್ಲಿ 'ಡಬಲ್ ಡೆಕರ್' ಮೇಲ್ಸೇತುವೆ ರಸ್ತೆಗೆ ಬುಧವಾರ ಚಾಲನೆ ದೊರೆಯಲಿದೆ.

'ನಮ್ಮ ಮೆಟ್ರೊ' ಆರ್.ವಿ. ರಸ್ತೆ – ಬೊಮ್ಮಸಂದ್ರ ಗುಲಾಬಿ ಮಾರ್ಗದಲ್ಲಿ ಮೇಲ್ಸೇತುವೆ ರಸ್ತೆ ಮತ್ತು ಅದರ ಮೇಲೆ ಮೆಟ್ರೊ ರೈಲು ಸಂಚಾರ ವ್ಯವಸ್ಥೆ ಇರುವ 'ರೋಡ್ ಕಂ ರೇಲರ್' (ಡಬಲ್ ಡೆಕರ್) ನಿರ್ಮಾಣಗೊಳ್ಳುತ್ತಿದೆ. ಅದರಲ್ಲಿ ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್ ಕಡೆಗೆ ಬರುವ ಮೇಲ್ಸೇತುವೆ ರಸ್ತೆ ಕಾಮಗಾರಿ ಮುಗಿದು ಹಲವು ತಿಂಗಳು ಕಳೆದಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಸ್ತೆಯಲ್ಲಿ ಬುಧವಾರ ನಡೆದು ನಂತರ ವಾಹನಗಳ ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ.



ಸಿಗ್ನಲ್ ರಹಿತ ಸಂಚಾರ: 'ಡಬಲ್ ಡೆಕರ್'ನ ಮೇಲ್ಸೇತುವೆ ಸಿಗ್ನಲ್ ರಹಿತವಾಗಿರುವುದರಿಂದ ವಾಹನಗಳು ತಡೆರಹಿತವಾಗಿ ಸಂಚರಿಸಲಿವೆ. ಆದರೆ, ವಾಹನಗಳು ಒಮ್ಮೆ ಮೇಲ್ಸೇತುವೆ ಏರಿದರೆ 3.3 ಕಿ.ಮೀ. ಮಧ್ಯೆ ಎಲ್ಲಿಯೂ ಇಳಿಯಲು ಅವಕಾಶವಿಲ್ಲ. ಆದರೆ, ತಿರುಗಿ ಬರಲು ಮೂರು ಯು ಟರ್ನ್‌ಗಳನ್ನು ಒದಗಿಸಲಾಗಿದೆ. ಈ 'ಡಬಲ್ ಡೆಕರ್' ದಕ್ಷಿಣ ಭಾರತದಲ್ಲಿ ಮೊದಲನೆಯದು ಎನ್ನಲಾಗಿದೆ.

ಮೇಲ್ಸೇತುವೆ ರಸ್ತೆ ವಾಹನಗಳಿಗೆ ಮುಕ್ತಗೊಂಡರೆ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ತೆರಳುವವರಿಗೆ ಭಾರಿ ಉಪಯೋಗವಾಗಲಿದೆ. ಜೊತೆಗೆ ಎಚ್‌ಎಸ್‌ಆರ್ ಬಡಾವಣೆ ಕಡೆಗೆ, ಬಿಟಿಎಂ ಲೇಔಟ್ ಕಡೆಗೆ ಹೋಗುವವರಿಗೆ ಸಮಯ ಉಳಿತಾಯವಾಗಲಿದೆ.

ಪಿಆರ್‌ಆರ್: 71 ಎಕರೆ ಸ್ವಾಧೀನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣಕ್ಕೆ 71 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಗಳವಾರ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.

ಎರಡು ವರ್ಷಗಳ ಹಿಂದೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದ ಬಿಡಿಎ, ಭೂಸ್ವಾಧೀನಕ್ಕೆ ಸರ್ಕಾರ ಸೂಚಿಸಿರುವುದರಿಂದ ಪ್ರಕ್ರಿಯೆ ಪೂರ್ಣಗೊಳಿಸಲು ಸಜ್ಜಾಗಿದೆ.

258 ಆಸ್ತಿಗಳ ಮಾಲೀಕರಿಗೆ ಬಿಡಿಎ ದಾಖಲೆಗಳನ್ನು ಸಲ್ಲಿಸಲು ಸಾರ್ವಜನಿಕ ಪ್ರಕಟಣೆ ನೀಡಿದ್ದು, ಯಾವುದಾದರೂ ಆಕ್ಷೇಪಣೆಗಳಿದ್ದರೆ ಸಲ್ಲಿಸಲು ಸೂಚಿಸಿದೆ. ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಹಳೆ ಮದ್ರಾಸ್ ರಸ್ತೆ ಮತ್ತು ಹೊಸೂರು ರಸ್ತೆಗಳಲ್ಲಿ 'ಕ್ಲೋವರ್ ಲೀಫ್ ಇಂಟರ್‌ಚೇಂಜ್' ನಿರ್ಮಿಸಲು 2022ರ ಏಪ್ರಿಲ್‌ನಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು.

72 ಕಿ.ಮೀ ಉದ್ದದ ಪಿಆರ್‌ಆರ್‌ಗೆ 1,810 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು 17 ವರ್ಷಗಳ ಹಿಂದೆ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ರೈತರು ಇನ್ನೂ ಪರಿಹಾರಕ್ಕಾಗಿ ಕಾಯುತ್ತಿದ್ದಾರೆ. ಪಿಆರ್‌ಆರ್ ಯೋಜನೆಗೆ ₹27 ಸಾವಿರ ಕೋಟಿ ವೆಚ್ಚ ಮಾಡಲು ಸರ್ಕಾರ ಉದ್ದೇಶಿಸಿದ್ದು, ಭೂಸ್ವಾಧೀನದ ಪರಿಹಾರದ ಬಗ್ಗೆ ಸ್ಪಷ್ಟತೆ ಹೊಂದಿಲ್ಲ.

ಮಿಟ್ಟಗಾನಹಳ್ಳಿ -ಕಣ್ಣೂರು ಕಲ್ಲಿನ ಕ್ವಾರಿಯಲ್ಲಿ ತ್ಯಾಜ್ಯ ಭರ್ತಿಗೆ ವಿರೋಧ

ಕಸದ ಲಾರಿ ತಡೆದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಿಟ್ಟಗಾನಹಳ್ಳಿ-ಕಣ್ಣೂರು ಕಲ್ಲಿನ ಕ್ವಾರಿಯಲ್ಲಿ ನಗರದ ತ್ಯಾಜ್ಯವನ್ನು ಸುರಿಯುವುದನ್ನು ವಿರೋಧಿಸಿ ಕಣ್ಣೂರು ಮತ್ತು ಮಿಟ್ಟಗಾನಹಳ್ಳಿ, ಬಂಡೆ ಹೊಸೂರು, ಕಾಡುಸೊಣ್ಣಪ್ಪನಹಳ್ಳಿ ಗ್ರಾಮಸ್ಥರು ಮಂಗಳವಾರ ಪ್ರತಿಭಟನೆ ನಡೆಸಿದರು. ಕಲ್ಲಿನ ಕ್ವಾರಿಯೊಳಗೆ ಕಸದ ವಾಹನಗಳು ಪ್ರವೇಶಿಸದಂತೆ ರಸ್ತೆಗೆ ಅಡ್ಡಲಾಗಿ ಕಲ್ಲು, ಮಣ್ಣು ಸುರಿದು ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಬಿಎಂಪಿ ಅವೈಜ್ಞಾನಿಕವಾಗಿ ಕಸ ಸುರಿಯುತ್ತಿದ್ದು ಕಸದಿಂದ ರಾಸಾಯನಿಕ ಉತ್ಪತ್ತಿಯಾಗಿ ಸುತ್ತಮುತ್ತಲಿನ ಸುಮಾರು ಹತ್ತಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕೊಳವೆಬಾವಿ, ಕೆರೆ, ಕುಂಟೆಗಳಲ್ಲಿ ಕಲುಷಿತ ನೀರು ಸೇರುತ್ತಿದೆ. ಜಾನುವಾರುಗಳು ಸಾವಿಗೀಡಾಗಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಮಿಟ್ಟಗಾನಹಳ್ಳಿ ಕಣ್ಣೂರು ಕಲ್ಲುಕ್ವಾರಿಯಲ್ಲಿ 2016 ರಿಂದಲೂ ವೈಜ್ಞಾನಿಕವಾಗಿ ತ್ಯಾಜ್ಯ ಸುರಿಯುವುದಾಗಿ ಗ್ರಾಮಸ್ಥರ ಸಭೆಯಲ್ಲಿ ಹೇಳಲಾಗಿತ್ತು. ಆದರೆ ಕಸವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಅಲ್ಲಿ ಉತ್ಪತ್ತಿಯಾಗುತ್ತಿರುವ ಅಪಾಯಕಾರಿ ರಾಸಾಯನಿಕವನ್ನು ಸಂಸ್ಕರಣೆ ಮಾಡುತ್ತಿಲ್ಲ. ತ್ಯಾಜ್ಯದಿಂದಾಗಿ ಜೀವನ ನರಕಯಾತನೆ ಅನುಭವಿಸುವಂತಾಗಿದೆ ಎಂದು ದೂರಿದರು.

ಶಾಶ್ವತ ಪರಿಹಾರ ಭರವಸೆ ನೀಡುವವರಿಗೂ ಮಿಟ್ಟಗಾನಹಳ್ಳಿ ಕಸ ಸುರಿಯಲು ಅವಕಾಶ ನೀಡುವುದಿಲ್ಲ. ಸಮಸ್ಯೆಗಳನ್ನು ತ್ವರಿತವಾಗಿ ಸರಿಪಡಿಸಬೇಕು. ಉಸ್ತುವಾರಿ ಸಚಿವ ಡಿ.ಕೆ.ಶಿವಕುಮಾರ್, ಬಿಬಿಎಂಪಿ ಆಯುಕ್ತರು ಎಂಟು ತಿಂಗಳ ಹಿಂದೆ ಭೇಟಿನೀಡಿ ಸಮಸ್ಯೆಗೆ ಪರಿಹಾರ ದೊರಕಿಸುವ ಭರವಸೆ ನೀಡಿದ್ದರು. ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಒದಗಿಸುವ ಆಶ್ವಾಸನೆ ಕೊಟ್ಟಿದ್ದರು. ಯಾವುದೂ ಈಡೇರಿಸಿಲ್ಲ ಎಂದು ಕಣ್ಣೂರು ಗ್ರಾಮ ಪಂಚಾಯತಿ ಅಧ್ಯಕ್ಷ ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಕಣ್ಣೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಲಲಿತ ದೇವರಾಜ್, ಸದಸ್ಯರಾದ ಬೈರೇಗೌಡ, ಚೈತ್ರಾ ರಾಘವೇಂದ್ರ, ಶೋಭಾ ಪ್ರಕಾಶ್, ಯಶೋಧಮ್ಮ ಶ್ರೀನಿವಾಸ್, ಕಲಾವತಿ ಶ್ರೀರಾಮ್, ಶಶಿಕಲಾ ಹರೀಶ್ ಮುಖಂಡರಾದ ಮೋಹನ್ ರೆಡ್ಡಿ, ಚಿಕ್ಕಗುಬ್ಬಿ ಹರೀಶ್ ಬ್ರಹ್ಮಾನಂದರೆಡ್ಡಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಕಣ್ಣೂರು ಮತ್ತು ಮಿಟ್ಟಗಾನಹಳ್ಳಿ, ಬಂಡೆ ಹೊಸೂರು, ಕಾಡುಸೊಣ್ಣಪ್ಪನಹಳ್ಳಿ ಗ್ರಾಮಸ್ಥರು ಕಲ್ಲಿನ ಕ್ವಾರಿಯೊಳಗೆ ಕಸದ ವಾಹನಗಳು ಪ್ರವೇಶಿಸದಂತೆ ರಸ್ತೆಗೆ ಅಡ್ಡಲಾಗಿ ಕಲ್ಲು ಮಣ್ಣು ಸುರಿದು ಪ್ರತಿಭಟಿಸಿದರು

ವಿದ್ಯಾರ್ಥಿಗಳಿಂದಲೇ ಉತ್ತರ ಪತ್ರಿಕೆಗಳ ಮೌಲ್ಯಮಾಪನ!

• ವರುಣ ಹೆಗಡೆ

ಬೆಂಗಳೂರು: ಪದವಿ ವಿಷಯಗಳ ಉತ್ತರ ಪತ್ರಿಕೆಗಳನ್ನು ಇಲ್ಲಿನ ಸರ್ಕಾರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳೇ ಗೌಪ್ಯವಾಗಿ ಮೌಲ್ಯಮಾಪನ ನಡೆಸಿದ್ದಾರೆ. ಕಾಲೇಜಿನ ಪ್ರಾಂಶುಪಾಲೆ ಜಯಲಕ್ಷ್ಮಿ ಎನ್. ಅವರ ಹೆಸರಿನಲ್ಲಿಯೇ ಈ ಮೌಲ್ಯಮಾಪನ ನಡೆದಿರುವುದು ಸಂಶಯಗಳನ್ನು ಹುಟ್ಟುಹಾಕಿದೆ.

ವಿಕ್ಟೋರಿಯಾ ಆಸ್ಪತ್ರೆಗಳ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕಾಲೇಜು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಅಧೀನದಲ್ಲಿದೆ. ಕಾಲೇಜಿನ ಎರಡನೇ ಮಹಡಿಯಲ್ಲಿರುವ ಮಕ್ಕಳ ಪ್ರಯೋಗಾಲಯದಲ್ಲಿ ಕಳೆದ ಮಾ.26ರಂದು ಇಲ್ಲಿನ ಇಬ್ಬರು ಪದವಿಯ ದ್ವಿತೀಯ ವರ್ಷದ ವಿದ್ಯಾರ್ಥಿನಿಯರು ಜಮ್ಮು ಮತ್ತು ಕಾಶ್ಮೀರದ ಬಾಬಾ ಗುಲಾಮ್ ಶಾ ಬಾದ್‌ಶಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ನಡೆಸಿದ್ದಾರೆ. ಅನುಮಾನಗೊಂಡ ಸಹ ಪ್ರಾಧ್ಯಾಪಕರು ದಿಢೀರ್ ಭೇಟಿ ನೀಡಿ, ಪರಿಶೀಲಿಸಿದಾಗ ಜಯಲಕ್ಷ್ಮಿ ಎನ್. ಅವರ ಹೆಸರಿನಲ್ಲಿ ಮೌಲ್ಯಮಾಪನ ನಡೆಸುತ್ತಿರುವುದು ತಿಳಿದುಬಂದಿದೆ. ಈ ವಿದ್ಯಾರ್ಥಿಗಳೂ ತಪ್ಪೊಪ್ಪಿಕೊಂಡಿದ್ದು, ಪ್ರಾಧ್ಯಾಪಕರು ಘಟನೆಯ ವಿಡಿಯೊ ಮಾಡಿದ್ದಾರೆ.

ಪ್ರಾಧ್ಯಾಪಕರ ಪರಿಶೀಲನೆ ವೇಳೆ ವಿದ್ಯಾರ್ಥಿಗಳು ಸಮಾಜ ವಿಜ್ಞಾನ, ಸಂಶೋಧನೆ ಮತ್ತು ಸಂಖ್ಯಾಶಾಸ್ತ್ರ ವಿಷಯಗಳ ಹಲವು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿರುವುದು ದೃಢಪಟ್ಟಿದೆ. ಈ ಬಗ್ಗೆ ಕಾಲೇಜಿನ ಐವರು ಸಹ ಪ್ರಾಧ್ಯಾಪಕರು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಬಿಎಂಸಿಆರ್‌ಐ ಡೀನ್ ಅವರಿಗೆ ಲಿಖಿತ ದೂರು ನೀಡಿದ್ದಾರೆ.

ಉತ್ತರ ಪತ್ರಿಕೆ ವಶಕ್ಕೆ: ಜಯಲಕ್ಷ್ಮಿ ಎನ್. ಅವರು ಮಕ್ಕಳ ಶುಶ್ರೂಷೆ ವಿಭಾಗದ ಮುಖ್ಯಸ್ಥರೂ ಆಗಿದ್ದಾರೆ. ಮೌಲ್ಯಮಾಪನ ನಡೆಸುತ್ತಿದ್ದ ವಿದ್ಯಾರ್ಥಿಗಳು ಇದೇ ವಿಭಾಗದವರಾಗಿದ್ದಾರೆ. ಪ್ರಯೋಗಾಲಯಕ್ಕೆ ಭೇಟಿ ನೀಡಿದ ಸಹ ಪ್ರಾಧ್ಯಾಪಕರು, ವಿದ್ಯಾರ್ಥಿನಿಯರ ನಡೆಗೆ ಆಕ್ಷೇಪ ವ್ಯಕ್ತಪಡಿಸಿ, 'ಈ ರೀತಿ ಕೃತ್ಯ ಮಾಡುತ್ತೀರಾ' ಎಂದು ದಬಾಯಿಸಿದ್ದಾರೆ. ಜಯಲಕ್ಷ್ಮಿ ಅವರ ಸೂಚನೆ ಅನುಸಾರ ನಾವು ಮೌಲ್ಯಮಾಪನ ಮಾಡಿದ್ದೇವೆ ಎಂದು ವಿದ್ಯಾರ್ಥಿನಿಯರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಆ ವೇಳೆ ಅಲ್ಲಿದ್ದ ಉತ್ತರ ಪತ್ರಿಕೆಗಳನ್ನು ವಶಕ್ಕೆ ಪಡೆದ ಪ್ರಾಧ್ಯಾಪಕರು, ಬಿಎಂಸಿಆರ್‌ಐ ಡೀನ್ ಗಮನಕ್ಕೆ ತಂದಿದ್ದಾರೆ.

'ಕಾಲೇಜಿನ ಎರಡನೇ ಮಹಡಿಗೆ ಹೋಗುವಾಗ ಪ್ರಯೋಗಾಲಯಕ್ಕೆ ಬೀಗ ಹಾಕಿರಲಿಲ್ಲ. ಒಳಗಡೆ ಯಾರೋ ಇರುವುದರ ಬಗ್ಗೆ ಸಂದೇಹ ವ್ಯಕ್ತವಾಯಿತು. ಒಳಗೆ ಹೋಗಿ ಪರಿಶೀಲಿಸಿದಾಗ ವಿದ್ಯಾರ್ಥಿನಿಯರು ಮೌಲ್ಯ ಮಾಪನ ನಡೆಸುತ್ತಿರುವುದು ತಿಳಿಯಿತು. ಕಾಲೇಜಿನಲ್ಲಿ ದುರಾಚಾರ, ದುರಾಡಳಿತ ನಡೆಯುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಾಲೇಜಿನ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಹಿರಿತನ ಕಡೆಗಣಿಸಿ ಹುದ್ದೆ?

ಕಾಲೇಜಿನ ಪ್ರಭಾರ ಪ್ರಾಂಶುಪಾಲರಾಗಿ 2023ರ ಸೆ.30ರಂದು ಜಯಲಕ್ಷ್ಮಿ ಎನ್. ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆ ನೇಮಕ ಮಾಡಿದೆ. ಆದರೆ, ಹಿರಿತನ ಕಡೆಗಣಿಸಲಾಗಿದೆ ಎಂದು ಕಾಲೇಜಿನ ಪ್ರಾಧ್ಯಾಪಕಿ ಜಿ. ನಾಗರತ್ನಮ್ಮ ಅವರು ವೈದ್ಯಕೀಯ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದು, ಆರು ವರ್ಷ ಕಿರಿಯರಿಗೆ ಈ ಹುದ್ದೆ ನೀಡಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಶಾಸಕ ಸಿ.ಬಿ. ಸುರೇಶ್ ಬಾಬು ಅವರೂ ವೈದ್ಯಕೀಯ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದು, ಸೇವಾ ಹಿರಿತನವನ್ನು ಪರಿಗಣಿಸಿ ಜಿ. ನಾಗರತ್ನಮ್ಮ ಅವರನ್ನು ಪ್ರಾಂಶುಪಾಲ ಹುದ್ದೆಗೆ ನೇಮಕ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

'ತನಿಖಾ ತಂಡದಿಂದ ವರದಿ ಸಲ್ಲಿಕೆ'

'ವಿದ್ಯಾರ್ಥಿಗಳಿಂದ ಉತ್ತರ ಪತ್ರಿಕೆ ಮೌಲ್ಯ ಮಾಪನ ನಡೆಸಿರುವುದು ಗಮನಕ್ಕೆ ಬಂದಿದೆ. ಬಿಎಂಸಿಆರ್‌ಐ ಸಂಸ್ಥೆಯಿಂದ ತನಿಖಾ ತಂಡವನ್ನು ರಚಿಸಿದ್ದು, ತನಿಖಾ ತಂಡವು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯು ಪರಿಶೀಲನಾ ಹಂತದಲ್ಲಿ ಇದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.

ದಕ್ಷಿಣ ಪಿನಾಕಿನಿ: ವರದಿ ಸಲ್ಲಿಕೆಗೆ ಕೇಂದ್ರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆಯ ವಿವಾದಕ್ಕೆ ಸಂಬಂಧಿಸಿದಂತೆ ಎಂಟು ವಾರಗಳೊಳಗೆ ವರದಿ ಸಲ್ಲಿಸುವಂತೆ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ತಮಿಳುನಾಡು ಸರ್ಕಾರ ಸಲ್ಲಿಸುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಎಂಟು ವಾರ ಮುಂದೂಡಿದೆ.

'ಜಲವಿವಾದಕ್ಕೆ ಸಂಬಂಧಿಸಿದಂತೆ ಎರಡು ರಾಜ್ಯಗಳ ನಡುವೆ ಕೇಂದ್ರ ಸರ್ಕಾರ ಐದು ಸಭೆಗಳನ್ನು ನಡೆಸಿದೆ. ಕೇಂದ್ರ ರಚಿಸಿರುವ ಸಮಿತಿಯು ಸ್ಥಳ ಪರಿಶೀಲನೆ ನಡೆಸಿದೆ. ವರದಿ ಸಲ್ಲಿಸಲು ಆರರಿಂದ ಎಂಟು ವಾರಗಳ ಸಮಯ ಬೇಕು' ಎಂದು ಕೇಂದ್ರ ಸರ್ಕಾರದ ವಕೀಲರು ಕೋರಿದರು. ಇದಕ್ಕೆ ತಮಿಳುನಾಡಿನ ವಕೀಲರು ವಿರೋಧ ವ್ಯಕ್ತಪಡಿಸಿ, ಪ್ರಕರಣವನ್ನು ಶೀಘ್ರ ಇತ್ಯರ್ಥಪಡಿಸಬೇಕು ಎಂದು ಒತ್ತಾಯಿಸಿದರು.



ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಅಭಿನಂದಿಸಿದರು

800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಡಾ.ಬಿ.ಆರ್. ಅಂಬೇಡ್ಕರ್ ತಾಂತ್ರಿಕ ಕಾಲೇಜಿನ 11ನೇ ಘಟಿಕೋತ್ಸವದಲ್ಲಿ ವಿವಿಧ ವಿಭಾಗದ 800 ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಎಸ್. ವೀಣಾ ಎಂಟು ಚಿನ್ನದ ಪದಕ ಪಡೆದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಟಿ.ಜಿ. ಸೀತಾರಾಮ್ ಮಾತನಾಡಿ, 'ಕೃತಕ ಬುದ್ಧಿಮತ್ತೆ ತಾಂತ್ರಿಕತೆಯೊಂದಿಗೆ ಸೆಣಸಾಟ ನಡೆಸಬೇಕಾಗಿರುವ ಇಂದಿನ ವಿದ್ಯಾರ್ಥಿಗಳು ಪದವಿಯೊಂದಿಗೆ ಪ್ರಸ್ತುತ ಅಗತ್ಯಗಳನ್ನು ಪೂರೈಸುವ ಕೌಶಲ ಬೆಳೆಸಿಕೊಳ್ಳಬೇಕು. ಹೊಸ ಆವಿಷ್ಕಾರಗಳನ್ನು ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

ಪಾಂಚಜನ್ಯ ವಿದ್ಯಾಪೀಠ ಕಲ್ಯಾಣದತ್ತಿ ಅಧ್ಯಕ್ಷ ಎಸ್. ಮರಿಸ್ವಾಮಿ, ಕಲ್ಯಾಣದತ್ತಿ ಕಾರ್ಯದರ್ಶಿ ಎಸ್. ಶಿವಮಲ್ಲು, ಖಜಾಂಜಿ ಎಂ.ಮಹದೇವ, ಶಾಸಕ ಎ.ಆರ್. ಕೃಷ್ಣಮೂರ್ತಿ, ಪ್ರಾಂಶುಪಾಲ ಸಿ.ನಂಜುಂಡಸ್ವಾಮಿ, ಉಪಪ್ರಾಂಶುಪಾಲ ಸಿದ್ದರಾಜು, ಪಟ್ನಾಯಕ್ ಉಪಸ್ಥಿತರಿದ್ದರು.

ಪರಿಶಿಷ್ಟ ಜಾತಿ ಮಕ್ಕಳ ಪ್ರೋತ್ಸಾಹಧನಕ್ಕೂ ಕತ್ತರಿ

ವಾರ್ಷಿಕ ₹6 ಲಕ್ಷ ಆದಾಯದ ಮಿತಿ • ಹೊಸ ಷರತ್ತು ವಿಧಿಸಿದ ರಾಜ್ಯ ಸರ್ಕಾರ

• ಓದೇಶ ಸಕಲೇಶಪುರ

ರಾಮನಗರ: ಮೊದಲ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೆ ನೀಡಲಾಗುತ್ತಿದ್ದ ಪ್ರೋತ್ಸಾಹಧನವನ್ನು ರಾಜ್ಯ ಸರ್ಕಾರ ಯಾವುದೇ ಕಾರಣ ಇಲ್ಲದೆ ಏಕಾಏಕಿ ಸ್ಥಗಿತಗೊಳಿಸಿದೆ!

ಅಲ್ಲದೇ, ಪಿಯು, ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ವಿವಿಧ ವೃತ್ತಿಪರ ಮತ್ತು ಉನ್ನತ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಕುಟುಂಬದ ವಾರ್ಷಿಕ ಆದಾಯ ಮಿತಿ ₹6 ಲಕ್ಷ ಮೀರಿರಬಾರದು ಎಂಬ ಷರತ್ತು ವಿಧಿಸಿದೆ. 2023–24ನೇ ಸಾಲಿನಿಂದ ಜಾರಿಗೆ ಬರುವಂತೆ ಸಮಾಜ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. ಇಲ್ಲಿಯವರೆಗೂ ಈ ನಿಯಮ ಜಾರಿಯಲ್ಲಿ ಇರಲಿಲ್ಲ.

ಶೋಷಿತ ಸಮುದಾಯಗಳ ಮಕ್ಕಳ ಶಿಕ್ಷಣ ಉತ್ತೇಜಿಸಲು ಸರ್ಕಾರವು ಮೊದಲ ಪ್ರಯತ್ನದಲ್ಲಿ ಎಸ್‌ಎಸ್‌ಎಲ್‌ಸಿ ಪ್ರಥಮ ದರ್ಜೆಯಲ್ಲಿ ಪಾಸ್ ಆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೆ ತಂದಿತ್ತು. ಆದರೆ, ಇದೀಗ ಯಾವುದೇ ಮುನ್ಸೂಚನೆ ಅಥವಾ ಸಕಾರಣವಿಲ್ಲದೆ ಈ ಯೋಜನೆಯನ್ನು ಕೈಬಿಟ್ಟಿದೆ.

> ಸರ್ಕಾರ ನೀಡುತ್ತಿದ್ದ ಅಲ್ಪ ಮೊತ್ತದ ಪ್ರೋತ್ಸಾಹಧನ ಬಡ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಆಸರೆ ಆಗುತ್ತಿತ್ತು. ಈಗ ಅದಕ್ಕೂ ಸರ್ಕಾರ ಕತ್ತರಿ ಹಾಕಿದೆ.ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರ ದಲಿತರ ಸಬಲೀಕರಣ ಇದೇನಾ?
>
> **ಬಿ. ಶ್ರೀಪಾದ ಭಟ್,** ಶಿಕ್ಷಣ ತಜ್ಞ

'ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಮೊದಲ ಪ್ರಯತ್ನದಲ್ಲೇ ಶೇ 60 ಅಂಕಗಳೊಂದಿಗೆ ಪ್ರಥಮ ದರ್ಜೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸ್ ಆದರೆ ₹7 ಸಾವಿರ ಹಾಗೂ ಶೇ75ಕ್ಕಿಂತ ಹೆಚ್ಚು ಅಂಕ ಗಳಿಸಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾದರೆ ₹15 ಸಾವಿರ ಪ್ರೋತ್ಸಾಹಧನ ನೀಡುತ್ತಿತ್ತು. ಆಗ ವಾರ್ಷಿಕ ಆದಾಯ ಮಿತಿ ಷರತ್ತು ಇರಲಿಲ್ಲ' ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಹೊಸ ಆದೇಶದ ಪ್ರಕಾರ ಎಸ್‌ಎಸ್‌ಎಲ್‌ಸಿ ಪ್ರಥಮ ದರ್ಜೆ ಉತ್ತೀರ್ಣಕ್ಕೆ ನೀಡುವ ಪ್ರೋತ್ಸಾಹಧನವನ್ನು ಸ್ಥಗಿತಗೊಳಿಸಿ ಅತ್ಯುನ್ನತ ದರ್ಜೆಯಲ್ಲಿ (ಶೇ 75ಕ್ಕಿಂತ ಹೆಚ್ಚು ಅಂಕ) ಪಾಸ್ ಆದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹಧನ ಯೋಜನೆಯನ್ನು ಮಾತ್ರ ಮುಂದುವರೆಸಿದೆ. ಆದರೆ, ₹6 ಲಕ್ಷ ಆದಾಯ ಮಿತಿ ಷರತ್ತು ಹೇರಿದೆ' ಎಂದರು.

'ಇಲಾಖೆ ಏಕಾಏಕಿ ಪ್ರೋತ್ಸಾಹಧನ ಯೋಜನೆ ನಿಲ್ಲಿಸಿರುವುದಕ್ಕೆ ಕಾರಣ ವೇನು? ಆ ಹಣ ಏನಾದರೂ ದುರುಪಯೋಗವಾಗುತ್ತಿತ್ತೇ? ಈ ಕುರಿತು ಸಮೀಕ್ಷೆ ನಡೆದಿದೆಯೇ? ಈ ಯಾವ ಪ್ರಶ್ನೆಗಳಿಗೂ ಅಧಿಕಾರಿಗಳ ಬಳಿ ಉತ್ತರವಿಲ್ಲ. ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳ ಬಗ್ಗೆ ಸರ್ಕಾರ ಹೊಂದಿರುವ ಕಾಳಜಿ ಎಂತಹದ್ದು ಎಂಬುದಕ್ಕೆ ಪ್ರೋತ್ಸಾಹಧನ ಸ್ಥಗಿತಗೊಳಿಸಿರುವುದು ಸಾಕ್ಷಿಯಾಗಿದೆ' ಎಂದು ಶಿಕ್ಷಣ ತಜ್ಞ ಬಿ. ಶ್ರೀಪಾದ ಭಟ್ ಪ್ರತಿಕ್ರಿಯಿಸಿದ್ದಾರೆ.

ಯಾವ ಕೋರ್ಸ್‌ಗೆ ಎಷ್ಟು ಪ್ರೋತ್ಸಾಹಧನ?

(ಹೊಸ ಆದೇಶದ ಅನ್ವಯ ಆದಾಯ ಮಿತಿ ₹6 ಲಕ್ಷ ನಿಗದಿ)

₹15 ಸಾವಿರ
ಎಸ್‌ಎಸ್‌ಎಲ್‌ಸಿಯಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕದೊಂದಿಗೆ ಉತ್ತೀರ್ಣರಾದವರಿಗೆ

₹35 ಸಾವಿರ
ವೈದ್ಯಕೀಯ, ಆಯುರ್ವೇದ, ಯೋಗ, ನ್ಯಾಚುರೋಪತಿ, ನರ್ಸಿಂಗ್, ಎಂಜಿನಿಯರಿಂಗ್, ತಂತ್ರಜ್ಞಾನ, ವಾಸ್ತುಶಿಲ್ಪ, ವಸ್ತ್ರ ವಿನ್ಯಾಸ, ಕೃಷಿ, ತೋಟಗಾರಿಕೆ, ಅರಣ್ಯವಿಜ್ಞಾನ, ಪಶು ವೈದ್ಯಕೀಯ, ಆನ್ವಯಿಕ ವಿಜ್ಞಾನ, ನಿರ್ವಹಣೆ, ಹಣಕಾಸು, ಕಂಪ್ಯೂಟರ್ ವಿಜ್ಞಾನ, ಎಲ್‌ಎಲ್‌ಬಿ, ಎಲ್‌ಎಲ್‌ಎಂ, ಎಂಸಿಎ ಕೋರ್ಸ್‌ಗಳಲ್ಲಿ ಶೇ 65ಕ್ಕಿಂತ ಹೆಚ್ಚು ಅಂಕದೊಂದಿಗೆ ಪಾಸಾದವರಿಗೆ

₹30 ಸಾವಿರ
ಎಂ.ಇಡಿ, ಎಂ.ಫಾರ್ಮಾ, ಬಿ.ಫಾರ್ಮಾ, ಬಿಎಸ್ಸಿ ನರ್ಸಿಂಗ್, ಬಿಎಫ್‌ಎಸ್, ಬಿಎಫ್‌ಎ, ಬಿವಿಎ, ಬಿಸಿಎ, ಎಂ.ಎ, ಎಂ.ಕಾಂ, ಎಂಟಿಎ, ಬಿಎಚ್‌ಎಂ, ಬಿಪಿಟಿ, ಎಂಪಿಟಿ, ಎಂಎಫ್‌ಎ ಕೋರ್ಸ್‌ಗಳಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕದೊಂದಿಗೆ ಉತ್ತೀರ್ಣರಾದವರಿಗೆ

₹25 ಸಾವಿರ
ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಇಡಿ, ಬಿ.ಪಿಇಡಿ, ಬಿಬಿಎ, ಬಿಎಂಸಿ, ಬಿಎಂಎಸ್‌ನಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕ ದೊಂದಿಗೆ ಪಾಸಾದ ವಿದ್ಯಾರ್ಥಿಗಳಿಗೆ

₹20 ಸಾವಿರ
ದ್ವಿತೀಯ ಪಿಯು, ಸಿಬಿಎಸ್‌ಇ/ಐಸಿಎಸ್‌ಇ ಪಠ್ಯಕ್ರಮದ 12ನೇ ತರಗತಿ, 3 ವರ್ಷದ ಡಿಪ್ಲೊಮಾ ಪಾಲಿಟೆಕ್ನಿಕ್, ಐಟಿಐ, ನರ್ಸಿಂಗ್ ಡಿಪ್ಲೊಮಾ, ಜಿಎನ್‌ಎಂ ನರ್ಸಿಂಗ್‌ನಲ್ಲಿ ಶೇ 75ರಷ್ಟು ಅಂಕಗಳೊಂದಿಗೆ ಪಾಸಾದ ವಿದ್ಯಾರ್ಥಿಗಳಿಗೆ


ಶಹಾಪುರ: ಪಡಿತರ ಅಕ್ಕಿ ನಾಪತ್ತೆ ಪ್ರಕರಣ

ಬಿಜೆಪಿ ಮುಖಂಡ ಮಣಿಕಂಠ ಬಂಧನ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ಇಲ್ಲಿನ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ಅಕ್ಕಿ ನಾಪತ್ತೆ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಚಿತ್ತಾಪುರ ತಾಲ್ಲೂಕಿನ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರನ್ನು ಮಂಗಳವಾರ ಶಹಾಪುರ ಠಾಣೆ ಪೊಲೀಸರು ಕಲಬುರಗಿಯಲ್ಲಿ ಬಂಧಿಸಿದ್ದಾರೆ.

'ಟಿಎಪಿಸಿಎಂಎಸ್‌ನ ₹2.6 ಕೋಟಿ ಮೌಲ್ಯದ 6,077 ಕ್ವಿಂಟಲ್ ಪಡಿತರ ಅಕ್ಕಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುರಪುರ ಡಿವೈಎಸ್ಪಿ ಜಾವೇದ್ ಇನಾಂದಾರ್ ತನಿಖೆ ನಡೆಸುತ್ತಿದ್ದಾಗ ಬಂಧಿತ ಆರೋಪಿಗಳು



ಮಣಿಕಂಠ

ರಾಜು ರಾಠೋಡ ಹಾಗೂ ಮಣಿಕಂಠ ರಾಠೋಡ ಅವರಿಗೆ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಹೇಳಿಕೆಯಲ್ಲಿ ತಿಳಿಸಿದ್ದರು. ಹೀಗಾಗಿ ಮಣಿಕಂಠ ರಾಠೋಡ ಅವರನ್ನು ಬಂಧಿಸಲಾಗಿದೆ' ಎಂದು ಶಹಾಪುರ ಠಾಣೆಯ ಪಿಐ ಎಸ್.ಎನ್. ಪಾಟೀಲ ಮಾಹಿತಿ ನೀಡಿದರು.

'ಕೆಲ ತಿಂಗಳ ಹಿಂದೆ ಮಣಿಕಂಠ ರಾಠೋಡ ತಲೆ ಮರೆಸಿಕೊಂಡು ದೆಹಲಿಯಲ್ಲಿದ್ದರು. ಹೊರ ರಾಜ್ಯವಾಗಿದ್ದರಿಂದ ಅಲ್ಲಿನ ಪೊಲೀಸರು ಬಂಧನದ ವಾರಂಟ್ ಕೇಳುತ್ತಿದ್ದರಿಂದ ತನಿಖಾಧಿಕಾರಿಗೆ ಕಾನೂನು ತೊಡಕು ಉಂಟಾಗಿ ಬಂಧಿಸಲು ಸಾಧ್ಯವಾಗಲಿಲ್ಲ. ಕಲಬುರಗಿಯಲ್ಲಿ ಮಣಿಕಂಠ ಇರುವ ಮಾಹಿತಿ ಸಿಕ್ಕಿದ್ದರಿಂದ ಮಂಗಳವಾರ ಬಂಧಿಸಲಾಗಿದೆ' ಎಂದು ತಿಳಿಸಿದರು.

ನಾಟಕೀಯ ಬೆಳವಣಿಗೆ: ಕಲಬುರಗಿ ಅಪಾರ್ಟ್‌ಮೆಂಟ್ ಒಂದರಲ್ಲಿ ಪೊಲೀಸರು ಮಣಿಕಂಠ ಅವರನ್ನು ಬಂಧಿಸಲು ತೆರಳಿದ್ದಾಗ ನಾಟಕೀಯ ಬೆಳವಣಿಗೆ ನಡೆದಿದೆ.

ನೋಟಿಸ್ ನೀಡಿ, ವಾರಂಟ್ ತೋರಿಸಿ ಎಂದು ಮಣಿಕಂಠ ಪ್ರತಿರೋಧ ವ್ಯಕ್ತಪಡಿಸಿ, ಪೊಲೀಸರೊಂದಿಗೆ ವಕೀಲರನ್ನು ಫೋನ್‌ನಲ್ಲಿ ಮಾತನಾಡಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಹಿಂದೆ ಪೊಲೀಸರು ಜನವರಿಯಲ್ಲಿ ಬಂಧಿಸಲು ದೆಹಲಿಗೆ ತೆರಳಿದಾಗಲೂ ನಾಟಕೀಯ ಬೆಳವಣಿಗೆ ನಡೆದಿತ್ತು.

ಮೋದಿ ವಿರುದ್ಧದ ದೂರು ವಜಾ

ಬೆಂಗಳೂರು: ರಾಜಸ್ಥಾನದಲ್ಲಿ ಲೋಕಸಭೆ ಚುನಾವಣೆ ವೇಳೆ 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದ ಸಂಪತ್ತನ್ನು ಮುಸ್ಲಿಮರಿಗೆ ಹಂಚಲಾಗುತ್ತದೆ ಎಂಬ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಲ್ಲಿಸಲಾಗಿದ್ದ ಖಾಸಗಿ ದೂರೊಂದನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾ ಮಾಡಿದೆ.

ಈ ಕುರಿತಂತೆ ಜಿಯಾ ಉರ್ ರಹಮಾನ್ ನೂಮಾನಿ ಸಲ್ಲಿಸಿದ್ದ ಖಾಸಗಿ ದೂರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್, 'ಸಿಆರ್‌ಪಿಸಿ 156(3)ರ ಅಡಿಯಲ್ಲಿ ಈ ಅರ್ಜಿಯನ್ನು ತನಿಖೆಗೆ ಒಪ್ಪಿಸಲು ಯೋಗ್ಯವಾಗಿಲ್ಲ' ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿ ಆದೇಶಿಸಿದ್ದಾರೆ.

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಲ್ಲಿ 2024–25ನೇ ಸಾಲಿನ ಅನುದಾನ: ಡಿಕೆಶಿ

ಯೋಜನೆಗಳಿಗೆ ₹3,450 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಡಿ ನಗರದಲ್ಲಿ 2024–25ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ₹3,450 ಕೋಟಿ ಅನುದಾನ ನೀಡಲಾಗುತ್ತದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ‘ರಾಜ್ಯ ಸರ್ಕಾರದ ಅನುದಾನದಲ್ಲಿ ವೈಟ್ ಟಾಪಿಂಗ್, ಸುರಂಗ ಮಾರ್ಗ ಸೇರಿದಂತೆ ಹಲವು ಯೋಜನೆಗಳನ್ನು ನಿರ್ವಹಿಸಲಾಗುತ್ತದೆ. ಇದಕ್ಕಾಗಿ ₹1,790 ಕೋಟಿ ನಿಗದಿಪಡಿಸಲಾಗಿದೆ’ ಎಂದರು.

ಬಿಬಿಎಂಪಿ ಅನುದಾನದಲ್ಲಿ, ವೈಟ್ ಟಾಪಿಂಗ್, ರಸ್ತೆ ಕಾಮಗಾರಿಗಳು, ಎಲಿವೇಟೆಡ್ ಕಾಮಗಾರಿಗಳನ್ನು ₹1,660 ಕೋಟಿ ವೆಚ್ಚದಲ್ಲಿ ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದರು.

‘ರಸ್ತೆ ಗುಂಡಿ ಗಮನ’: ನಗರದಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಲು ಮತ್ತು ನಿಗಾ ವಹಿಸಲು ‘ರಸ್ತೆ ಗುಂಡಿ ಗಮನ’ ಎಂಬ ಮೊಬೈಲ್ ಆ್ಯಪ್ ಅನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ ಶಿವಕುಮಾರ್ ತಿಳಿಸಿದರು.

ಜಲಮಂಡಳಿ ಸೇರಿದಂತೆ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿದ್ದು, ರಸ್ತೆ ಅಗೆತವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಈ ವರ್ಷದ ಜೂನ್ ಅಂತ್ಯದ ವೇಳೆಗೆ 16,202 ರಸ್ತೆ ಗುಂಡಿಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 15,686 ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಅಂಕಿ–ಅಂಶ ಸಹಿತ ವಿವರಿಸಿದರು.

ರಸ್ತೆಗುಂಡಿಗಳನ್ನು ದುರಸ್ತಿಪಡಿಸಲು ಬ್ಯಾಚ್ ಮಿಕ್ಸ್ ಘಟಕವನ್ನು ಸ್ಥಾಪಿಸಲಾಗಿದೆ. ಮಳೆಗಾಲದಲ್ಲಿಯೂ ರಸ್ತೆ ಗುಂಡಿಗಳನ್ನು ಮುಚ್ಚಲು ‘ಕೋಲ್ಡ್ ಆಸ್ಫಾಲ್ಟ್ ಮಿಕ್ಸ್’ ತಯಾರಿಸುವ ಘಟಕವನ್ನೂ ಸ್ಥಾಪಿಸಲಾಗಿದೆ. ರಸ್ತೆ ಗುಂಡಿಗಳನ್ನು ಮುಚ್ಚಲೆಂದೇ ಪ್ರತಿ ವಾರ್ಡ್‌ಗೆ ₹15 ಲಕ್ಷ ಬಿಡುಗಡೆ ಮಾಡಲಾಗಿದೆ ಎಂದರು.

ಬಿಬಿಎಂಪಿ ಅನುದಾನ (₹ ಕೋಟಿಗಳಲ್ಲಿ)

ಕಾಮಗಾರಿ	ನಿಗದಿ ಮೊತ್ತ
ವೈಟ್ ಟಾಪಿಂಗ್ ಕಾಮಗಾರಿ	₹300
ಸುರಂಗ ರಸ್ತೆ	₹200
ಆರ್‌ಎಂಪಿ 2015 ರಸ್ತೆಗಳ ನಿರ್ಮಾಣ, ವಿಸ್ತರಣೆ	₹100
ಇಂಟಗ್ರೇಟೆಡ್ ಮೆಟ್ರೊ ರೋಡ್ ಫ್ಲೈಓವರ್	₹100
ಇಂಟಗ್ರೇಟೆಡ್ ರೈಲು ಮತ್ತು ರಸ್ತೆ ಮೇಲ್ಸೇತುವೆ	₹100
ಬನಶಂಕರಿ ವೃತ್ತದಲ್ಲಿ ಟ್ರಾನ್ಸಿಸ್ಟ್ ಒರಿಯೆಂಟೆಡ್ ಡೆವಲಪ್‌ಮೆಂಟ್	₹50
ಇತರೆ	₹940
ಒಟ್ಟು	₹1,790

ರಾಜ್ಯ ಸರ್ಕಾರದ ಅನುದಾನ

ಕಾಮಗಾರಿ	ನಿಗದಿ ಮೊತ್ತ
ವೈಟ್ ಟಾಪಿಂಗ್ ಕಾಮಗಾರಿ	₹800 ಕೋಟಿ
ರಸ್ತೆ ಮತ್ತು ಇತರ ಪೂರಕ ಅಭಿವೃದ್ಧಿ	₹250 ಕೋಟಿ
ಬೈಯಪ್ಪನಹಳ್ಳಿಯಲ್ಲಿ ಎಲಿವೇಟೆಡ್ ರೋಟರಿ ಫ್ಲೈಓವರ್	₹380 ಕೋಟಿ
ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ	₹230 ಕೋಟಿ
ಒಟ್ಟು	₹1,660 ಕೋಟಿ



ವಿಧಾನ ಮಂಡಲದಲ್ಲಿ

‘ಸಮನ್ವಯ: ಜುಲೈ 27ರಂದು ಸಭೆ’

ಬೆಂಗಳೂರು ನಗರದ ಆಡಳಿತ ನಿರ್ವಹಣೆಗೆ ಸಂಬಂಧಿಸಿದಂತೆ ಬಿಬಿಎಂಪಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಸ್ಕಾಂ, ಜಲಮಂಡಳಿ ಸೇರಿದಂತೆ ಎಲ್ಲ ಸಂಸ್ಥೆಗಳು, ಇಲಾಖೆಗಳ ಮಧ್ಯೆ ಸಮನ್ವಯ ತರಲು ಜುಲೈ 27ರಂದು ನಗರದ ಶಾಸಕರ ಉಪಸ್ಥಿತಿಯಲ್ಲಿ ಸಭೆ ನಡೆಸಲಾಗುವುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.



ಶಿವಕುಮಾರ್

ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರ ಪ್ರಶ್ನೆಗೆ ಸಚಿವರು ಉತ್ತರ ನೀಡುತ್ತಿದ್ದಾಗ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಎಸ್. ಸುರೇಶ್ ಕುಮಾರ್ ಮತ್ತಿತರರು ನಗರದ ಆಡಳಿತ ನಿರ್ವಹಣೆಗೆ ಸಂಬಂಧಿಸಿದ ಸಂಸ್ಥೆಗಳ ಮಧ್ಯೆ ಸಮನ್ವಯದ ಕೊರತೆ ಕುರಿತು ಪ್ರಸ್ತಾಪಿಸಿದರು.

‘ನಿಮ್ಮ ಮಾತಿಗೆ ನನ್ನ ಸಹಮತ ಇದೆ. ಒಂದು ವರ್ಷದಿಂದ ಸಮನ್ವಯ ಸಾಧಿಸಲು ಕಸರತ್ತು ನಡೆಸಿದ್ದೇನೆ. ಆದರೆ, ಇನ್ನೂ ಸಂಪೂರ್ಣ ಯಶಸ್ವಿಯಾಗಿಲ್ಲ. ಒಂದು ಹಂತಕ್ಕೆ ಸಮಸ್ಯೆ ನಿವಾರಣೆಯಾಗಿದೆ. ಪ್ರತಿಪಕ್ಷದವರು ಸಹಕಾರ ನೀಡಿದರೆ ತ್ಯಾಜ್ಯ ವಿಲೇವಾರಿ, ಕುಡಿಯುವ ನೀರು, ಸಂಚಾರ ದಟ್ಟಣೆ, ಬೀದಿ ದೀಪ, ತೆರಿಗೆ ಸಂಗ್ರಹ, ಹಸಿರೀಕರಣ ಹೀಗೆ ಅನೇಕ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಬಹುದು’ ಎಂದು ಶಿವಕುಮಾರ್ ಅವರು ಹೇಳಿದರು.

ಅನುದಾನಕ್ಕೆ ಆಗ್ರಹ: ‘ವೈಟ್ ಟಾಪಿಂಗ್ ಸೇರಿದಂತೆ ಹಲವು ಕಾಮಗಾರಿಗಳಿಗೆ ನಗರದ 12 ವಿಧಾನಸಭಾ ಕ್ಷೇತ್ರಗಳಿಗಷ್ಟೇ ಅನುದಾನ ಬಿಡುಗಡೆ ಮಾಡಲಾಗಿದೆ. ಬಿಜೆಪಿಯ ಶಾಸಕರ ಕ್ಷೇತ್ರಗಳಿಗೆ ಅನುದಾನವನ್ನೇ ನೀಡಿಲ್ಲ’ ಎಂದು ರಾಮೂರ್ತಿ ದೂರಿದರು.

‘ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿನ ಅನುದಾನ ಬಿಡುಗಡೆ ಮಾಹಿತಿ ಪರಿಶೀಲಿಸಿ. ಎಲ್ಲ ಪಕ್ಷಗಳ ಶಾಸಕರಿಗೂ ಅನುದಾನ ನೀಡಲಾಗಿತ್ತು’ ಎಂದರು.

‘ಪಾರ್ಕಿಂಗ್ ಸಮಸ್ಯೆ ನಿವಾರಣೆಗೆ ಹೊಸ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ, ಪೊಲೀಸ್ ಮತ್ತು ಸಾರಿಗೆ ಇಲಾಖೆಗಳ ಜತೆ ಚರ್ಚಿಸಿ ರಾಜಧಾನಿಯಲ್ಲಿನ ವಾಹನ ನಿಲುಗಡೆ (ಪಾರ್ಕಿಂಗ್) ಸಮಸ್ಯೆ ನಿವಾರಣೆಗೆ ಹೊಸ ನೀತಿಯೊಂದನ್ನು ರೂಪಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.



ಜಿ.ಪರಮೇಶ್ವರ

ವಿಧಾನಸಭೆಯಲ್ಲಿ ಬಿಜೆಪಿಯ ಎಸ್. ಆರ್. ವಿಶ್ವನಾಥ್ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ‘ಬೆಂಗಳೂರಿನಲ್ಲಿ ವಾಹನ ದಟ್ಟಣೆ ಅತಿಯಾಗುತ್ತಿದೆ. ಪಾರ್ಕಿಂಗ್ ನೀತಿ ಇಲ್ಲದಿರುವುದು, ವಾಹನಗಳ ಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಯಾಗದೇ ಇರುವುದು ಸಮಸ್ಯೆಗೆ ಕಾರಣ. ಹೊಸ ನೀತಿಯಲ್ಲಿ ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು’ ಎಂದರು.

ನಗರದಲ್ಲಿ 1,194 ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧವಿದೆ. ಆದರೆ, ಆ ರಸ್ತೆಗಳಲ್ಲೇ ವಾಹನ ನಿಲುಗಡೆ ಮಾಡುತ್ತಾರೆ. ನಿಯಮ ಉಲ್ಲಂಘನೆಗೆ ದಂಡ ವಿಧಿಸಲಾಗುತ್ತಿದೆ. ಆದರೂ, ಸಮಸ್ಯೆ ನಿಯಂತ್ರಣಕ್ಕೆ ಬರುತ್ತಿಲ್ಲ ಎಂದು ಹೇಳಿದರು.

‘ಸ್ಥಳಾವಕಾಶ ಕಡ್ಡಾಯಗೊಳಿಸಿ’: ‘ಕಟ್ಟಡ ನಿರ್ಮಿಸುವಾಗಲೇ ವಾಹನ ನಿಲುಗಡೆಗೆ ಸ್ಥಳ ಮೀಸಲಿಡುವುದನ್ನು ಕಡ್ಡಾಯಗೊಳಿಸಬೇಕು. ನಾನು ಬಿಡಿಎ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ಅಂತಹ ನಿರ್ಣಯ ಮಾಡಿಸಿದ್ದೆ. ಮನೆಗಳಲ್ಲಿ ಕನಿಷ್ಠ ಎರಡು ಕಾರುಗಳಿಗೆ ಜಾಗ ಮೀಸಲಿಟ್ಟರೆ ಮಾತ್ರ ನಕ್ಷೆ ಮಂಜೂರಾತಿ ನೀಡುವ ವ್ಯವಸ್ಥೆ ತರುವಂತೆ ಸಲಹೆ ನೀಡಿದ್ದೆ. ಆ ಕ್ರಮವನ್ನು ಜಾರಿಗೊಳಿಸಿ’ ಎಂದು ವಿಶ್ವನಾಥ್ ಆಗ್ರಹಿಸಿದರು.

ಕೆಲವರು ಮನೆಗಳ ಮುಂಭಾಗದಲ್ಲಿ ಕಾರು ನಿಲ್ಲಿಸಿ, ತಿಂಗಳುಗಟ್ಟಲೆ ತೆಗೆಯುವುದಿಲ್ಲ. ಬಹುತೇಕ ರಸ್ತೆಗಳಲ್ಲಿ ಎರಡೂ ಬದಿ ಕಾರುಗಳ ನಿಲುಗಡೆ ಮಾಡುವುದರಿಂದ ವಾಹನ ಸಂಚಾರ ಕಷ್ಟವಾಗುತ್ತಿದೆ. ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದರು.

ಬಿಜೆಪಿಯ ಎಸ್.ಸುರೇಶ್ ಕುಮಾರ್ ಮಾತನಾಡಿ, ‘ರಸ್ತೆಯ ಶೇಕಡ 30ರಷ್ಟು ಪ್ರದೇಶ ವಾಹನ ನಿಲುಗಡೆಗೆ ಬಳಕೆಯಾಗುತ್ತಿದೆ. ಬಹುಮಹಡಿ ವಾಹನ ನಿಲುಗಡೆ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

ಪಾರ್ಕಿಂಗ್ ನಿಯಮ ಉಲ್ಲಂಘನೆಗೆ ದಂಡ

ವರ್ಷ	ಪ್ರಕರಣಗಳ ಸಂಖ್ಯೆ	ದಂಡ
2022	12.07 ಲಕ್ಷ	₹ 20.84 ಕೋಟಿ
2023	11.30 ಲಕ್ಷ	₹ 37 ಕೋಟಿ
2024 (ಜೂನ್‌ವರೆಗೆ)	5.21 ಲಕ್ಷ	₹ 5.97 ಕೋಟಿ

ಟೋಯಿಂಗ್ ವ್ಯವಸ್ಥೆ ಮರು ಜಾರಿಗೆ ಆಗ್ರಹ

‘ಟೋಯಿಂಗ್ ಇಲ್ಲದೆ ಸಂಚಾರ ದಟ್ಟಣೆ ನಿಯಂತ್ರಿಸಲು ಸಾಧ್ಯವಿಲ್ಲ. ಕೆಲವು ಟೀಕೆಗಳು ಬಂದಿದ್ದರಿಂದ ನಗರದಲ್ಲಿ ಟೋಯಿಂಗ್ ಸ್ಥಗಿತಗೊಳಿಸಲಾಗಿದೆ. ನಿಷೇಧಿತ ಪ್ರದೇಶಗಳಲ್ಲಿ ವಾಹನ ನಿಲುಗಡೆ ನಿಯಂತ್ರಿಸಲು ಸಾಧ್ಯವೇ ಇಲ್ಲವಾಗಿದೆ. ತಕ್ಷಣ ಟೋಯಿಂಗ್ ಮರು ಜಾರಿಗೊಳಿಸಿ’ ಎಂದು ಬಿಜೆಪಿ ಸದಸ್ಯ ಎಸ್.ಆರ್. ವಿಶ್ವನಾಥ್ ಆಗ್ರಹಿಸಿದರು.

‘ಟೋಯಿಂಗ್ ಜಾರಿಗೊಳಿಸಿದರೆ ಜನರು ವಿರೋಧಿಸಬಹುದು ಎಂಬ ಭಯ ನಿಮಗೆ (ಸರ್ಕಾರಕ್ಕೆ) ಇರಬಹುದು. ಯಲಹಂಕ ವಿಧಾನಸಭಾ ಕ್ಷೇತ್ರದಲ್ಲೇ ಮೊದಲು ಟೋಯಿಂಗ್ ಜಾರಿಗೆ ತನ್ನಿ. ವಿರೋಧ ಬಂದರೆ ನಾನೇ ಎದುರಿಸುತ್ತೇನೆ’ ಎಂದರು.

ಹೆದ್ದಾರಿ ಪ್ರಾಧಿಕಾರದ ವಿರುದ್ಧ ಸಚಿವ ಅಸಮಾಧಾನ

ಬೆಂಗಳೂರು: ‘ರಾಜ್ಯದ ಹಲವೆಡೆ ರಾಷ್ಟ್ರೀಯ ಹೆದ್ದಾರಿಗಳು ವೈಜ್ಞಾನಿಕವಾಗಿ ನಿರ್ಮಾಣವಾಗಿಲ್ಲ. ಅಪಾಯಗಳ ಬಗ್ಗೆ ಹೇಳಿದರೆ ರಾಷ್ಟ್ರೀಯ ಪ್ರಾಧಿಕಾರದ ಅಧಿಕಾರಿಗಳು ಕಿವಿಗೇ ಹಾಕಿಕೊಳ್ಳುತ್ತಿಲ್ಲ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಮಾತನಾಡಿ, ‘ನಾವು ಏನೇ ದೂರು ಹೇಳಿದರೂ ನಮ್ಮ ಕೇಂದ್ರ ಕಚೇರಿ ದೆಹಲಿಯಲ್ಲಿದೆ. ಅಲ್ಲಿಗೆ ಪತ್ರ ಬರೆಯುತ್ತೇನೆ ಎಂದಷ್ಟೇ ಹೇಳಿ ಕೈತೊಳೆದುಕೊಳ್ಳುತ್ತಾರೆ’ ಎಂದರು.

‘ಅಂಕೋಲಾ ಬಳಿ ನಡೆದ ಭೂಕುಸಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಕರೆಯಿಸಿ ಘಟನೆಯ ಬಗ್ಗೆ ಮಾತನಾಡುತ್ತೇವೆ’ ಎಂದು ಹೇಳಿದರು.

ವಸತಿ ಶಾಲೆ ಪ್ರವೇಶ: 25ರವರೆಗೆ ಅವಕಾಶ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ನಡೆಸುವ ರಾಜ್ಯದ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ನೇರ ಪ್ರವೇಶ ಪಡೆಯಲು ವಿಶೇಷ ವರ್ಗಗಳ ಕುಟುಂಬದ ಮಕ್ಕಳಿಗೆ ಜುಲೈ 25ರವರೆಗೆ ಅವಕಾಶ ನೀಡಲಾಗಿದೆ.

ಸಫಾಯಿ ಕರ್ಮಚಾರಿ, ಚಿಂದಿ ಆಯುವವರು, ಸ್ಮಶಾನ ಕಾರ್ಮಿಕರು, ಜೀತಮುಕ್ತ ಕಾರ್ಮಿಕರು, ಎಚ್‌ಐವಿಗೆ ಒಳಗಾದವರು, ಮಾಜಿ ದೇವದಾಸಿಯರು, ಅಲೆಮಾರಿ, ಅರೆ ಅಲೆಮಾರಿ, ಸೈನಿಕರು, ಮಾಜಿ ಸೈನಿಕರು ಸೇರಿದಂತೆ ವಿಶೇಷ ವರ್ಗದ ಕುಟುಂಬಗಳ 5ನೇ ತರಗತಿ ಉತ್ತೀರ್ಣರಾದ ಮಕ್ಕಳಿಗೆ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಶೇ 50ರಷ್ಟು ಸೀಟು ಲಭ್ಯವಿದೆ.

ಪರಿಷತ್‌ನಲ್ಲೂ ಪ್ರಸ್ತಾಪ: ವಸತಿ ಶಾಲೆಗಳಲ್ಲಿ ಖಾಲಿ ಉಳಿದ ಸೀಟುಗಳನ್ನು ಇತರೆ ಎಲ್ಲ ವರ್ಗದ ಮಕ್ಕಳಿಗೂ ನೀಡುವ ಮೂಲಕ ಭರ್ತಿ ಮಾಡಬೇಕು ಎಂದು ಮೇಲ್ಮನೆಯಲ್ಲಿ ಸದಸ್ಯರು ಒತ್ತಾಯಿಸಿದ್ದರು.

ಅನುತ್ತೀರ್ಣರಾದವರಿಗೆ ವಿಶೇಷ ತರಗತಿ: 103 ಮಕ್ಕಳು ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಗರದ ವಿವಿಧ ಸ್ವಯಂಸೇವಾ ಸಂಸ್ಥೆಗಳು ಆಯೋಜಿಸಿದ್ದ ವಿಶೇಷ ತರಗತಿಗಳಲ್ಲಿ ಹಾಜರಾಗಿ, ಪೂರಕ ಪರೀಕ್ಷೆ ಬರೆದಿದ್ದವರಲ್ಲಿ 103 ಮಂದಿ ಉತ್ತೀರ್ಣರಾಗಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣ ಆದವರಿಗಾಗಿ ಲೋಕಾಯುಕ್ತ ಡಿವೈಎಸ್‌ಪಿ ರಾಜೇಶ್ ಎಲ್.ವೈ. ಅವರು 2022ರಲ್ಲಿ ‘ಫೇಲಾದ ಮಕ್ಕಳಿಗೆ ವಿಶೇಷ ತರಗತಿ’ಯನ್ನು ಆರಂಭಿಸಿದ್ದರು. ರಾಜಲಾಂಛನ ಯುಕ್ತಿ ಸಂಸ್ಥಾನ ಮತ್ತು ದರ್ಪಣ ಸ್ವಯಸೇವಾ ಸಂಸ್ಥೆಗಳು ಸಹಯೋಗದಲ್ಲಿ ಈ ಬಾರಿ ನಗರದ ಮೂರು ಸ್ಥಳಗಳಲ್ಲಿ ತರಗತಿ ನಡೆಸಲಾಗಿತ್ತು.



ಪೂರಕ ಪರೀಕ್ಷೆ ಬರೆದು ಉತ್ತೀರ್ಣರಾದ 103 ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

ಆನೇಕಲ್‌ನಲ್ಲಿ ನಡೆಸಿದ್ದ ತರಗತಿಗೆ 56 ವಿದ್ಯಾರ್ಥಿಗಳು ಹಾಜರಾಗಿದ್ದರೆ, ಚಂದಾಪುರದಲ್ಲಿನ ತರಗತಿಯಲ್ಲಿ 67 ಮತ್ತು ಮಂಗಮ್ಮನ ಪಾಳ್ಯದ ತರಗತಿಯಲ್ಲಿ 60 ವಿದ್ಯಾರ್ಥಿಗಳು ಹಾಜರಾಗಿದ್ದರು.

‘ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದೆ’

ಪ್ರಜಾವಾಣಿ ವಾರ್ತೆ



ಸತೀಶ ಜಾರಕಿಹೊಳಿ

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದೆ ಎಂಬುದಕ್ಕೆ ವಿಧಾನಸಭೆ, ಲೋಕಸಭೆ ಚುನಾವಣೆಯ ಫಲಿತಾಂಶಗಳೇ ಸಾಕ್ಷಿ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಪರಿಶಿಷ್ಟ ವಿಭಾಗದ ರಾಜ್ಯ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿ, ‘ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ರಾಜ್ಯದಲ್ಲಿ ಉತ್ತಮ ಸಂಘಟನೆ ಮಾಡಿದ್ದಾರೆ. ಪರಿಶಿಷ್ಟ ವಿಭಾಗದ ಮತದಾರರನ್ನು ಹೆಚ್ಚಿನ ಪ್ರಮಾಣದಲ್ಲಿ ಸೆಳೆಯುವಲ್ಲಿ ಕೆಪಿಸಿಸಿ ಪರಿಶಿಷ್ಟ ವಿಭಾಗ ಯಶಸ್ವಿಯಾಗಿದೆ’ ಎಂದರು.

ಪರಿಶಿಷ್ಟ ವಿಭಾಗ ರಾಜ್ಯ ಘಟಕದ ಅಧ್ಯಕ್ಷ ಎಂ. ವಿಜಯ ನಾಯಕ್, ‘ಮುಂಬರುವ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳು ಹಾಗೂ ನಿಗಮ– ಮಂಡಳಿ ನೇಮಕಾತಿಯಲ್ಲಿ ಪರಿಶಿಷ್ಟ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರಲ್ಲಿ ಅವರಿಗೆ ಮನವಿ ಸಲ್ಲಿಸಲಾಗುವುದು’ ಎಂದರು.

ಅಖಿಲ ಭಾರತ ಪರಿಶಿಷ್ಟ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಶಿವಾಜಿ ರಾವ್ ಮೋಗೆ ಮಾತನಾಡಿ, ‘ವಿಧಾನಸಭೆ, ಲೋಕಸಭೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಥೆಗಳಲ್ಲಿ ಈ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಿದ ಪಕ್ಷ ಕಾಂಗ್ರೆಸ್’ ಎಂದರು.

ಐವರು ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ, ಪರಪ್ಪನ ಅಗ್ರಹಾರ, ವರ್ತೂರು ಹಾಗೂ ಶೇಷಾದ್ರಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ, ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್ ಸೇರಿದಂತೆ ಐವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹26 ಲಕ್ಷ ಮೌಲ್ಯದ ನಿಷೇಧಿತ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿದ್ದ ನೈಜಿರಿಯಾ ದೇಶದ ಕಿಂಗ್ಸ್‌ಲೇ ನಾನಾ ಹಾಗೂ ಸಂಡೆಕೂಡಿ ಎಂಬುವವರನ್ನು ಬಂಧಿಸಲಾಗಿದೆ.

‘ಬಂಧಿತರಿಂದ ₹21 ಲಕ್ಷ ಮೌಲ್ಯದ 206 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ ಹಾಗೂ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಬ್ಬರೂ ಆರೋಪಿಗಳು ಬ್ಯುಸಿನೆಸ್ ವೀಸಾ ಪಡೆದು 2021ರಲ್ಲಿ ಭಾರತಕ್ಕೆ ಬಂದಿದ್ದರು. ಬೆಂಗಳೂರಿನಲ್ಲಿ ವಾಸ್ತವ್ಯ ಮಾಡಿದ್ದರು. ದೆಹಲಿ, ಗೋವಾ, ಮುಂಬೈನಿಂದ ಎಂಡಿಎಂಎ ಕ್ರಿಸ್ಟೆಲ್ ಖರೀದಿಸಿ ಬೆಂಗಳೂರಿನ ಗ್ರಾಹಕರಿಗೆ ಪೂರೈಸುತ್ತಿದ್ದರು. ಇದರಿಂದ ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಕೇರಳದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತರಿಂದ ₹3 ಲಕ್ಷ ಮೌಲ್ಯದ 2.75 ಕೆ.ಜಿ ಗಾಂಜಾ, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಶೇಷಾದ್ರಿಪುರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿದ್ದ ಒಡಿಶಾದ ಇಮಾಮ್‌ಶೂ ಬೆಹಾರ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ. ಆರೋಪಿಯಿಂದ 1 ಕೆ.ಜಿ ತೂಕದ ಗಾಂಜಾವನ್ನು ಜಪ್ತಿ ಮಾಡಲಾಗಿದೆ.

‘ಆರೋಪಿಯು ಜೊಮ್ಯಾಟೊ ಕಿಚನ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. 2023ರಲ್ಲೂ ಗಾಂಜಾ ಮಾರಾಟ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು. ಇಮಾಮ್‌ಶೂ ಬೆಹಾರನ ಸಹಚರನನ್ನು ಶಿವಾಜಿನಗರದಲ್ಲಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ವರ್ತೂರು ಪೊಲೀಸರು, ಒಬ್ಬ ಆರೋಪಿಯನ್ನು ಬಂಧಿಸಿ ₹2 ಲಕ್ಷ ಮೌಲ್ಯದ 19 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ ಅನ್ನು ಜಪ್ತಿ ಮಾಡಿದ್ದಾರೆ.

ಪೆಡ್ಲರ್ ಕಾಲಿಗೆ ಗುಂಡೇಟು

ಹೊಸಕೋಟೆ: ನಗರದ ಟೋಲ್ ಬಳಿ ಮಂಗಳವಾರ ಮಧ್ಯಾಹ್ನ ಪೊಲೀಸರು ಡ್ರಗ್ಸ್ ಪೆಡ್ಲರ್ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ.

ಟೋಲ್ ಬಳಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮಾಹಿತಿ ಮೇರೆಗೆ ಅಲ್ಲಿಗೆ ತೆರಳಿದ ಪೊಲೀಸರು, ಸುಹೇಲ್ ಅಲಿಯಾಸ್ ಜಾದೂ ಎಂಬ ಯುವಕನನ್ನು ಬಂಧಿಸಲು ಮುಂದಾದರು. ಆಗ ಪೆಡ್ಲರ್ ಡ್ರ್ಯಾಗರ್‌ನಿಂದ ಪೊಲೀಸರ ಮೇಲೆ ಹಲ್ಲೆಗೆ ಮುಂದಾದ. ಆರೋಪಿ ಕಾಲಿಗೆ ನಗರ ಠಾಣೆ ಸಿಪಿಐ ಅಶೋಕ್ ಗುಂಡು ಹೊಡೆದಿದ್ದಾರೆ.

ನಗರದಲ್ಲಿ ಇಂದು

ಭಾಗವತ ಪ್ರವಚನ ಮಾಲಿಕೆ: ಆಯೋಜನೆ ಹಾಗೂ ಸ್ಥಳ: ಲಕ್ಷ್ಮೀನರಸಿಂಹ ದೇವಸ್ಥಾನ, ಉತ್ತರಾದಿ ಮಠ, ಬೆಳಿಗ್ಗೆ 7ರಿಂದ



ಬರಗೂರು ರಾಮಚಂದ್ರಪ್ಪ

ಯುಗಧರ್ಮ ರಾಮಣ್ಣನವರ ಆರು ಪುಸ್ತಕಗಳು ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಶಿವರಾಜ್ ತಂಗಡಗಿ, ಪುಸ್ತಕದ ಬಗ್ಗೆ ಮಾತು: ಶಾಂತರಾಜು, ರಾಧಾಕೃಷ್ಣ ಪಲ್ಲಕ್ಕಿ, ಆಯೋಜನೆ: ಯುಗಧರ್ಮ ರಾಮಣ್ಣ ಅಭಿವೃದ್ಧಿ ಪ್ರತಿಷ್ಠಾನ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

ತಪ್ತ ಮುದ್ರಾಧಾರಣೆ: ಸುಬುಧೇಂದ್ರತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಳಿಗ್ಗೆ 7.30ರಿಂದ

ಡಾ.ಕೆ.ಸಿದ್ದಪ್ಪ ಅಭಿನಂದನೆ: ಉದ್ಘಾಟನೆ: ಶಾಮನೂರು ಶಿವಶಂಕರಪ್ಪ, ಅಭಿನಂದನಾ ನುಡಿ: ಗೊ.ರು.ಚನ್ನಬಸಪ್ಪ, ಅಭಿನಂದನಾ ಗ್ರಂಥ ಬಿಡುಗಡೆ: ಪಿ.ಜಿ.ಆರ್. ಸಿಂಧ್ಯ, ಮುಖ್ಯ ಅತಿಥಿಗಳು: ವಿ.ಎಸ್. ರಾಮಮೂರ್ತಿ, ಎ.ಎಸ್. ಕಿರಣ್ ಕುಮಾರ್, ಡಿ.ವಿ. ಗೋಪಿನಾಥ್, ಕೆ.ಜೆ. ರಾವ್, ಅಧ್ಯಕ್ಷತೆ: ಪಿ. ವೆಂಕಟರಾಮಯ್ಯ, ಸಂಗೀತ ಕಾರ್ಯಕ್ರಮ: ಮುದ್ದುಮೋಹನ್ ಮತ್ತು ತಂಡ, ಆಯೋಜನೆ: ಡಾ.ಕೆ. ಸಿದ್ದಪ್ಪ ಅಭಿನಂದನಾ ಸಮಿತಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10

ಪತ್ರಕರ್ತ ಆರ್.ಜಯಕುಮಾರ್ ನೆನಪಿನಲ್ಲಿ ‘ದ್ರಾವಿಡ ಚಳವಳಿ ಮತ್ತು ವರ್ತಮಾನ’ ವಿಚಾರ ಸಂಕಿರಣ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ನ್ಯಾ.ಎಚ್.ಎನ್. ನಾಗಮೋಹನದಾಸ್, ಉಪಸ್ಥಿತಿ: ಬಿ.ಕೆ. ಶಿವರಾಂ, ಶಿವಾನಂದ ತಗಡೂರು, ಎಸ್.ಆರ್. ಆರಾಧ್ಯ, ಆಯೋಜನೆ: ಸಮಾನ ಮನಸ್ಕರ ಬಳಗ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2024: ‘ಗೋಕರ್ಣದ ಗೌಡಶಾನಿ’ ನಾಟಕ ಪ್ರದರ್ಶನ, ರಚನೆ: ಚಂದ್ರಶೇಖರ ಪಾಟೀಲ, ನಿರ್ದೇಶನ: ನರಸಿಂಹ ಕುಲಕರ್ಣಿ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು nagaradalli_indu@prajavani.co.in ಇ–ಮೇಲ್‌ಗೆ (ಸಂಜೆ 6ರ ಒಳಗೆ) ಕಳುಹಿಸಿ.

ಕಾಶ್ಮೀರ: ಬೆಂಗಳೂರಿನ ಮೂವರು ಸಾವು

ಶ್ರೀನಗರ: ಕೇಂದ್ರ ಕಾಶ್ಮೀರದ ಗಾಂದೆರ್‌ಬಲ್ ಜಿಲ್ಲೆಯ ಝೋಜಿಲಾ ಪಾಸ್‌ನಲ್ಲಿ ಸೋಮವಾರ ಪ್ರಪಾತಕ್ಕೆ ವಾಹನ ಉರುಳಿ ಬೆಂಗಳೂರಿನ ಮೂವರು ಪ್ರವಾಸಿಗರು ಸ್ಥಳದಲ್ಲೇ ಮೃತಪಟ್ಟಿದ್ದು, ಮಗುವೊಂದು ತೀವ್ರವಾಗಿ ಗಾಯಗೊಂಡಿದೆ.

ಚಂಪಕ್‌ದಾಸ್ (67), ಟಂಡ್ರಾ ದಾಸ್ (44) ಮತ್ತು ಮೊನಾಲಿಸಾ ದಾಸ್ (41)ಮೃತಪಟ್ಟವರು. ಆದ್ರಿತಾ ಖಾನ್ (8) ಎಂಬ ಮಗು ತೀವ್ರವಾಗಿ ಗಾಯಗೊಂಡಿದೆ.

ವಾಹನವು ಸೋನಾಮಾರ್ಗ್‌ನಿಂದ ಝೀರೋ ಪಾಯಿಂಟ್‌ಗೆ ತೆರಳುತ್ತಿದ್ದಾಗ ಪಾಣಿಮಠದ ಬಳಿ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರು, ಸೇನೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಐಟಿಬಿಪಿ ಹಾಗೂ ಸಿಆರ್‌ಪಿಎಫ್ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಮೃತದೇಹಗಳನ್ನು ಹೊರತೆಗೆಯಲಾಗುತ್ತಿದೆ. ಗಾಯಗೊಂಡ ಮಗುವನ್ನು ಶ್ರೀನಗರದ ಸೂಪರ್ ಸ್ಪೆಷಾಲಿಟಿ ಸ್ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ನೌಕರರ ವರ್ಗಾವಣೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2024–25) ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ನಿಗದಿಪಡಿಸಿದ್ದ ಅವಧಿಯನ್ನು ಜುಲೈ 31 ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಎಲ್ಲ ವೃಂದಗಳಿಗೆ (ಗ್ರೂಪ್ ಎ, ಬಿ, ಡಿ, ಸಿ) ಅನ್ವಯವಾಗುವಂತೆ, ಒಂದು ಜ್ಯೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ6ರಷ್ಟನ್ನು ಮೀರದಂತೆ ವರ್ಗಾವಣೆ ಪ್ರಕ್ರಿಯೆ ನಡೆಸುವ ಅಧಿಕಾರವನ್ನು ಆಯಾ ಇಲಾಖೆಗಳ ಸಚಿವರಿಗೆ ನೀಡಲಾಗಿದೆ.

ಮೈಸೂರು ರೇಸ್

ಮಿಸ್ಟಿಕ್ ಬಾಂಡ್ ಗೆಲ್ಲುವ ನಿರೀಕ್ಷೆ

ಮೈಸೂರು: ವರಾಹಿ ಟ್ರೋಫಿಯ ಮೊದಲನೇ ಡಿವಿಜನ್ ಬುಧವಾರದಿಂದ ಪ್ರಾರಂಭವಾಗಲಿರುವ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿಕ್‌ಬಾಂಡ್‌ಈರೇಸ್‌ನಲ್ಲಿಗೆಲ್ಲುವನಿರೀಕ್ಷೆಯಿದೆ. ಮಧ್ಯಾಹ್ನ2:00ಕ್ಕೆಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಸ್ಟ್ರಾಲಜರ್ 4, ಎವರ್ಲಿ 1, ಸಿಟಿ ಆಫ್ ಹಸ್ಲ್ 3
2ನೇ ರೇಸ್: ನ್ಯಾಚುರಲ್ ಫ್ಲೈ 8, ವೈಟ್ ಲೈಸ್ 9, ಡಿ ಯುನೈಟೆಡ್ 12
3ನೇ ರೇಸ್: ಸಿಯೊಲ್ ಫಾರ್ ಬುಲೆಟ್ 2, ಹೇಸ್ಟಿಂಗ್ ಸನ್‌ರೈಸ್ 6, ಮೂನ್‌ಲೈಟ್ ಕ್ವೀನ್ 7
4ನೇ ರೇಸ್: ರೈಸಿಂಗ್ ಸನ್ 4, ಸೇಂಟ್ ಎಮಿಲಿಯನ್ 3, ಮೇಬುರಿ 6
5ನೇ ರೇಸ್: ಮಿಸ್ಟಿಕ್ ಬಾಂಡ್ 9, ಕಾಂಟ್ರಿಬ್ಯೂಟರ್ 1, ಶೀಬಾ 5
6ನೇ ರೇಸ್: ಬ್ರೇವ್ ಟ್ರೂಪರ್ 8, ಕುಶಾಖ್ 2, ಜೆಮಿನಿ 9
7ನೇ ರೇಸ್: ನೆವಾಡ ಗೋಲ್ಡ್ 6, ಬ್ರೈಟೆಸ್ಟ್ ಸ್ಟಾರ್ 2, ಸಿಯೋಲ್ 1

ಉತ್ತಮ ಬೆಟ್: ನೆವಾಡ ಗೋಲ್ಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಭ್ರೂಣಲಿಂಗ ಪತ್ತೆ, ಗರ್ಭಪಾತ ಇಬ್ಬರು ವೈದ್ಯರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಗೋಕಾಕ ನಗರ ಹಾಗೂ ಮೂಡಲಗಿ ಪಟ್ಟಣದಲ್ಲಿ ಭ್ರೂಣಲಿಂಗ ಪತ್ತೆ ಹಾಗೂ ಗರ್ಭಪಾತ ಮಾಡುತ್ತಿದ್ದ ಎರಡು ಆಸ್ಪತ್ರೆಗಳನ್ನು ಬೆಂಗಳೂರಿನಿಂದ ಬಂದ ರಾಜ್ಯ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳ ತಂಡ ಮಂಗಳವಾರ ಬಂದ್ ಮಾಡಿಸಿದೆ. ಇಬ್ಬರು ವೈದ್ಯರು ಮತ್ತು ಒಬ್ಬ ಏಜೆಂಟ್‌ನನ್ನು ವಶಕ್ಕೆ ಪಡೆಯಲಾಗಿದೆ.



ಗೋಕಾಕ, ಮೂಡಲಗಿ ಹಾಗೂ ಮಮದಾಪುರ ಗ್ರಾಮದ ಆಸ್ಪತ್ರೆಗಳ ಮೇಲೆ ಅಧಿಕಾರಿಗಳ ತಂಡವು ಸೋಮವಾರ ಸಂಜೆ ದಾಳಿ ನಡೆಸಿತು. ತಾಲ್ಲೂಕು ಆರೋಗ್ಯಾಧಿಕಾರಿಗಳ ಮೂಲಕ ಮಂಗಳವಾರ ಆಸ್ಪತ್ರೆಗಳನ್ನು ಬಂದ್ ಮಾಡಿಸಲಾಯಿತು.

‘ಈ ಎರಡೂ ಆಸ್ಪತ್ರೆಗಳಲ್ಲಿ ಅಂದಾಜು 80 ಭ್ರೂಣಲಿಂಗ ಪತ್ತೆ ಮಾಡಿದ ದಾಖಲೆಗಳು ಸಿಕ್ಕಿವೆ. ಅದರಲ್ಲಿ 40 ಮಂದಿಗೆ ಈಗಾಗಲೇ ಗರ್ಭಪಾತ ಮಾಡಿಸಲಾಗಿದೆ. ಮಮದಾಪುರದ ವೈದ್ಯ ಡಾ.ಸಿದ್ಧಾರೂಢ ಪೂಜಾರಿ ತಲೆಮರೆಸಿಕೊಂಡಿದ್ದು, ತನಿಖೆ ಪ್ರಕ್ರಿಯೆ ನಡೆದಿದೆ’ ಎಂದು ರಾಜ್ಯ ಸಕ್ಷಮ ಪ್ರಾಧಿಕಾರದ ಉಪ ನಿರ್ದೇಶಕ ಡಾ.ವಿವೇಕ್ ತಿಳಿಸಿದ್ದಾರೆ.

ಅಕ್ರಮ ಪತ್ತೆಗೆ ನೆರವಾದ ಗರ್ಭಿಣಿ

ಅಕ್ರಮ ಪತ್ತೆ ಮಾಡಲು ಗರ್ಭಿಣಿಯೊಬ್ಬರು ಅಧಿಕಾರಿಗಳ ತಂಡಕ್ಕೆ ನೆರವಾದರು. ಸೋಮವಾರ ನಾಲ್ವರು ಗರ್ಭಿಣಿಯರು ಏಜೆಂಟ್ ಮೂಲಕ ಗರ್ಭಪಾತಕ್ಕೆ ಆಸ್ಪತ್ರೆಗೆ ಬಂದಿದ್ದರು. ಅದರಲ್ಲಿ ತಂಡದೊಂದಿಗೆ ಇದ್ದ ಮಹಿಳೆ ಕೂಡ ಸೇರಿಕೊಂಡರು. ಏಜೆಂಟ್‌ಗೆ ₹15 ಸಾವಿರ ಹಾಗೂ ಗರ್ಭಪಾತ ಮಾಡುವ ವೈದ್ಯರಿಗೆ ₹20 ಸಾವಿರ ನಿಗದಿ ಮಾಡಲಾಗಿತ್ತು. ಹಣ ವರ್ಗಾವಣೆ ಆಗುತ್ತಿದ್ದಂತೆಯೇ ಅಧಿಕಾರಿಗಳು ದಾಳಿ ನಡೆಸಿದರು. ಅಕ್ರಮ ಬಯಲಿಗೆಳೆಯಲು ನೆರವಾದ ಮಹಿಳೆಗೆ ಅಧಿಕಾರಿಗಳು ₹1 ಲಕ್ಷ ಬಹುಮಾನ ಘೋಷಿಸಿದ್ದಾರೆ.

ಡಾ. ಪದ್ಮಿನಿ ಮಕ್ಕಳ ಪ್ರಶಸ್ತಿ, ಫೆಲೋಶಿಪ್ ಪ್ರದಾನ ಕಾರ್ಯಕ್ರಮ

‘ದೇಶದಲ್ಲಿ ಹೆಚ್ಚಿದ ಬಾಲ್ಯ ವಿವಾಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ, ವಲಸೆ, ಅಸಮರ್ಪಕ ಶಾಲಾ ಸೌಲಭ್ಯಗಳಿಂದ ದೇಶದಲ್ಲಿ ಬಾಲ್ಯ ವಿವಾಹಗಳ ಸಂಖ್ಯೆ ಹೆಚ್ಚುತ್ತಿದೆ. 2024ರ ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ವರದಿಯ ಪ್ರಕಾರ ಭಾರತದಲ್ಲಿ 20 ಕೋಟಿ ಬಾಲ್ಯ ವಿವಾಹಗಳು ನಡೆದಿವೆ’ ಎಂದು ಅಭಿವೃದ್ಧಿ ಸಲಹೆಗಾರ್ತಿ ಸುಧಾ ಮುರಳಿ ಹೇಳಿದರು.

ಚೈಲ್ಡ್ ರೈಟ್ಸ್ ಟ್ರಸ್ಟ್ (ಸಿಆರ್‌ಟಿ) ಸೋಮವಾರ ಆಯೋಜಿಸಿದ್ದ ‘ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ, ಫೆಲೋಶಿಪ್ ಪ್ರದಾನ ಹಾಗೂ ಉಪನ್ಯಾಸ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೇಶ ಅಭಿವೃದ್ಧಿಯ ಪಥದಲ್ಲಿ ನಡೆಯುತ್ತಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ, ಲಿಂಗ ಅಸಮಾನತೆ, ಬಾಲಕಾರ್ಮಿಕ ಪದ್ಧತಿ ಇಂದಿಗೂ ಜಾರಿಯಲ್ಲಿವೆ. ಸರ್ಕಾರ ಹಾಗೂ ಸ್ವಯಂ ಸೇವಾ ಸಂಘಗಳು ಇವುಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ. ಸಾಮಾಜಿಕ ಪಿಡುಗುಗಳ ನಿವಾರಣೆಗೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಿಸಲು ಸರ್ಕಾರ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸಬೇಕು’ ಎಂದು ಹೇಳಿದರು.



ನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಶೋಭಾ ಮನ್ವೆಲ್ ಕಿಣಗಿ ಮತ್ತು ಸುಶೀಲಾ ವಿ., ಅವರಿಗೆ ‘ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಎನ್‌.ವಿ. ವಾಸುದೇವ್ ಶರ್ಮಾ, ಆಂಜಲಿ ರಾಮಣ್ಣ, ಪದ್ಮಿನಿ ಅವರ ಕುಟುಂಬದ ಸದಸ್ಯೆ ರೇವತಿ, ಸುಧಾ ಮುರಳಿ, ಆನ್ಸೆಲಂ ರೊಸಾರಿಯೋ, ಕಾತ್ಯಾಯಿನಿ ಚಾಮರಾಜ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ದೇಶದಲ್ಲಿ 6ರಿಂದ 14 ವರ್ಷದೊಳಗಿನ ಮಕ್ಕಳ ಕಲಿಕಾ ಗುಣಮಟ್ಟ ಕೆಳಮಟ್ಟದಲ್ಲಿದೆ. ಕಳೆದ ಒಂದು ದಶಕದಲ್ಲಿ ಬಾಲ್ಯ ವಿವಾಹ, ಮನೆಗೆಲಸ, ಶಿಕ್ಷಣದ ವೆಚ್ಚ ಹೆಚ್ಚಳ ಮತ್ತು ಹದಿಹರೆಯದವರ ಗರ್ಭಧಾರಣೆಯಂತಹ ಸಮಸ್ಯೆಗಳಿಂದ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆ ತೊರೆದಿದ್ದಾರೆ’ ಎಂದರು.

ಸಾಮಾಜಿಕ ಕಾರ್ಯಕರ್ತೆಯರಾದ ಬೆಳಗಾವಿ ಜಿಲ್ಲೆಯ ಸುಶೀಲಾ ವಿ., ಶೋಭಾ ಮನ್ವೆಲ್ ಕಿಣಗಿ ಅವರಿಗೆ ‘ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ’, ₹10 ಸಾವಿರ ನಗದು ಪ್ರದಾನ ಮಾಡಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಕೊಡಗಿನ ಸುಮನಾ ಮ್ಯಾಥ್ಯೂ, ವಿಜಯನಗರದ ಅಂಕ್ಲೇಶ್, ಹಾಸನದ ಶೈಲಜಾ ಎಚ್‌.ಸಿ., ಕಲಬುರಗಿಯ ಶ್ರುತಿ, ದಾವಣಗೆರೆಯ ಅಂಜಿನಪ್ಪ ಅವರು ‘ಡಾ. ಪದ್ಮಿನಿ ಫೆಲೋಶಿಪ್‌ಗೆ’ ಆಯ್ಕೆಯಾಗಿದ್ದಾರೆ. ಈ ಐದು ಮಂದಿಗೆ ಒಂದು ವರ್ಷ ಪ್ರತಿ ತಿಂಗಳು ತಲಾ ₹10 ಸಾವಿರ ಫೆಲೋಶಿಪ್ ನೀಡಲಾಗುತ್ತಿದೆ ಎಂದು ವೇದಿಕೆಯಲ್ಲಿ ಪ್ರಕಟಿಸಲಾಯಿತು.

ಸಿಆರ್‌ಟಿನ ಕಾರ್ಯಕಾರಿ ನಿರ್ದೇಶಕ ಎನ್‌.ವಿ. ವಾಸುದೇವ ಶರ್ಮಾ, ಟ್ರಸ್ಟಿಗಳಾದ ಅಂಜಲಿ ರಾಮಣ್ಣ, ಆನ್ಸೆಲಂ ರೊಸಾರಿಯೋ, ಕಾತ್ಯಾಯಿನಿ ಚಾಮರಾಜ, ರೇವತಿ, ನಾಗಸಿಂಹರಾವ್ ಭಾಗವಹಿಸಿದ್ದರು.

ನೋವು-ನಲಿವುಗಳ ಮಿಳಿತ

• ಅಬ್ದುಲ್ ರಹಿಮಾನ್

ಸಂಭ್ರಮ-ದುಃಖ, ಸೋಲು-ಗೆಲುವಿನ, ನೋವು-ನಲಿವಿನ ಮಿಳಿತವೇ ಮೊಹರಂ. ಇದು ಅಲ್ಲಾಹನ ತಿಂಗಳು ಎನ್ನುವುದು ಪ್ರವಾದಿ ಪೈಗಂಬರರ ನುಡಿ. ಪ್ರಥಮ ಮನುಷ್ಯ ಆದಂ ಅವರನ್ನು ಸೃಷ್ಟಿಸಿದ್ದು, ಪ್ರವಾದಿ ಇಬ್ರಾಹಿಮರು ಅಗ್ನಿಕುಂಡದಿಂದ ರಕ್ಷೆ ಪಡೆದಿದ್ದು, ಪ್ರವಾದಿ ಮೂಸ ಹಾಗೂ ಅವರ ಸಮುದಾಯ ಕ್ರೂರಿ ಫಿರ್‌ಔನ್‌ನಿಂದ (ಫೇರೋ) ಮುಕ್ತಿ ಹೊಂದಿದ್ದು, ಮೀನಿನ ಹೊಟ್ಟೆಯಿಂದ ಪ್ರವಾದಿ ಯೂನುಸರು ಪಾರಾಗಿದ್ದು ಇದೇ ತಿಂಗಳಲ್ಲಿ ಎಂದು ಇಸ್ಲಾಮಿ ಚರಿತ್ರೆಯ ಪುಸ್ತಕಗಳಲ್ಲಿ ದಾಖಲಾಗಿದೆ. ಭೂಮಿಗೆ ಪ್ರಥಮ ಮಳೆ ಬಿದ್ದಿದ್ದು ಈ ತಿಂಗಳಲ್ಲೇ ಎನ್ನುವುದು ಮುಸ್ಲಿಮರ ನಂಬಿಕೆ. ಇದೇ ಮಾಸದ 10ನೇ ದಿನದಂದು ಪ್ರವಾದಿ ಪೈಗಂಬರರ ಮೊಮ್ಮಗ ಹುಸೈನ್‌ರ ವಧೆಯಾಗಿದ್ದು ಮುಸ್ಲಿಮರ ಪಾಲಿಗೆ ಕರಾಳ ಘಟನೆ.

ಮುಸ್ಲಿಮರು ಅನುಸರಿಸುವ ಚಂದ್ರಮಾನ ಕ್ಯಾಲೆಂಡರ್‌ನ ಪ್ರಥಮ ತಿಂಗಳು ಮೊಹರಂ; ಎಂದರೆ ಮುಸಲ್ಮಾನರಿಗೆ ಹೊಸ ವರ್ಷ. ಇಸ್ಲಾಮಿನ ಎರಡನೇ ಖಲೀಫಾ ಉಮರ್‌ರವರ ಕಾಲದಲ್ಲಿ ಮೊಹರಂನಿಂದ ಪ್ರಾರಂಭವಾಗುವ 'ಹಿಜರಿ' ಕ್ಯಾಲೆಂಡರ್ ಜಾರಿಗೆ ಬಂತು. ಈ ತಿಂಗಳ 9 ಹಾಗೂ 10ನೇ ದಿನಕ್ಕೆ ವಿಶೇಷ ಮಹತ್ವ ಇದೆ. ಈ ಎರಡು ದಿನಗಳಲ್ಲಿ ಉಪವಾಸವಿರುವುದು ಪುಣ್ಯದಾಯಕ ಎನ್ನುವುದು ನಂಬಿಕೆ. ಯುದ್ಧವನ್ನು ನಿಷೇಧಗೊಳಿಸಿರುವ ನಾಲ್ಕು ತಿಂಗಳುಗಳಲ್ಲಿ ಮೊಹರಂ ಕೂಡ ಒಂದಾಗಿರುವುದರಿಂದ, ಶಾಂತಿ, ಸಹೋದರತ್ವ ಹಾಗೂ ಸಹಬಾಳ್ವೆಯ ಸಂದೇಶವೂ ಮೊಹರಂನಲ್ಲಿದೆ.

ಪ್ರವಾದಿ ಮೊಹಮ್ಮದರ ಕಾಲದ ಬಳಿಕ, ಅವರು ಹಾಕಿದ ಅಡಿಪಾಯದಲ್ಲೇ ಇಸ್ಲಾಮಿ ಆಡಳಿತವನ್ನು ಖಲೀಫರು ಮುನ್ನಡೆಸಿಕೊಂಡು ಹೋದರು. ಜನರಿಂದಲೇ ಆಯ್ಕೆಯಾದ ವ್ಯಕ್ತಿಯೊಬ್ಬ ನಾಯಕತ್ವ ವಹಿಸಿಕೊಳ್ಳುವ ಪ್ರಜಾಪ್ರಭುತ್ವ ಮಾದರಿಯ ಆಡಳಿತ ಅದಾಗಿತ್ತು. ಮೊಹಮ್ಮದರು ಕಾಲವಾದ 50 ವರ್ಷಗಳ ತರುವಾಯ ಈ ಆಡಳಿತವು ವಂಶಾಡಳಿತಕ್ಕೆ ಜಾರುವ ಪರಿಸ್ಥಿತಿ ಎದುರಾದಾಗ ನಡೆದ 'ಕರ್ಬಲಾ' ಸಮರವು ಮೊಹರಂ ಆಚರಣೆಯಲ್ಲಿ ಪ್ರಮುಖ ಪಾತ್ರ ಪಡೆದುಕೊಂಡಿದೆ.

ಐದನೇ ಖಲೀಫಾ ಎಂದು ಪ್ರಖ್ಯಾತಿ ಪಡೆದಿದ್ದ ಮುಆವಿಯಾ ಅವರ ಮರಣದ ಬಳಿಕ, ಅವರ ಪುತ್ರ ಯಝೀದನು ತಾನೇ ಮುಂದಿನ ಖಲೀಫಾ ಎಂದು ಸ್ವಯಂಘೋಷಿಸಿಕೊಂಡಿದ್ದ. ಆದರೆ, ಪ್ರವಾದಿ ಮೊಹಮ್ಮದರ ಪುತ್ರ ಹಝ್ರತ್ ಹುಸೇನರು ನಾಯಕನಾಗಬೇಕು ಎನ್ನುವುದು ಜನರ ಅಭಿಲಾಷೆಯಾಗಿತ್ತು. ಪ್ರವಾದಿಯವರ ಅನುಯಾಯಿಗಳೂ ಹುಸೇನರ ಹೆಸರನ್ನೇ ಅನುಮೋದಿಸಿದ್ದರು. ಈ ನಡುವೆ ಇರಾಕ್‌ನ ಕೂಫಾ ಜನರ ಆಹ್ವಾನವನ್ನು ಸ್ವೀಕರಿಸಿ ತೆರಳಿದ್ದ ಹುಸೇನ್ ಹಾಗೂ 70ರಷ್ಟಿದ್ದ ಅವರ ಸಂಗಡಿಗರನ್ನು ಕರ್ಬಲಾ ಎನ್ನುವಲ್ಲಿ ಯಝೀದನ ಸೇನೆ ಸುತ್ತುವರಿಯಿತು. ಮಕ್ಕಳು, ಮಹಿಳೆಯರು ಎನ್ನದೇ ಎಲ್ಲರನ್ನೂ ಯಝೀದನ ಸೇನೆ ಕೊಂದುಹಾಕಿತು. ಹಝ್ರತ್ ಹುಸೇನರು ಹುತಾತ್ಮರಾದರು. ಹುಸೇನರ ಸ್ಮರಣಾರ್ಥವಾಗಿ ಮೊಹರಂ ಅನ್ನು ಆಚರಿಸುವ ಸಂಪ್ರದಾಯ ಕೆಲವು ಮುಸಲ್ಮಾನ ಪಂಗಡಗಳಲ್ಲಿ ಇದೆ.

'ಆಶೂರಾ' ಎಂದು ಕರೆಯಲ್ಪಡುವ ಈ ದಿನವನ್ನು ಕರಾಳದಿನ ಎಂದು ಶಿಯಾ ಮುಸ್ಲಿಮರು ಆಚರಿಸುತ್ತಾರೆ. ಕಪ್ಪುಬಟ್ಟೆಯನ್ನು ಧರಿಸಿ, ದೇಹವನ್ನು ದಂಡಿಸಿ ಶೋಕವನ್ನು ವ್ಯಕ್ತಪಡಿಸುತ್ತಾರೆ. ಸುನ್ನಿ ಮುಸಲ್ಮಾನರು ವ್ರತಾಚರಣೆ ಮಾಡಿ ಆರಾಧನೆಯಲ್ಲಿ ತೊಡಗುತ್ತಾರೆ. ಪ್ರಾದೇಶಿಕ ಸಂಸ್ಕೃತಿಯೊಂದಿಗೆ ಮೊಹರಂ ಆಚರಿಸುವ ವಿವಿಧ ಮುಸ್ಲಿಂ ಪಂಗಡಗಳೂ ಇವೆ.

ಕರ್ನಾಟಕದಲ್ಲಿ, ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಆದಿಲ್ ಶಾಹಿಗಳ ಕಾಲದಿಂದ ಬಂದ ಮೊಹರಂ ಆಚರಣೆಯು ಧಾರ್ಮಿಕ ಸಾಮರಸ್ಯದ ಆಚರಣೆಯಾಗಿ ಮಾರ್ಪಾಡಾಗಿದೆ. ಧರ್ಮಾತೀತವಾಗಿ ಮೊಹರಂ ಆಚರಿಸಲಾಗುತ್ತದೆ. ಆಲಾಯಿ, ಪೀರಲ ದೇವರುಗಳನ್ನು ಪ್ರತಿಷ್ಠಾಪಿಸುವುದು, ಮೆರವಣಿಗೆ ಮಾಡುವುದು, ಹರಕೆ ಹೇಳುವುದು, ಶೋಕಗೀತೆ ಹಾಡುವುದು, ಸುಖಗಳನ್ನು ತ್ಯಜಿಸುವುದು ರೂಢಿ. ಮುಸಲ್ಮಾನರು ಇಲ್ಲದ ಊರುಗಳಲ್ಲೂ ಮೊಹರಂ ಆಚರಣೆ ವಿಜೃಂಭಣೆಯಿಂದ ನಡೆಯುತ್ತದೆ. ಶರಣ-ಸೂಫಿ ತತ್ವಗಳ, ಹಿಂದೂ-ಮುಸಲ್ಮಾನರ ಅಪೂರ್ವ ಮಿಲನವನ್ನು ಮೊಹರಂನ ಆಚರಣೆಯಲ್ಲಿ ಕಾಣಬಹುದು. ಎಲ್ಲ ಗಡಿಗಳನ್ನು ದಾಟಿದ ಮೊಹರಂ ಆಚರಣೆಯು ಕರ್ನಾಟಕದ ಈ ಮಣ್ಣಿನ ಗುಣದ ಪ್ರತೀಕವೂ ಹೌದು.



ಮೊಹರಂ

ಪಂಜಾಗಳ ಮೆರವಣಿಗೆ –ಸಂಗ್ರಹ ಚಿತ್ರ

ಡಿಡಿಯುಟಿಟಿಎಲ್‌ನಲ್ಲಿ ಭ್ರಷ್ಟಾಚಾರ: ಜೈಲು ಸೇರಿದ ಡಿ.ಎಸ್‌.ವೀರಯ್ಯ

ಬಂಗಲೆ ನಿರ್ಮಾಣಕ್ಕೆ ಅಕ್ರಮದ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ (ಡಿಡಿಯುಟಿಟಿಎಲ್) ನಡೆದಿರುವ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ, ಅಕ್ರಮದಿಂದ ಬಂದ ಹಣವನ್ನು ಆರೋಪಿಗಳು ಮನೆ ನಿರ್ಮಾಣ ಹಾಗೂ ನಿವೇಶನ ಖರೀದಿಗೆ ಬಳಕೆ ಮಾಡಿರುವುದನ್ನು ಪತ್ತೆ ಹಚ್ಚಿದೆ.

₹47.10 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ನಿಯಮಿತದ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಅವರನ್ನು ಸಿಐಡಿ ಪೊಲೀಸರು, ಜುಲೈ 12ರಂದು ಬಂಧಿಸಿ ಹೆಚ್ಚಿನ ವಿಚಾರಣೆಗೆ ನಾಲ್ಕು ದಿನ ಕಸ್ಟಡಿಗೆ ಪಡೆದುಕೊಂಡಿದ್ದರು. ಕಸ್ಟಡಿ ಅವಧಿಯಲ್ಲಿ ಆರೋಪಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದ ಪೊಲೀಸರು, ವೀರಯ್ಯ ಅವರಿಂದ ಮಹತ್ವದ ಮಾಹಿತಿ ಕಲೆಹಾಕಿದ್ದಾರೆ ಎಂದು ಗೊತ್ತಾಗಿದೆ.



ವೀರಯ್ಯ

'ವೀರಯ್ಯ ಅವರ ಬ್ಯಾಂಕ್ ಖಾತೆಗೆ ಗುತ್ತಿಗೆದಾರರಿಂದ ₹3 ಕೋಟಿ ಸಂದಾಯ ಆಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿತ್ತು. ಆ ಹಣವೂ ಸೇರಿದಂತೆ ಅಕ್ರಮದಿಂದ ಬಂದ ಹಣದಲ್ಲಿ ವೀರಯ್ಯ ಅವರು ನಾಗರಬಾವಿಯ ಉತ್ಕಾರ್ ಬಡಾವಣೆಯಲ್ಲಿ ಬೃಹತ್ ಬಂಗಲೆ ನಿರ್ಮಿಸುತ್ತಿರುವುದು ಪತ್ತೆಯಾಗಿದೆ. ಆರೋಪಿಯನ್ನು ಸ್ಥಳಕ್ಕೆ ಕರೆದೊಯ್ದು ತನಿಖಾಧಿಕಾರಿಗಳು ಮಹಜರು ನಡೆಸಿದ್ದಾರೆ. ಮನೆಯ ನಿರ್ಮಾಣ ಹಂತದಲ್ಲಿದೆ. ಅಲ್ಲದೇ ಸಂಬಂಧಿಕರೊಬ್ಬರ ಹೆಸರಿನಲ್ಲಿ ಕೆಂಗೇರಿಯ ವ್ಯಾಪ್ತಿಯ ಉಲ್ಲಾಳದಲ್ಲಿ ನಿವೇಶನ ಖರೀದಿಸಿರುವುದೂ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

ವೀರಯ್ಯ ಅವರ ಸಿಐಡಿ ಕಸ್ಟಡಿ ಮಂಗಳವಾರಕ್ಕೆ ಅಂತ್ಯವಾದ ಕಾರಣದಿಂದ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆರೋಪಿಯನ್ನು ಜುಲೈ 30ರ ವರೆಗೆ ನ್ಯಾಯಾಂಗದ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶ ಹೊರಡಿಸಿತು.

ಇದೇ ಪ್ರಕರಣದಲ್ಲಿ ಡಿಡಿಯುಟಿಟಿಎಲ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಎಸ್.ಶಂಕರಪ್ಪ ಅವರನ್ನೂ ಈ ಹಿಂದೆ ಸಿಐಡಿ ಬಂಧಿಸಿತ್ತು.

ಯಾರಿಗೆ ಎಷ್ಟು ಪಾಲು?

'ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗುತ್ತಿದೆ. ಅಕ್ರಮದಿಂದ ಬಂದ ಹಣದಲ್ಲಿ ಹಲವರು ಪಾಲು ಪಡೆದಿದ್ದಾರೆ' ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪಿಯು ಪರೀಕ್ಷೆ–3: 17,911 ವಿದ್ಯಾರ್ಥಿಗಳು ತೇರ್ಗಡೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–3 ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 75,466 ವಿದ್ಯಾರ್ಥಿಗಳಲ್ಲಿ 17,911 ಮಂದಿ (ಶೇ 23.73) ತೇರ್ಗಡೆಯಾಗಿದ್ದಾರೆ.

44,027 ಬಾಲಕರಲ್ಲಿ 9,531 (ಶೇ 21.65) ಹಾಗೂ 31,439 ಬಾಲಕಿಯರಲ್ಲಿ 8,380 (ಶೇ 26.65) ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶೇ 27.06, ವಾಣಿಜ್ಯದಲ್ಲಿ ಶೇ 23.58 ಹಾಗೂ ಕಲಾ ವಿಭಾಗದಲ್ಲಿ ಶೇ 21.71ರಷ್ಟು ಫಲಿತಾಂಶ ಬಂದಿದೆ.

ಮರು ಮೌಲ್ಯಮಾಪನ, ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಜುಲೈ 24 ರವರೆಗೆ ಅವಕಾಶ ನೀಡಲಾಗಿದೆ. ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಜುಲೈ 21ರ ಒಳಗೆ ಅರ್ಜಿ ಸಲ್ಲಿಸಬೇಕು. 18ರಿಂದ 22ರವರೆಗೆ ಛಾಯಾ ಪ್ರತಿ ಪಡೆಯಬಹುದು. ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಇದೇ ಮೊದಲ ಬಾರಿ ಆರಂಭಿಸಿದ್ದ ಮೂರು ಪರೀಕ್ಷೆಗಳು ಪೂರ್ಣಗೊಂಡಿದ್ದು, ಮೂರಲ್ಲಿ ಅಧಿಕ ಅಂಕ ಪಡೆದ ಪರೀಕ್ಷೆಯನ್ನು ಪರಿಗಣಿಸಲಾಗುವುದು.

ಗೌರಿ ಲಂಕೇಶ್ ಹತ್ಯೆ: ಮೂವರಿಗೆ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಕಲಬುರಗಿ ಪೀಠದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕಟಿಸಿತು.



ಗೌರಿ ಲಂಕೇಶ್

ಪ್ರಕರಣದ 5ನೇ ಆರೋಪಿ ಅಮಿತ್ ದಿಗ್ವೇಕರ್ ಅಲಿಯಾಸ್ ಅಮಿತ್ ಅಲಿಯಾಸ್ ಪ್ರದೀಪ್ ಮಹಾಜನ್, 7ನೇ ಆರೋಪಿ ಎಚ್.ಎಲ್.ಸುರೇಶ್ ಅಲಿಯಾಸ್ ಟೀಚರ್, 17ನೇ ಆರೋಪಿ ಕೆ.ಟಿ.ನವೀನ್ ಕುಮಾರ್ ಅಲಿಯಾಸ್ ನವೀನ್ ಜಾಮೀನು ಪಡೆದ ಆರೋಪಿಗಳಾಗಿದ್ದಾರೆ. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದ್ದರು.

ಈ ಮೊದಲು 11ನೇ ಆರೋಪಿ ಮೋಹನ್ ನಾಯಕ್‌ಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಈ ಆದೇಶವನ್ನು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಮೂಲಕ ಪ್ರಶ್ನಿಸಿದ್ದು, ಈ ಅರ್ಜಿ ವಿಚಾರಣೆಗೆ ಬಾಕಿ ಇದೆ.

ವಾಲ್ಮೀಕಿ ನಿಗಮ: ಹಣ ಸಾಗಿಸಿದ್ದ ಗ್ರಾಫಿಕ್ಸ್ ಡಿಸೈನರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ನಿಗಮದ ಹಗರಣದ ಸಂಬಂಧ ಮತ್ತೊಬ್ಬ ಆರೋಪಿಯನ್ನು ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

'ನಕಲಿ ಖಾತೆಗಳಿಂದ ಹಣ ಡ್ರಾ ಆದ ಮೇಲೆ ಹಣ ಸಾಗಾಣಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬಿಎಸ್‌ಎನ್‌ಎಲ್ ಮಹಿಳಾ ಅಧಿಕಾರಿಯೊಬ್ಬರ ಪತಿ ಕಾಕಿ ಶ್ರೀನಿವಾಸ್ ರಾವ್ ಅವರನ್ನು ಬಂಧಿಸಲಾಗಿದೆ. ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಳಿಕ ಆರೋಪಿ ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದರು. ನಗರಕ್ಕೆ ವಾಪಸ್‌ಆದ ಮಾಹಿತಿ ತಿಳಿದು-ಕಾರ್ಯಾಚರಣೆ ನಡೆಸಲಾಗಿತ್ತು. ಹೆಚ್ಚಿನ ವಿಚಾರಣೆಗೆ ಒಂಬತ್ತು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.



ಶ್ರೀನಿವಾಸ್ ರಾವ್

'ಗ್ರಾಫಿಕ್ಸ್ ಡಿಸೈನರ್ ಆಗಿದ್ದ ಆರೋಪಿ ಕಾಕಿ ಶ್ರೀನಿವಾಸ್, ಎರಡು ವರ್ಷದಿಂದ ಯಶವಂತಪುರದಲ್ಲಿ ನೆಲಸಿದ್ದರು' ಎಂದು ಪೊಲೀಸರು ಹೇಳಿದರು.

ಹೈದರಾಬಾದ್‌ನಲ್ಲಿ ವರ್ಮಾ ಸ್ನೇಹ

'ಆರೋಪಿಯು ಕೆಲವು ವರ್ಷ ಹೈದರಾಬಾದ್‌ನಲ್ಲಿದ್ದಾಗ ಪ್ರಕರಣದ ಪ್ರಮುಖ ಆರೋಪಿ ಸತ್ಯಾನಾರಾಯಣ ವರ್ಮಾ ಅವರ ಸ್ನೇಹವಾಗಿತ್ತು. ಛತ್ತೀಸಗಢದ ಕೃಷಿ ಅಭಿವೃದ್ಧಿ ಮಂಡಳಿಯಿಂದ ಅಕ್ರಮವಾಗಿ ಹಣ ವರ್ಗಾವಣೆ ಪ್ರಕರಣದಲ್ಲಿ ವರ್ಮಾ ಜತೆಗೆ ಶ್ರೀನಿವಾಸ್ ಕೈಜೋಡಿಸಿದ್ದರು. ವಾಲ್ಮೀಕಿ ನಿಗಮದ ಹಗರಣದಲ್ಲೂ ಸತ್ಯನಾರಾಯಣ ವರ್ಮಾ ಜತೆಗೆ ಕೃತ್ಯದಲ್ಲಿ ಭಾಗಿಯಾಗಿದ್ದರು. ನಿಗಮದಿಂದ ತೆಗೆದ ₹10 ಕೋಟಿಯನ್ನು ನಗದು ರೂಪದಲ್ಲಿ ಹವಾಲಾ ಮೂಲಕ ಸಾಗಿಸುವಲ್ಲಿ ಕಾಕಿ ಶ್ರೀನಿವಾಸ್ ಪ್ರಮುಖ ಪಾತ್ರ ವಹಿಸಿದ್ದರು ಎನ್ನಲಾಗಿದೆ' ಎಂದು ಪೊಲೀಸರು ಹೇಳಿದರು.

ಅಂಗಾಂಗ ದಾನ: ಕುಟುಂಬಕ್ಕೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಾಂಗ ದಾನಿಗಳ ಕುಟುಂಬದ ಸದಸ್ಯರಿಗೆ ಪ್ರತಿ ವರ್ಷ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.



ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ಸೊಟ್ಟೊ) ಅಡಿ ಅಂಗಾಂಗ ದಾನ ಮಾಡಿದವರ ಮಾಹಿತಿ ಪಡೆಯಬೇಕು. ಅಂಗಾಂಗ ದಾನ ಮಾಡಿದ 10 ದಿನಗಳ ಒಳಗೆ ಅಂಗಾಂಗ ದಾನಿಯ ಕುಟುಂಬದವರಿಗೆ ರಾಜ್ಯ ಸರ್ಕಾರದ ಪರವಾಗಿ ಪ್ರಶಂಸಾ ಪತ್ರವನ್ನು ನೀಡಿ, ಗೌರವಿಸುವ ಬಗ್ಗೆ ಕ್ರಮವಹಿಸಬೇಕು. ಬಳಿಕ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ದಲ್ಲಿ ಜಿಲ್ಲಾಡಳಿತದ ವತಿಯಿಂದ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಬೇಕು ಎಂದು ತಿಳಿಸಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಾವ ಕಲೆಯಲ್ಲೂ ರುಚಿಯೊಂದಿಗೆ ಶುಚಿಯನ್ನು ಕಾಪಾಡಿಕೊಳ್ಳುವುದು ಭಾರತೀಯ ಸಂಪ್ರದಾಯ.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

ಮತ್ತೆ ಹೆಚ್ಚಿದ ಉಗ್ರರ ಪಿಡುಗು ನಿವಾರಣೆಗೆ ಬೇಕು ಹಲವು ಉಪಕ್ರಮ

ಜಮ್ಮು ಮತ್ತು ಕಾಶ್ಮೀರದಲ್ಲಿ ಈಚಿನ ತಿಂಗಳುಗಳಲ್ಲಿ ಭಯೋತ್ಪಾದಕ ದಾಳಿಗಳು ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳು ನಡೆಯುವುದು ಹೆಚ್ಚಾಗಿವೆ. ಭದ್ರತಾ ಸಿಬ್ಬಂದಿಯನ್ನು ಹಾಗೂ ಉಗ್ರರ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಗಳನ್ನು ಗುರಿಯಾಗಿಸಿಕೊಂಡು ನಡೆಯುವ ದಾಳಿಗಳು ಜಾಸ್ತಿ ಆಗಿವೆ. ಜಮ್ಮು ಮತ್ತು ಕಾಶ್ಮೀರದ ಡೋಡಾದಲ್ಲಿ ಮಂಗಳವಾರ ನಡೆದ ದಾಳಿಯಲ್ಲಿ ನಾಲ್ಕು ಮಂದಿ ಸೇನಾ ಸಿಬ್ಬಂದಿ ಹತರಾಗಿದ್ದಾರೆ. ಇವರಲ್ಲಿ ಒಬ್ಬ ಸೇನಾಧಿಕಾರಿ ಕೂಡ ಇದ್ದಾರೆ. ಈ ವರ್ಷದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿರುವ ಪ್ರಮುಖ ಭಯೋತ್ಪಾದಕ ದಾಳಿಗಳಲ್ಲಿ ಇದು ಆರನೆಯದು. ಜಮ್ಮು ಜಿಲ್ಲೆಯ ಕಠುವಾದಲ್ಲಿ ಕೆಲವು ದಿನಗಳ ಹಿಂದೆ ಸೇನಾ ವಾಹನದ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಐವರು ಸೇನಾ ಸಿಬ್ಬಂದಿ ಮೃತಪಟ್ಟಿದ್ದರು. ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಮೂರನೆಯ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ ದಿನ ರಿಯಾಸಿ ಜಿಲ್ಲೆಯಲ್ಲಿ ಬಸ್ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಒಂಬತ್ತು ಮಂದಿ ಯಾತ್ರಿಕರು ಪ್ರಾಣ ಕಳೆದುಕೊಂಡಿದ್ದರು, ಇತರ ಹಲವರು ಗಾಯಗೊಂಡಿದ್ದರು. ಭಯೋತ್ಪಾದಕರು ಭದ್ರತಾ ಸಿಬ್ಬಂದಿಯ ಮೇಲೆ ನಡೆಸುವ ಹಠಾತ್ ದಾಳಿಗಳಲ್ಲಿ ಹಾಗೂ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಸಂದರ್ಭಗಳಲ್ಲಿ ಜೀವ ಕಳೆದುಕೊಳ್ಳುತ್ತಿರುವ ಯೋಧರ ಸಂಖ್ಯೆ ಹೆಚ್ಚುತ್ತಿದೆ. ಅಲ್ಲದೆ, ಭಯೋತ್ಪಾದಕರ ಚಟುವಟಿಕೆಗಳು ಹೆಚ್ಚಾಗುತ್ತಿವೆ ಹಾಗೂ ಅವು ಇನ್ನಷ್ಟು ವಿಸ್ತಾರವಾಗುತ್ತಿವೆ ಎಂಬ ಭಾವನೆ ಇದೆ.



ಭಯೋತ್ಪಾದಕರು ಹೊಂದಿರಬಹುದಾದ ಸಂಪರ್ಕಗಳನ್ನು ಕಡಿಯಲು ಸಮುದಾಯಗಳ ಮಟ್ಟದಲ್ಲಿಯೂ ಒಂದಿಷ್ಟು ಕೆಲಸಗಳನ್ನು ಮಾಡಬೇಕಿದೆ

ಜಮ್ಮು ಮತ್ತು ಕಾಶ್ಮೀರದಲ್ಲಿನ ಭಯೋತ್ಪಾದಕ ದಾಳಿಗಳಲ್ಲಿ ಈಗ ಕಾಣುತ್ತಿರುವ ಪ್ರಮುಖ ಅಂಶವೆಂದರೆ, ಭಯೋತ್ಪಾದಕರ ಚಟುವಟಿಕೆಗಳು ಕಣಿವೆ ಪ್ರದೇಶದ ಬದಲು ಜಮ್ಮು ಪ್ರದೇಶದಲ್ಲಿ ಹೆಚ್ಚಾಗಿ ನಡೆಯುತ್ತಿರುವುದು. ಕಳೆದ ಕೆಲವು ತಿಂಗಳುಗಳಲ್ಲಿ ವರದಿಯಾದ ಬಹುತೇಕ ಪ್ರಕರಣಗಳು ನಡೆದಿರುವುದು ಜಮ್ಮು ಪ್ರದೇಶದಲ್ಲಿ. ತೀರಾ ಈಚಿನವರೆಗೆ ಈ ಪ್ರದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗಿರಲಿಲ್ಲ. ಇದಕ್ಕೆ ಕಾರಣಗಳು ಹಲವು ಇರಬಹುದು. ಹಿಂದೆ ಭಯೋತ್ಪಾದಕರು ಬಹಳ ಸಕ್ರಿಯರಾಗಿದ್ದ ಕಣಿವೆ ಪ್ರದೇಶದಲ್ಲಿ ಹೆಚ್ಚಿನ ಕಣ್ಗಾವಲು ಇದೆ, ಅಲ್ಲಿ ಭದ್ರತಾ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಮಳೆಗಾಲದಲ್ಲಿ ಪಾಕಿಸ್ತಾನದ ಕಡೆಯಿಂದ ಭಾರತಕ್ಕೆ ನುಸುಳುತ್ತಿರುವ ಭಯೋತ್ಪಾದಕರ ಸಂಖ್ಯೆ ಹೆಚ್ಚಾಗಿದೆ ಎಂದು ಕೆಲವು ವರದಿಗಳು ಹೇಳುತ್ತಿವೆ. ಹೀಗೆ ನುಸುಳುವವರ ಸಂಖ್ಯೆಯು ಚಳಿಗಾಲದಲ್ಲಿ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಭದ್ರತಾ ಸಿಬ್ಬಂದಿ ಕಡಿಮೆ ಸಂಖ್ಯೆಯಲ್ಲಿ ಇರುವ ಜಮ್ಮು ಪ್ರದೇಶದ ಮೇಲೆ ಭಯೋತ್ಪಾದಕರು ಈಗ ಕಣ್ಣಿರಿಸಿದ್ದಾರೆ ಎಂಬ ವಾದ ಇದೆ. ಜಮ್ಮು ಭಾಗದಲ್ಲಿ ಇದ್ದ ಭದ್ರತಾ ಸಿಬ್ಬಂದಿಯಲ್ಲಿ ಹಲವರನ್ನು ಲಡಾಖ್‌ನಲ್ಲಿ ವಾಸ್ತವ ಗಡಿ ನಿಯಂತ್ರಣ ರೇಖೆಗೆ ಸ್ಥಳಾಂತರಿಸಲಾಗಿದೆ. ಭಯೋತ್ಪಾದಕರ ಬಳಿ ಅತ್ಯಾಧುನಿಕ ಸಲಕರಣೆಗಳು ಹಾಗೂ ಶಸ್ತ್ರಾಸ್ತ್ರಗಳು ಇವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸೆಪ್ಟೆಂಬರ್ ಅಂತ್ಯದೊಳಗೆ ಚುನಾವಣೆ ನಡೆಯಬೇಕಿದೆ. ಅಲ್ಲಿ ಚುನಾವಣೆಯ ನಂತರ ಪರಿಸ್ಥಿತಿ ಸಹಜವಾಗಬಹುದು, ಹಾಗಾಗದಂತೆ ನೋಡಿಕೊಳ್ಳಬೇಕು ಎಂಬ ಕೆಟ್ಟ ಉದ್ದೇಶ ಭಯೋತ್ಪಾದಕರಿಗೆ ಹಾಗೂ ಅವರಿಗೆ ಬೆಂಬಲ ಒದಗಿಸುತ್ತಿರುವವರಿಗೆ ಇದ್ದಿರಬಹುದು ಅಥವಾ ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ನಡೆಯುವುದೇ ಅವರಿಗೆ ಇಷ್ಟವಿಲ್ಲದಿರಬಹುದು.

ಪಾಕಿಸ್ತಾನದ ಬೆಂಬಲ ಇರುವ ಜೈಷ್‌-ಎ-ಮೊಹಮ್ಮದ್ ಉಗ್ರಗಾಮಿ ಸಂಘಟನೆಗೆ ಸೇರಿರುವ 'ಕಾಶ್ಮೀರ್ ಟೈಗರ್ಸ್' ಎಂಬ ಸಂಘಟನೆಯು ಕೆಲವು ದಾಳಿಗಳಿಗೆ ಹೊಣೆ ಹೊತ್ತುಕೊಂಡಿದೆ. ಜಮ್ಮು ಪ್ರದೇಶದಲ್ಲಿ ತನ್ನ ಅಸ್ತಿತ್ವ ವಿಸ್ತರಿಸಿಕೊಳ್ಳಲು ಲಷ್ಕರ್‌-ಎ-ತಯ್ಯಬಾ ಕೂಡ ಹವಣಿಸುತ್ತಿದೆ ಎಂಬ ವರದಿಗಳಿವೆ. ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇರಿಸುವ ಹೊಣೆಯು ಭದ್ರತಾ ಪಡೆಗಳು ಹಾಗೂ ಸರ್ಕಾರದ ಮೇಲಿದೆ. ಜಮ್ಮು ಪ್ರದೇಶದಲ್ಲಿ ಜೀವ ಹಾನಿಯನ್ನು ತಪ್ಪಿಸಬೇಕು. ಪರಿಸ್ಥಿತಿ ಹದಗೆಡುತ್ತಿರುವುದು ಜಮ್ಮುವಿನಲ್ಲೂ ದೇಶದ ಇತರೆಡೆಗಳಲ್ಲೂ ಕಳವಳಕ್ಕೆ ಕಾರಣವಾಗಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಎಲ್ಲ ರೀತಿಯಲ್ಲಿಯೂ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಿಗಳಿಗೆ, ಭದ್ರತಾ ಪಡೆಗಳಿಗೆ ಸೂಚಿಸಿದ್ದಾರೆ. ಭಯೋತ್ಪಾದಕರು ಹೊಂದಿರಬಹುದಾದ ಸಂಪರ್ಕಗಳನ್ನು ಕಡಿಯಲು ಸಮುದಾಯಗಳ ಮಟ್ಟದಲ್ಲಿಯೂ ಒಂದಿಷ್ಟು ಕೆಲಸಗಳನ್ನು ಮಾಡಬೇಕಿದೆ.

ದಿನದ ಟ್ವೀಟ್

ಶಾಲೆಗಳಿಗೆ ನೀಡಲಿ

ಕರ್ನಾಟಕ ಸರ್ಕಾರವು ಹಾಲಿನ ಗ್ರಾಹಕರಿಗೆ ಹೆಚ್ಚುವರಿ ದರ ವಿಧಿಸುವುದಕ್ಕೆ ಬದಲಾಗಿ, ಹೆಚ್ಚುವರಿ ಹಾಲನ್ನು ಶಾಲಾ ಮಕ್ಕಳಿಗೆ ನೀಡಬಾರದೇಕೆ?

ರಾಘವೇಂದ್ರ ಎಚ್.ವಿ.

ಕಿಡಿನುಡಿ

ಒರಟು ಚಾಲಕರು ಲೇನ್ ವ್ಯವಸ್ಥೆಯನ್ನು ಪಾಲಿಸುವುದಿಲ್ಲ. ಮೂರನೇ ಲೇನ್ ಅಂದರೆ ನಿಧಾನಗತಿಯ ಲೇನ್ ಭಾರಿ ವಾಹನಗಳಿಗೆ ಇರಬೇಕು. ಲೇನ್ ವ್ಯವಸ್ಥೆಯನ್ನು ಅನುಸರಿಸದಿರುವುದು ಅಪಘಾತದ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.



ಜೋಸೆಫ್ ಎ. ಡಿಸೋಜ

25 ವರ್ಷಗಳ ಹಿಂದೆ

ಶನಿವಾರ, 17-7-1999

• ಮಥುರಾ ಬಳಿ ರೈಲುಗಳ ಡಿಕ್ಕಿ 18 ಸಾವು, 185 ಮಂದಿಗೆ ಗಾಯ

ನವದೆಹಲಿ, ಜುಲೈ 16 (ಯುಎನ್‌ಐ)– ಹಳಿ ತಪ್ಪಿದ ಗೂಡ್ಸ್ ರೈಲಿನ ಬೋಗಿಗಳಿಗೆ ಚೆನ್ನೈ–ದೆಹಲಿ ಜಿ.ಟಿ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದು ಕನಿಷ್ಠ 18 ಮಂದಿ ಸತ್ತು, 185ಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿರುವ ದುರ್ಘಟನೆ ಕೇಂದ್ರ ರೈಲ್ವೆಯ ಮಥುರಾ– ಆಗ್ರಾ ಸೆಕ್ಷನ್‌ನಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಉತ್ತರ ಪ್ರದೇಶದ ಝಾನ್ಸಿ ವಿಭಾಗದ ಫರ್ರುಖಾಬಾದ್ ವಿಭಾಗದಲ್ಲಿ ಹಳಿ ತಪ್ಪಿ ಮಾರ್ಗದಲ್ಲಿ ಅಡ್ಡಲಾಗಿ ಬಿದ್ದಿದ್ದ ಗೂಡ್ಸ್ ರೈಲಿನ ಬೋಗಿಗಳಿಗೆ ಈ ನತದೃಷ್ಟ ರೈಲು ಮುಂಜಾನೆ 2.14ರ ವೇಳೆಗೆ ಡಿಕ್ಕಿ ಹೊಡೆದಾಗ ಈ ಅಪಘಾತ ಸಂಭವಿಸಿದೆ.

ಆಗ್ರಾ ಹಾಗೂ ಮಥುರಾದ ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಈ ನಡುವೆ ಬಹುತೇಕ ಗಾಯಾಳುಗಳನ್ನು ವಿಶೇಷ ರೈಲಿನಲ್ಲಿ ನವದೆಹಲಿಗೆ ಕರೆತಂದು ಚಿಕಿತ್ಸೆ ನೀಡಲಾಗಿದೆ.

• ಪಟೇಲ್ ದಿಢೀರ್ ನಿಲುವು ದಳದಲ್ಲಿ ತೀವ್ರ ಗೊಂದಲ

ಬೆಂಗಳೂರು, ಜುಲೈ 16– ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವನ್ನು ಸೇರುವುದಕ್ಕೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ತಾತ್ವಿಕ ಒಪ್ಪಿಗೆ ಸೂಚಿಸಿರುವುದು ರಾಜ್ಯ ಜನತಾದಳದ ನಾಯಕರಲ್ಲಿ ತೀವ್ರ ಗೊಂದಲ, ತಳಮಳ ಉಂಟು ಮಾಡಿದೆ.

ಲೋಕಸಭೆ ಮತ್ತು ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವ ಸಂದರ್ಭದಲ್ಲಿ ರಾಜ್ಯ ಜನತಾದಳ ರಾಜಕೀಯವಾಗಿ ಮುಂದೆ ಇಡಬೇಕಾದ ಹೆಜ್ಜೆಯ ಬಗ್ಗೆ ಮುಖ್ಯಮಂತ್ರಿ ಪಟೇಲ್ ಅವರು ಹಠಾತ್ತಾಗಿ ಪ್ರಕಟಿಸಿರುವ ನಿರ್ಧಾರದಿಂದ ಆಘಾತಗೊಂಡಿರುವ ದಳದ ಮುಖಂಡರು ಈ ಬಗ್ಗೆ ಯಾವುದೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಲೂ ಆಗದ ಪರಿಸ್ಥಿತಿಯಲ್ಲಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 17-7-1974

• ಸೈಪ್ರಸ್ ಸೇನಾಕ್ರಾಂತಿ ಯಶಸ್ವಿಯಾಗಿಲ್ಲ: ಮಕಾರಿಯೋಸ್ ಹೇಳಿಕೆ

ಬೈರೂತ್, ಜುಲೈ 16– ಸೈಪ್ರಸ್‌ನಲ್ಲಿ ನಡೆದ ಕ್ಷಿಪ್ರ ಸೇನಾಕ್ರಾಂತಿ ಎದುರಿಸುವುದರಲ್ಲಿ ಜನತೆಗೆ ನೆರವು ನೀಡಬೇಕೆಂದು ಅಧ್ಯಕ್ಷ ಮಕಾರಿಯೋಸ್ ಅವರು ಇಂದು ವಿಶ್ವದ ಶಕ್ತಿ ರಾಷ್ಟ್ರಗಳಲ್ಲಿ ಮನವಿ ಮಾಡಿಕೊಂಡ ವಿಷಯವನ್ನು ಬೈರೂತ್ ರೇಡಿಯೊ ಬಿತ್ತರಿಸಿತು.

ಜನತಾ ವಿರೋಧದ ಕಾರಣ ಸೇನಾಕ್ರಾಂತಿ ಫಲಿಸಿಲ್ಲ. 'ನಾನಿನ್ನೂ ಜೀವಂತವಾಗಿದ್ದೇನೆ' ಎಂದು ಮಕಾರಿಯೋಸ್ ಹೇಳಿದರೆಂದು ಅದೇ ರೇಡಿಯೊ ತಿಳಿಸಿತು.

ಆರ್ಚ್ ಬಿಷಪ್ ಮಕಾರಿಯೋಸ್ ಅವರು ಸೇನಾಕ್ರಾಂತಿಯಲ್ಲಿ ಸತ್ತುಹೋದರೆಂದು ಬಂಡಾಯ ರೇಡಿಯೊ ಬಿತ್ತರಿಸಿತ್ತು.

• ಕೇಂದ್ರ, ರಾಜ್ಯ ಸರ್ಕಾರಗಳ ಬಲ ಕುಗ್ಗಿಸಲು ವಿರೋಧ ಪಕ್ಷಗಳ ಯತ್ನ

ಭೋಪಾಲ್, ಜುಲೈ 16– ವಿರೋಧ ಪಕ್ಷಗಳು 'ಭ್ರಷ್ಟಾಚಾರದ ಸುಳ್ಳು ಆಪಾದನೆಗಳನ್ನು' ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿವೆ ಎಂದು ಪ್ರಧಾನಿ ಇಂದಿರಾ ಗಾಂಧಿಯವರು ಆರೋಪಿಸಿದ್ದಾರೆ.

ವಿರೋಧ ಪಕ್ಷಗಳು ದೇಶದ ಆರ್ಥಿಕ ಸಮಸ್ಯೆಗಳನ್ನು ನಿವಾರಣೆ ಮಾಡಲು ಸರ್ಕಾರಕ್ಕೆ ನೆರವಾಗುವುದರ ಬದಲು, ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗುವಂತೆ ಮಾಡಿ ಬಡಜನರ ಸಂಕಷ್ಟ ಹೆಚ್ಚಲು ಕಾರಣವಾಗುತ್ತಿವೆ ಎಂದೂ ಅವರು ಇಂದು ಇಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದರಲ್ಲಿ ಟೀಕಿಸಿದರು.

ಕನ್ನಡದ ಪ್ರಾಣಶಕ್ತಿಯೇ ಕ್ಷೀಣಿಸುತ್ತಿರುವಾಗ ಮಹಾಪ್ರಾಣಗಳ ಬಗ್ಗೆ ಆತಂಕ!

'ಎಲ್ಲರ ಕನ್ನಡ' ಎಲ್ಲರದಾಗುವುದು ಸಾಧ್ಯವೇ?



ಪಡಸಾಲೆ

ರಘುನಾಥ ಚ.ಹ.

ಕನ್ನಡಾ! ಕನ್ನಡ, ಹಾ, ಸವಿಗನ್ನಡ! ಎನ್ನುವುದು ಕುವೆಂಪು ಅವರ ಉದ್ಗಾರ. ಸದ್ಯಕ್ಕೆ ಚರ್ಚೆಯಲ್ಲಿರುವುದು, 'ಕನ್ನಡಾ! ಕನ್ನಡ, ಹಾ, ಎಲ್ಲರ ಕನ್ನಡ!'

'ಎಲ್ಲರ ಕನ್ನಡ'ವಾದಿಗಳ ಉತ್ಸಾಹಕ್ಕೆ ನಿದರ್ಶನವಾಗಿ, ನಿರೂಪಕಿ-ಕಲಾವಿದೆ ಅಪರ್ಣಾ ಅವರ ಸಾವಿನ ಸಂದರ್ಭವೂ ನುಡಿ ವ್ಯಸನ ಹಾಗೂ ನುಡಿ ಸರಳೀಕರಣದ ಕುರಿತ ಚರ್ಚೆಗೆ ಬಳಕೆಯಾಯಿತು. ಸಾವಿಗೀಡಾದ ಕನ್ನಡತಿ ಬಳಸುತ್ತಿದ್ದ ಭಾಷೆಯನ್ನು ಭಾಷಾ ಶ್ರೇಷ್ಠತೆಯ ವ್ಯಸನದಿಂದ ಕೂಡಿದ 'ಶಿಷ್ಟ ಕನ್ನಡ'ವೆಂದು ಕೆಲವರು ಗುರ್ತಿಸಿದರೆ, ಮತ್ತೆ ಕೆಲವರು ಶಿಷ್ಟ ಕನ್ನಡದ ಹಿಂದಿರಬಹುದಾದ ಜಾತಿಯ ವಾಸನೆ-ಮನಃಸ್ಥಿತಿಯ ಬಗ್ಗೆ ಟಿಪ್ಪಣಿ ದಾಖಲಿಸಿದರು. ಬಾಳಿನುದ್ದಕ್ಕೂ ಕನ್ನಡದ ಹಿರಿಮೆಯ ಬಗ್ಗೆ ಮಾತನಾಡಿದ, ಅಸಂಖ್ಯಾತ ಕನ್ನಡಿಗರಿಗೆ ತಮ್ಮ ನುಡಿಯ ಬಗ್ಗೆ ಹೆಮ್ಮೆ ಮೂಡಿಸಿದ ಹೆಣ್ಣುಮಗಳನ್ನು ಸಾವಿನ ಸಂದರ್ಭದಲ್ಲಿ ಹೀಗೂ ನೆನಪಿಸಿಕೊಳ್ಳಬಹುದು ಎನ್ನುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ನಡೆದ ಚರ್ಚೆಗಳು ಉದಾಹರಣೆಯಂತಿದ್ದವು.


ಸಾವಿನ ಮನೆಯಲ್ಲಿನ ಮೌನವನ್ನು ಕಲಕುವ ಮಾತು-ಕತೆಗಳು ಇತ್ತೀಚಿನ ವರ್ಷಗಳಲ್ಲಿ ಮತ್ತೆ ಮತ್ತೆ ಕಂಡಿರುವಾಗ, ಅಪರ್ಣಾ ಅವರ ಸಾವಿನ ಸಂದರ್ಭದ ಚರ್ಚೆಗಳನ್ನು ಅಸಹಜ ಎನ್ನುವಂತಿಲ್ಲ. ಆದರೆ, ಕನ್ನಡವನ್ನು ಸರಳಗೊಳಿಸಬೇಕು ಎಂದು ಬಯಸುವವರು ತಮ್ಮ ಮಾತುಗಳಿಗೆ ತಂದುಕೊಂಡ ಜಡತೆ ಹಾಗೂ ಕಾಠಿಣ್ಯ ಆಶ್ಚರ್ಯ ಹುಟ್ಟಿಸುವಂತಹದ್ದು. ಭಾಷೆಯ ಮೆದುಗೊಳಿಸಲು ಹಂಬಲಿಸುವವರ ನಡೆ-ನುಡಿಯಲ್ಲೇ ಕಾಠಿಣ್ಯ ಇರುವುದನ್ನು ಸಹಜ ಎನ್ನಲಾಗದು.

'ಎಲ್ಲರ ಕನ್ನಡ' ಹೆಸರಿನಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ಗಮನಿಸಿ. 'ಶಿಷ್ಟ ಕನ್ನಡ' ಅಥವಾ 'ಶುದ್ಧ ಕನ್ನಡ'ಕ್ಕೆ ಪರ್ಯಾಯವಾಗಿ ಮಹಾಪ್ರಾಣಗಳಿಲ್ಲದ ಕನ್ನಡವನ್ನು ಬಯಸುವವರು ತಾವು ಬಳಸುವ ಕನ್ನಡವನ್ನು 'ಎಲ್ಲರ ಕನ್ನಡ' ಎಂದು ಕರೆಯುತ್ತಿದ್ದಾರೆ. ಆದರೆ, ಶುದ್ಧ ಕನ್ನಡ ಎನ್ನುವುದು ಇರುವುದು ಹೇಗೆ ಸಾಧ್ಯವಿಲ್ಲವೋ ಎಲ್ಲರ ಕನ್ನಡ ಇರುವುದೂ ಸಾಧ್ಯವಿಲ್ಲ. ಭಾಷೆಯಲ್ಲಿನ ಶುದ್ಧತೆ, ಶಿಷ್ಟತೆಯನ್ನು ವಿರೋಧಿಸುವವರ ಮಾತುಗಳಲ್ಲಿ ಭಾಷಾ ಸುಧಾರಣೆಗಿಂತಲೂ ಅವರು ಬಳಸುವ ಕನ್ನಡಕ್ಕೆ ಶಿಷ್ಟತೆಯನ್ನು ತಂದುಕೊಡುವ ಪ್ರಯತ್ನವೇ ಎದ್ದುಕಾಣಿಸುತ್ತದೆ. ಜೀವವಿರೋಧಿ ಸಿದ್ಧಾಂತಗಳನ್ನು ವಿರೋಧಿಸುವ ಭರದಲ್ಲಿ ತಾವು ಎದುರಿಸುತ್ತಿರುವವರ ನಡೆನುಡಿಗಳನ್ನೇ ಮೈಗೂಡಿಸಿಕೊಳ್ಳುವ ವಿರೋಧಾಭಾಸ ಭಾಷಾ ಸುಧಾರಣೆ ಸಂದರ್ಭದಲ್ಲೂ ಇದೆ.

'ಎಲ್ಲರ ಕನ್ನಡ' ಪ್ರತಿಪಾದಕರ ವಿರೋಧವನ್ನು ಸರಳವಾಗಿ ನೋಡುವುದೂ ಸಾಧ್ಯವಿಲ್ಲ. ಈ ಟೀಕೆ ಟಿಪ್ಪಣಿಗಳನ್ನು, ಗ್ರಾಮ್ಯ ಕನ್ನಡ ಅಥವಾ ಮಹಾಪ್ರಾಣಗಳ ಜಾಗದಲ್ಲಿ ಅಲ್ಪಪ್ರಾಣ ಬಳಸುವವರನ್ನು ಭಾಷಾಶುದ್ಧತೆಯ ಹೆಸರಿನಲ್ಲಿ ಅವಹೇಳನ ಮಾಡುವ ಪ್ರಯತ್ನಗಳ ಹಿನ್ನೆಲೆಯಲ್ಲಿ ನೋಡಬೇಕು. ಆದರೆ, ಯಾವ ಅವಹೇಳನವನ್ನು ನಾವು ಆಕ್ಷೇಪಿಸುತ್ತೇವೆಯೋ ಅದನ್ನು ವಿರೋಧಿಸುವ ನಿಟ್ಟಿನಲ್ಲಿ ಅದೇ ಅಮಾನವೀಯ ನಡೆನುಡಿಯನ್ನು ರೂಢಿಸಿಕೊಳ್ಳುವುದು ರಚನಾತ್ಮಕವೂ ಅಲ್ಲ, ಸೃಜನಶೀಲವೂ ಅಲ್ಲ.

'ಎಲ್ಲರ ಕನ್ನಡ' ಎನ್ನುವ ಪರಿಭಾಷೆ ಎಷ್ಟರಮಟ್ಟಿಗೆ ಪ್ರಜಾಸತ್ತಾತ್ಮಕವಾದುದು ಎನ್ನುವುದರ ಬಗ್ಗೆಯೂ ಚರ್ಚೆ ನಡೆಯಬೇಕಾಗಿದೆ. ಈ ಪರಿಕಲ್ಪನೆ, ಕವಿರಾಜಮಾರ್ಗಕಾರನ ಹಲವು ಕನ್ನಡಂಗಳ ಪರಿಕಲ್ಪನೆಗೆ ವಿರುದ್ಧವಿರುವಂತಿದೆ. 'ಹಲವು ಕನ್ನಡಂಗಳು' ಕನ್ನಡ ಸಮಾಜದಲ್ಲಿನ ಬಹುತ್ವವನ್ನು ನುಡಿಯಲ್ಲೂ ಕಾಣುವ ಹಂಬಲವಾದರೆ, 'ಎಲ್ಲರ ಕನ್ನಡ' ನುಡಿಗೆ ಏಕಾಕಾರವನ್ನು ತರುವ ಪರಿಕಲ್ಪನೆಯಾಗಿದೆ. ಕನ್ನಡವನ್ನು ಬಹುರೂಪಿಯಾಗಿ ಕಂಡ ಕವಿರಾಜಮಾರ್ಗಕಾರನ ನೋಟವನ್ನು ವಿಸ್ತರಿಸಬೇಕಾದ, ಕನ್ನಡಕ್ಕೆ ಸಂಬಂಧಿಸಿದ 'ಹಲವು' ವಿಶೇಷಣವನ್ನು ವ್ಯಕ್ತಿಗತವಾಗಿ ನೋಡಬೇಕಾದ ಸಂದರ್ಭ ಇಂದಿನದು. ಸೂಕ್ಷ್ಮವಾಗಿ ಗಮನಿಸಿದರೆ, ಒಬ್ಬರ ಕನ್ನಡ ಪೂರ್ಣ ರೂಪದಲ್ಲಿ ಇನ್ನೊಬ್ಬರದಾಗಿರುವುದು ಸಾಧ್ಯವೇ ಇಲ್ಲ. ಆಡುವ ಮಾತಿನಲ್ಲಿ ವ್ಯಕ್ತಿತ್ವವೂ ಇರುವುದರಿಂದ, 'ನನ್ನ ಕನ್ನಡ' ನನ್ನದಷ್ಟೇ ಆಗಿರುತ್ತದೆ. ಆರು ಕೋಟಿ ಕನ್ನಡಿಗರಿದ್ದಾರೆಂದರೆ, ಆರು ಕೋಟಿ ಕನ್ನಡಗಳೂ ಅಸ್ತಿತ್ವದಲ್ಲಿರುತ್ತವೆ. ಹಾಗಾಗಿ, 'ಎಲ್ಲರ ಕನ್ನಡ' ಎನ್ನುವುದು ಭಾವುಕ ಪರಿಕಲ್ಪನೆಯೇ ಹೊರತು ವಾಸ್ತವವಲ್ಲ; ಅದು ಕನ್ನಡದ ನಾಳೆಗಳ ಹೊಳಪೂ ಅಲ್ಲ.

ನುಡಿಗೆ ತೊಡಕಿನ ರೂಪದಲ್ಲಿ ಮಹಾಪ್ರಾಣಗಳನ್ನು ಗುರ್ತಿಸಿ, ಅವುಗಳನ್ನು ವಿಸರ್ಜಿಸಲು ಮುಂದಾಗುವುದು ಕನ್ನಡದ ಪ್ರಾಣವನ್ನೇ ಹಿಂಡುತ್ತಿರುವಂತೆ ಕೆಲವರಿಗೆ ಕಾಣಿಸಿದರೆ ಅಸಹಜವೇನೂ ಅಲ್ಲ. ಭಾಷೆಗೆ ಚೌಕಟ್ಟನ್ನು ಕಲ್ಪಿಸುವ ವ್ಯಾಕರಣಿಗಳು ಉಳಿದಿರುವುದು ಶಾಸ್ತ್ರಕೃತಿಗಳಲ್ಲಷ್ಟೇ. ಹಾಗಾಗಿ, ಭಾಷಾ ಬಳಕೆಗೆ ಸಂಬಂಧಿಸಿದಂತೆ ನಿರ್ದೇಶಿಸುವ ಮನೋಭಾವ ಮೊದಲು ವಿಸರ್ಜನೆಯಾಗಬೇಕು. ಮಹಾಪ್ರಾಣಗಳನ್ನು ಬಳಸುವವರು ಬಳಸಲಿ. ಬೇಡದವರು ಬಿಡಲಿ. ಅದು ಅವರವರ ಅನುಕೂಲ, ಆಯ್ಕೆ. ಸಾಹಿತ್ಯ ರಚನೆ ಸಂದರ್ಭದಲ್ಲಿ ಪೊರೆಗಳನ್ನು ಕಳಚಿಕೊಳ್ಳುವ ರೂಢಿ ಸಾವಿರಾರು ವರ್ಷಗಳಿಂದ ಕನ್ನಡದಲ್ಲಿದೆ; ಆ ಅಭ್ಯಾಸ ಇಂದೂ ಮುಂದೂ ಸಹಜವಾಗಿ ಮುಂದುವರಿಯಲಿದೆ. ಊರುಕೇರಿಗಳ ಕಳ್ಳುಬಳ್ಳಿಗಳ ಬಂಧುಗಳ ಕನ್ನಡವಂತೂ ಅಲ್ಪ-ಮಹಾ ಪ್ರಾಣಗಳೆನ್ನುವ ಹಂಗಿಗೆ ಎಂದೂ ಒಳಗಾಗಿದ್ದಿಲ್ಲ. ವಾಸ್ತವ ಹೀಗಿರುವಾಗ, 'ಎಲ್ಲರ ಕನ್ನಡ' ಎಂದು ಹೇಳುವುದು, ಮಹಾಪ್ರಾಣ ಬಳಸುವವರನ್ನು ಶ್ರೇಷ್ಠತೆಯ ವ್ಯಸನಿಗಳೆಂದೂ ಜಾತಿಯ ಮೇಲರಿಮೆಯವರೆಂದೂ ಹಣೆಪಟ್ಟಿ ಕಟ್ಟುವುದು ಕನ್ನಡದ ಮರ್ಯಾದೆಯನ್ನು ಹೆಚ್ಚಿಸುವುದಿಲ್ಲ.



ಆಡುವ ಮಾತು ಹಾಗೂ ಸೃಜನಶೀಲ ಬರವಣಿಗೆಯ ನುಡಿಗೆ ಯಾವ ಕಟ್ಟುಪಾಡೂ ಇಲ್ಲ. 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ಮಾತಿನಲ್ಲಿನ ಕನ್ನಡದ ಚೆಲುವು, ಆರ್ದ್ರತೆಯನ್ನು ಅಶಿಷ್ಟನುಡಿಯೆಂದು ನಿರಾಕರಿಸುವುದು ಸಾಧ್ಯವೆ? ಸಂಬಂಧದ ಅನನ್ಯತೆಯನ್ನು ಇಷ್ಟು ಸರಳವಾಗಿ ಹಾಗೂ ಸೊಗಸಾಗಿ ಕಟ್ಟಿಕೊಡುವ ಮತ್ತೊಂದು ಮಾತು ಕನ್ನಡದಲ್ಲಿಲ್ಲ. ದೇವನೂರರ ಕಥೆಗಳು, ಮೊಗಳ್ಳಿ ಗಣೇಶರ 'ಬುಗುರಿ', ಸಿದ್ಧಲಿಂಗಯ್ಯನವರ 'ಇಕ್ರಲಾ ವದೀರ್ಲಾ'- ಇವುಗಳನ್ನು ಭಾಷಾ ವ್ಯಸನದ ಹೆಸರಿನಲ್ಲಿ ಯಾರೂ ನಿರಾಕರಿಸಲಾಗದು. ಕನ್ನಡದ ಸಾಧ್ಯತೆಗಳನ್ನು ವಿಸ್ತರಿಸಿದ ಈ ಕೃತಿಗಳನ್ನು ಶಂಕಿಸುವವರ ಕನ್ನಡತನದ ಅಸಲಿಯತ್ತೇ ಪ್ರಶ್ನಾರ್ಹ. ಶಿಷ್ಟತೆಯ ಅಗತ್ಯ ಇರುವುದು ಶಿಕ್ಷಣದ ಭಾಷೆಗೆ. ಶೈಕ್ಷಣಿಕ ನುಡಿಗಟ್ಟು ಕೂಡ ಕಾಲದಿಂದ ಕಾಲಕ್ಕೆ ಮಗ್ಗುಲು ಬದಲಿಸುತ್ತಲೇ ಇದೆ. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದನ್ನು ಶಿಕ್ಷಣ ತಜ್ಞರಿಗೇ ಬಿಡುವುದು ಒಳ್ಳೆಯದು.

ಕನ್ನಡದ ಬೊಜ್ಜಿಳಿಸುತ್ತೇವೆ, ಸರಳಗೊಳಿಸುತ್ತೇವೆ ಎನ್ನುವ ಮನೋಭಾವ ಫ್ಯಾಷನ್ ಜಗತ್ತಿನ 'ಜೀರೊ ಫಿಗರ್' ಪರಿಕಲ್ಪನೆಗೆ ಹತ್ತಿರವಾದುದು. ಕನ್ನಡದ ಸದ್ಯದ ಸ್ಥಿತಿಯಲ್ಲಿ ಈ ಕಸರತ್ತೇ ಅನಗತ್ಯವಾದುದು. ಇವತ್ತಿನ ನಮ್ಮ ಕನ್ನಡ ಕಲಿಕೆಯ ಸ್ಥಿತಿಗತಿ, ಕನ್ನಡವನ್ನು ತಂತಾನೇ ಸವೆಯಲು ಬಿಡುವಂತಿದೆ. ಕನ್ನಡ ಮೇಷ್ಟ್ರುಗಳು, 'ಬ್ರೊ' ಜಮಾನದ ಕಣ್ಮಣಿಗಳು, ಮಾಧ್ಯಮದ ಮಂದಿ, ಕನ್ನಡ ಶಾಲೆಗಳ ಬಗ್ಗೆ ಕುರುಡು ಕಿವುಡಾಗಿರುವ ಸರ್ಕಾರಗಳು – ಎಲ್ಲರ ಒಕ್ಕೊರಲು, ಒಮ್ಮನಸಿನ ಪ್ರಯತ್ನದಿಂದಾಗಿ ಕನ್ನಡ ಸಹಜವಾಗಿಯೇ ಬಡಕಲಾಗಿದೆ, ಸವಕಲಾಗುತ್ತಿದೆ. ಕನ್ನಡದ ಸಹೃದಯರನ್ನು ಲಂಕೇಶ್ 'ಜಾಣ ಜಾಣೆಯರು' ಎಂದು ಕರೆದರು. ಅವರೀಗ ಮಚ್ಚ-ಮಚ್ಚಿಯರಾಗಿದ್ದಾರೆ. ಈ ಮಚ್ಚ ಮಚ್ಚಿಯರು ಹಾಗೂ ಸುದ್ದಿಯುತ್ಪಾತದ ಟೀವಿ ಆ್ಯಂಕರ್‌ಗಳು ಕನ್ನಡವನ್ನು ಹಿಂಡುವುದಕ್ಕೆ ತಮ್ಮೆಲ್ಲ ಸಾಮರ್ಥ್ಯ ಬಳಸಿದ್ದಾರೆ. ಈ ಸರಳೀಕರಣವನ್ನು ಒಪ್ಪುವುದಾದರೆ ಅದು ಕೂಡ 'ಎಲ್ಲರ ಕನ್ನಡ'ವೇ.

ಮಹಾಪ್ರಾಣಗಳ ಕುರಿತ ಆತಂಕ, ಕನ್ನಡ ನುಡಿಯ ಸಮಕಾಲೀನ ಸಂಕಷ್ಟಗಳ ಸರಳೀಕರಣವೂ ಹೌದು. ಸಂಸ್ಕೃತ, ಇಂಗ್ಲಿಷ್, ಹಿಂದಿಯ ಸವಾಲುಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ನಮಗಿನ್ನೂ ಸಾಧ್ಯವಾಗಿಲ್ಲ. ಈ ಕುತ್ತುಗಳ ಜೊತೆಗೆ ಬದುಕಿನ ಭ್ರಷ್ಟತೆ, ಅನೈತಿಕತೆ ಭಾಷೆಯಲ್ಲೂ ಮೈದಳೆದು, ಕನ್ನಡನುಡಿ ತನ್ನ ಧ್ವನಿಶಕ್ತಿ ಕಳೆದುಕೊಳ್ಳುತ್ತಿದೆ. ಬದುಕಿನಲ್ಲಿನ ಒಡಕು ಮಾತಿನಲ್ಲೂ ಧ್ವನಿಸುತ್ತಿದೆ. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನುವಂತಿದ್ದ ಜೀವಶಕ್ತಿಯ ನುಡಿ, ಜೀವಹರಣದ ಹಗೆಯ ಗುಣವನ್ನು ಪಡೆದುಕೊಂಡಿರುವುದಕ್ಕೆ ನಿತ್ಯವೂ ನಿದರ್ಶನಗಳನ್ನು ಕಾಣುತ್ತಿದ್ದೇವೆ. ವ್ಯಕ್ತಿಯ ಸಾವಿನ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವ ಸಂವೇದನೆಯನ್ನೂ 'ನಮ್ಮ ನುಡಿ' ಕಳೆದುಕೊಳ್ಳುತ್ತಿದೆ. ಆರ್ದ್ರತೆ ಕಳೆದುಕೊಳ್ಳುವುದಕ್ಕಿಂತಲೂ ಮಿಗಿಲಾದ ಸಂಕಷ್ಟ-ಕುತ್ತು ಭಾಷೆಗೆ ಇದೆಯೆ?

ಚುರುಮುರಿ



ನಾಯಿ ಜಗಳ

• ಮಣ್ಣೆ ರಾಜು

'ಬೀದಿನಾಯಿಗಳ ಉಪಟಳ ನಿವಾರಿಸಿ...' ಎಂದು ಒತ್ತಾಯಿಸಿ ನಾಯಿಭಯ ಸಂಘದವರು ಪ್ರತಿಭಟನೆ ಆರಂಭಿಸಿದ್ದರು. 'ಬೀದಿನಾಯಿಗಳಿಗೆ ರಕ್ಷಣೆ ನೀಡಿ...' ಎಂದು ನಾಯಿ ದಯಾ ಸಂಘದವರು ಹೋರಾಟಕ್ಕೆ ಬಂದರು.

'ದಿನನಿತ್ಯ ನಾಯಿ ಕಚ್ಚುವ ಪ್ರಕರಣಗಳು ಹೆಚ್ಚಾಗುತ್ತಿವೆ...' ಅಧಿಕಾರಿ ವರದಿ ಓದಿದರು.

'ಹಾಗೇ, ಜನರು ನಾಯಿಗಳನ್ನು ಚಚ್ಚುವ ಪ್ರಕರಣಗಳನ್ನೂ ದಾಖಲು ಮಾಡಿ' ಎಂದರು ದಯಾ ಸಂಘದವರು. ಎರಡೂ ಕಡೆಯವರು ವಾದಕ್ಕಿಳಿದರು.

'ಬೀದಿನಾಯಿಗಳ ಬೊಗಳಾಟದಿಂದ ನಮಗೆ ರಾತ್ರಿ ನಿದ್ರೆ ಬರುತ್ತಿಲ್ಲ'.

'ನಾಯಿ ಬೊಗಳಾಡಿದರೆ ಕಳ್ಳರು ಬರುವುದಿಲ್ಲ'.

'ಗೋಶಾಲೆಯಂತೆ ಸರ್ಕಾರ ಊರ ಹೊರಗೆ ನಾಯಿಶಾಲೆ ತೆರೆದು ನಾಯಿಗಳಿಗೆ ನೆಲೆ ನೀಡಲಿ'.

'ನೆಲೆ ಬೇಡ, ಉದ್ಯೋಗ ಕೊಟ್ಟರೆ ನಾಯಿಗಳು ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಸ್ವಾವಲಂಬಿಗಳಾಗಿ ಬಾಳುತ್ತವೆ'.

'ಎಜುಕೇಷನ್ ಇಲ್ಲದ ನಾಯಿಗಳು ಏನು ಉದ್ಯೋಗ ಮಾಡ್ತವೆ?!'

'ಮನೆ, ಕಚೇರಿ ಕಾವಲಿಗೆ ನಾಯಿಗಳನ್ನು ನೇಮಿಸಿಕೊಳ್ಳಲಿ. ಸಂಬಳ ಬೇಡ, ಊಟ ಕೊಟ್ಟರೆ ಸಾಕು. ನೀವೂ ಬೀದಿನಾಯಿಗಳನ್ನು ಸಾಕಿರಿ'.

'ಹಸುಗಳನ್ನು ಸಾಕಿದರೆ ಹಾಲು ಕೊಡುತ್ತವೆ, ನಾಯಿಗಳು ಏನು ಕೊಡುತ್ತವೆ?'

'ಜೀವ ಕೊಡುತ್ತವೆ, ಮೊನ್ನೆ ಊರಿಗೆ ನುಗ್ಗಿದ್ದ ಚಿರತೆಯನ್ನು ಬೀದಿನಾಯಿಗಳು ಓಡಿಸಿ ಎಲ್ಲರನ್ನೂ ರಕ್ಷಿಸಿದ್ದವು... ನಾನು ಬೀದಿನಾಯಿ ಸಾಕಿದ್ದೇನೆ, ಅದು ನನ್ನ ಮಗಳನ್ನು ಕರೆದುಕೊಂಡು ಹೋಗಿ ಸ್ಕೂಲ್ ಬಸ್ ಹತ್ತಿಸುತ್ತದೆ, ಸಂಜೆ ಕರೆದುಕೊಂಡು ಬರುತ್ತದೆ' ಎಂದ ಒಬ್ಬ.

'ನಮ್ಮ ನಾಯಿ ಕೊರಳಿಗೆ ಬ್ಯಾಗ್ ನೇತುಹಾಕಿದರೆ ಸಾಕು, ಅಂಗಡಿಗೆ ಹೋಗಿ ಹಾಲು, ತರಕಾರಿ ತರುತ್ತದೆ' ಎಂದ ಇನ್ನೊಬ್ಬ.

ಎರಡೂ ಸಂಘಗಳವರ ಮನವಿಪತ್ರ ಸ್ವೀಕರಿಸಿದ ಅಧಿಕಾರಿ, 'ಸರ್ಕಾರಕ್ಕೆ ಕಳುಹಿಸುತ್ತೇನೆ, ನಾಯಿಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ, ಸರ್ಕಾರ ನ್ಯಾಯಯುತ ತೀರ್ಮಾನ ತೆಗೆದುಕೊಳ್ಳುತ್ತದೆ...' ಎಂದರು.

ಸಂಗತ

ಕ್ರಿಕೆಟ್: ನಡೆಯಲಿ ವಸ್ತುನಿಷ್ಠ ವಿಶ್ಲೇಷಣೆ

ಎಲ್ಲ ಕ್ರೀಡೆಗಳಿಗೂ ಸೂಕ್ತ ರೀತಿಯಲ್ಲಿ ಉತ್ತೇಜನ ಸಿಗಬೇಕಾಗಿದೆ

• ಯೋಗಾನಂದ

'ಕ್ರಿಕೆಟ್ 11 ಮಂದಿ ದಡ್ಡರು ಆಡುವ ಮತ್ತು 11,000 ದಡ್ಡರು ನೋಡುವ ಆಟ' ಎಂದರು ಜಾರ್ಜ್ ಬರ್ನಾರ್ಡ್ ಶಾ. ಅವರ ಟೀಕೆಗೆ ಬಹುತೇಕ ಖಾರವಾದ ಪ್ರತಿಕ್ರಿಯೆಗಳೇ ಬಂದವು. ಅವು ಹೇಗೂ ಇರಲಿ, ಕ್ರಿಕೆಟ್ ಕುರಿತು ಆಗಿಂದಾಗ್ಗೆ ವಸ್ತುನಿಷ್ಠ ವಿಶ್ಲೇಷಣೆಗಳ ಅಗತ್ಯವಂತೂ ಇದೆ.

ರಾಜಕಾರಣ, ಹಣ, ಜೂಜು, ದುರಾಸೆಯಿಂದ ಕ್ರಿಕೆಟ್ 'ಅಧಿಕಾರದ ಆಟ' ಆಗಿರುವುದನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ, ಕ್ರಿಕೆಟ್‌ಗೆ ಈ ಪರಿಯ ಮನ್ನಣೆ, ಆದರ ಬೇಕೆ ಎನ್ನುವುದು ಪ್ರಶ್ನೆ. ಕ್ರೀಡೆಯೆಂದರೆ ಇದೊಂದೇ ಎನ್ನುವಂತೆ ಮಾಧ್ಯಮಗಳು ಅತಿರಂಜಿತವಾಗಿ ಬಿಂಬಿಸುತ್ತವೆ. ಮಕ್ಕಳು ಎಲ್ಲೆಂದರಲ್ಲಿ ಕ್ರಿಕೆಟ್ ಆಟದಲ್ಲಿ ಮೈಮರೆಯುತ್ತವೆ. ಒಂದಷ್ಟು ಜಾಗ, ತುಂಡು ಮರವಿದ್ದರೆ ಅವರಿಗೆ ಗೋಡೆಯೇ ವಿಕೆಟ್‌ತ್ರಯ!

ಕ್ರಿಕೆಟ್ ಸೆಲೆಬ್ರಿಟಿ ಆಟಗಾರರನ್ನು 'ದೇವಮಾನವ'ರಂತೆ ಭಾವಿಸಲಾಗುತ್ತದೆ. ಮಕ್ಕಳು ಕೈಯಲ್ಲಿ ಬ್ಯಾಟಿರದಿದ್ದರೂ ತಮ್ಮ ನೆಚ್ಚಿನ ಆಟಗಾರರ ಶೈಲಿಯಲ್ಲೇ ಬೀಸುತ್ತಾರೆ. ಅವರ ಸಂಭ್ರಮದ ಎಸೆತಕ್ಕೆ ಬಾಲ್ ಬೇಕಾಗುವುದಿಲ್ಲ! ಮಕ್ಕಳು ಈ ಆವೇಶದಲ್ಲಿ ಶಾಲೆಯನ್ನು ಮರೆಯುವ ಸಾಧ್ಯತೆಯಿದೆ. ಓದು, ಬರಹಕ್ಕೆ ಯಾವುದೇ ಆಟೋಟ ಪ್ರೇರಣೆಯಾದರೆ ಒಳ್ಳೆಯದೆ. ಆದರೆ ಲವಲವಿಕೆಯೇ ವ್ಯಾಸಂಗವನ್ನು ಹಿಂದಿಕ್ಕಿದರೆ? ಒಂದು ವೃತ್ತಾಂತ ಕಾಡುತ್ತದೆ. ಹಾಸ್ಟೆಲ್ಲಿನಲ್ಲಿ ಗಾಢನಿದ್ರೆಯಲ್ಲಿದ್ದ ಹುಡುಗನೊಬ್ಬ ದಿಢೀರನೆ ಪಕ್ಕದಲ್ಲಿದ್ದ ಸೌದೆ ಸೀಳನ್ನು ಬೀಸಿ 'ಸಿಕ್ಸರ್' ಅಂತ ಚೀರಿದ್ದ.

ಜನರಿಗೆ ಕ್ರಿಕೆಟ್ ಹೃದಯದ ಬಡಿತದಷ್ಟೇ ಮುಖ್ಯ ಎನ್ನಿಸಿದೆ. ನಗರ ಪ್ರದೇಶಗಳಲ್ಲಿ ಎರಡು ತಂಡಗಳ ನಡುವೆ ಸಾರ್ವಜನಿಕ ಉದ್ಯಾನಗಳಲ್ಲಿ ಅದ್ದೂರಿಯಾಗಿ ಪಂದ್ಯಗಳು ಆಯೋಜನೆಗೊಳ್ಳುತ್ತವೆ. ಮೇರೆಮೀರಿದ ಸಡಗರವು ಬೆಳಕಿನ ಮಾಲಿನ್ಯ, ಶಬ್ದ ಮಾಲಿನ್ಯದ ಪರಿವೆಗೆ ಗ್ರಹಣ ಹಿಡಿಸುತ್ತದೆ. ಧ್ವನಿವರ್ಧಕಗಳ ಮೂಲಕ ವೀಕ್ಷಕ ವಿವರಣೆಗಳು ಮೊಳಗಿರುತ್ತವೆ. ಸಡಗರಕ್ಕೆ ಇಂಬು ನೀಡಲು, ಬ್ಯಾಟ್ಸ್‌ಮನ್ ಬೌಂಡರಿ, ಸಿಕ್ಸರ್ ಹೊಡೆದಾಗ ಕುಣಿತ, ಭಾವಾವೇಶವನ್ನು ಅನುಕರಿಸಲಾಗುತ್ತದೆ.

ಪಂದ್ಯಗಳನ್ನು ಟಿ.ವಿ.ಯಲ್ಲಿ ಸತತವಾಗಿ ಹೆಚ್ಚು ಸಮಯ ವೀಕ್ಷಿಸಿದಾಗ ಮಕ್ಕಳು ನಾಯಕನ ಬಗ್ಗೆ ವಿವರಗಳನ್ನು ತಿಳಿಯಲು ಯತ್ನಿಸುತ್ತಾರೆ. ಪೋಷಕರು ತಮ್ಮ ಮಕ್ಕಳು ಪಂದ್ಯಗಳನ್ನು ನೇರವಾಗಿ ವೀಕ್ಷಿಸುವುದನ್ನು ನಿರುತ್ತೇಜಿಸುವುದು ಮುಖ್ಯವಾಗುತ್ತದೆ. ತಾವಾಗಿಯೇ ತಮ್ಮ ಮಕ್ಕಳಿಗೆ ಪಂದ್ಯದ ಸ್ಕೋರ್, ವಿಕೆಟ್ ಪತನ, ಫಲಿತಾಂಶ ತಿಳಿಸುವುದಾಗಿ ಹೇಳಿ ಅವರ ಅತಿರೇಕವನ್ನು ತಡೆಗಟ್ಟಬಹುದು.

ಕ್ರಿಕೆಟ್ ಪಂದ್ಯವನ್ನು ಮಹಾಸಮರವೆಂದೇ ಭಾವಿಸುವ ಮಂದಿಗೆ ಕೊರತೆಯಿಲ್ಲ. ಪಂದ್ಯವೆಂದರೆ ಸೋಲು, ಗೆಲುವು ಇದ್ದದ್ದೆ. ಉಭಯ ತಂಡಗಳೂ ಜಯಿಸಲು ಸಾಧ್ಯವೇ? ಹಣಾಹಣಿ, ಸೆಣಸಾಟದಂತಹ ಒಕ್ಕಣೆಗಳು ಅರ್ಥಹೀನ. ಕ್ರೀಡಾ ಮನೋಭಾವ ಎನ್ನುವುದಿದೆ. ರಾಜ್ಯಗಳು, ದೇಶಗಳನ್ನು ಒಗ್ಗೂಡಿಸಬೇಕಾದ ಕ್ರೀಡಾ ತಂಡಗಳು ಅದು ಹೇಗೆ ಪರಸ್ಪರ ವೈರಿಗಳಾದಾವು? ಪಂದ್ಯ ಗೆಲ್ಲಲು 'ದೈವ'ದ ಮೊರೆ ಹೋಗುವುದಿದೆ! ನೆಚ್ಚಿನ ತಂಡ ಗೆದ್ದರೆ ವೀರೋಚಿತ ಪ್ರಶಂಸೆ. ಪರಾಭವಗೊಂಡಿತೆಂದರೆ ನಿಂದಿಸುವುದು, ತೆಗಳುವುದು, ದೂರುವುದು. ಒಂದೇ ಕ್ರೀಡೆಯನ್ನು ವೈಭವೀಕರಿಸಿದರೆ ಸಹಜವಾಗಿ ಆ ಕುರಿತು ಅತೀವ ಪೈಪೋಟಿ ಏರ್ಪಡುತ್ತದೆ. ಪಂದ್ಯದಲ್ಲಿ ಸೋಲು-ಗೆಲುವಿನ ಬಗ್ಗೆ ಬೆಟ್ಟಿಂಗ್‌ಗೆ ಪ್ರಚೋದನೆಯಾಗುತ್ತದೆ. ಕೆಲವು ವರ್ಷಗಳ ಹಿಂದೆ 'ಮ್ಯಾಚ್ ಫಿಕ್ಸಿಂಗ್' ಭೂತ ತಾಂಡವವಾಡಿದ್ದು ನೆನಪಿನಲ್ಲಿದೆ.

ಹಾಕಿಯು ಹೆಸರಿಗಷ್ಟೇ ಭಾರತದ ರಾಷ್ಟ್ರೀಯ ಕ್ರೀಡೆ. ಹಾಕಿಯೂ ಸೇರಿದಂತೆ ಕಬಡ್ಡಿ, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಟೆನಿಸ್‌ಗೆ ಸಹ ಕ್ರಿಕೆಟ್‌ನಂತೆ ಮನ್ನಣೆ ಸಿಗಬೇಕಲ್ಲವೆ? ಉಳಿದ ಕ್ರೀಡೆಗಳ ಸುಪ್ತ ಪ್ರತಿಭೆಗಳು ಮತ್ತು ಕೌಶಲಗಳು ಬೆಳಕಿಗೆ ಬರಲು ಆಸ್ಪದವಾಗುತ್ತಿಲ್ಲ, ಅವು ಬೆಳೆಯಲಾಗುತ್ತಿಲ್ಲ. ಜಗತ್ತಿನಾದ್ಯಂತ ದಿನನಿತ್ಯ ಫುಟ್‌ಬಾಲ್ ಪಂದ್ಯಗಳಾಗುತ್ತವೆ. ಆದರೆ ನೋಡುವವರ ಸಂಖ್ಯೆ ನಮ್ಮಲ್ಲಿ ಎಷ್ಟು? ಕ್ರಿಕೆಟ್ ಪಂದ್ಯ ಗೆದ್ದು ಸ್ವದೇಶಕ್ಕೆ ಮರಳಿದ ತಂಡಕ್ಕೆ ಒಟ್ಟಿಗೇ ಹತ್ತು ಯುದ್ಧಗಳನ್ನು ಜಯಿಸಿದವರಿಗೂ ಇರದಂತಹ ಸ್ವಾಗತ!

ಶಾಲೆಯ ಮೂಲಸೌಕರ್ಯಗಳಲ್ಲಿ ಕ್ರಿಕೆಟ್ ಮೈದಾನಕ್ಕಿರುವ ಆದ್ಯತೆ ಫುಟ್‌ಬಾಲ್‌ಗೆ ಇಲ್ಲ. ಕ್ರಿಕೆಟ್‌ನ ಹಾಗೆ ಎಲ್ಲ ಕ್ರೀಡೆಗಳಿಗೂ ವೀಕ್ಷಕತ್ವ ಇರಬೇಕಾದದ್ದು ನ್ಯಾಯಸಮ್ಮತ.



ಕ್ರಿಕೆಟ್ ದುಬಾರಿ ಕ್ರೀಡೆಯೇ ಹೌದು. ಫುಟ್‌ಬಾಲ್‌ಗೆ ಒಂದು ಬಾಲ್ ಇದ್ದರಾಯಿತು, ಒಂಟಿಯಾಗಿಯೂ ಅಭ್ಯಸಿಸಬಹುದು. ಫುಟ್‌ಬಾಲ್ ಆಟದ ನೀತಿ ನಿಯಮಾವಳಿ ಸರಳ, ಸುಲಭ. ಕಡಿಮೆ ಬಜೆಟ್‌ನ ಕ್ರಿಕೆಟ್ ಎಂದರೂ ಸ್ಟಂಪ್ಸ್ (ವಿಕೆಟ್‌ಗಳು), ಬ್ಯಾಟ್ ಮತ್ತು ಬಾಲ್, ಕನಿಷ್ಠ ಇಬ್ಬರು ಆಟಗಾರರು ಬೇಕು. ಇನ್ನು ಕ್ರಿಕೆಟ್ ಪಂದ್ಯದ ಸಮಯವೂ ಹೆಚ್ಚು. ಫುಟ್‌ಬಾಲ್ ತೊಂಬತ್ತು ನಿಮಿಷಗಳಲ್ಲಿ ಮುಗಿದರೆ, ಕ್ರಿಕೆಟ್ ಪಂದ್ಯಕ್ಕೆ ಕಡಿಮೆಯೆಂದರೂ 4 ತಾಸುಗಳು ಬೇಕು. ಈ ನ್ಯೂನತೆಯಿಂದಲೇ ಅನೇಕ ದೇಶಗಳು ಕ್ರಿಕೆಟ್‌ನಿಂದ ದೂರವೇ ಉಳಿದಿವೆ. ದೇಶಿ ಮೂಲವೆಂಬ ಕಾರಣಕ್ಕೆ ಕೆಲವು ದೇಶಗಳು ಆಟವನ್ನು ಉತ್ತೇಜಿಸಿರಬಹುದಷ್ಟೆ.

ಕ್ರಿಕೆಟ್ ಮಾತ್ರವಲ್ಲ ಪ್ರತಿ ಕ್ರೀಡೆಯೂ ಸಡಗರವೆ. ಕ್ರೀಡೆ ಯಾವುದೇ ಇರಲಿ ಪಂದ್ಯದಲ್ಲಿ ಜಯಿಸಿದರೆ ಸಂತಸವೆ. ಆಟದ ಮೈದಾನದಲ್ಲಿ ಏನು ನೆರವೇರುವುದೋ ಅದು ಮೈದಾನದಲ್ಲೇ ಉಳಿಯಬೇಕು. ಮೈದಾನದ ಹೊರಗೆ ಎಲ್ಲರೂ ಗೆಳೆಯರೆ. ಕ್ರಿಕೆಟ್ ಒಂದು ಕ್ರೀಡೆ. ಚೆನ್ನಾಗಿ ಆಡಿದರೆ ಅದು ಅಭ್ಯಾಸದ ಘನರೂಪ. ಪಂದ್ಯದಲ್ಲಿ ಸೋಲಾದರೆ ಅದರಿಂದ ಯಾವುದೇ ಹಾನಿ ಇಲ್ಲ. ನಮ್ಮ ಪಾಲಿಗೆ ಕ್ರಿಕೆಟ್ ಗೀಳಾಗದಿರುವಂತೆ ನಮ್ಮ ಇತಿಮಿತಿಯನ್ನು ನಾವೇ ನಿರ್ಧರಿಸಬೇಕಿದೆ.

ವಾಚಕರ ವಾಣಿ

ಸಂವಿಧಾನ ಹತ್ಯಾ ದಿವಸ: ಅತಿರೇಕದ ನಡೆ

1975ರಲ್ಲಿ ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು ಹೇರಲಾದ 'ಜೂನ್ 25'ರ ದಿನವನ್ನು 'ಸಂವಿಧಾನ ಹತ್ಯಾ ದಿವಸ' ಎಂದು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಸರ್ವಥಾ ಅನವಶ್ಯ ಮಾತ್ರವಲ್ಲ ಅಸಮರ್ಥನೀಯ ಕೂಡ. ಇಂದು ದೇಶದ ಮತದಾರರು ತಮ್ಮ ಇಂದಿನ ಮತ್ತು ಭವಿಷ್ಯದ ಘನತೆಯುತ ಜೀವನ ನಿರ್ವಹಣೆಗೆ ಬೇಕಾಗುವ ಅನುಕೂಲ ಹಾಗೂ ಸ್ವಾತಂತ್ರ್ಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮತ ಚಲಾಯಿಸುತ್ತಾರೆಯೇ ವಿನಾ 49 ವರ್ಷಗಳ ಹಿಂದೆ ಅಂದಿನ ಪ್ರಧಾನಿ ಏನು ಮಾಡಿದ್ದರು ಎಂದು ಯೋಚಿಸಿ ಮತದಾನ ಮಾಡುವುದಿಲ್ಲ. 'ಅಂದಿನ ತುರ್ತುಸ್ಥಿತಿಯ ಸಂತ್ರಸ್ತರನ್ನು ಸ್ಮರಿಸಲು' ಹೀಗೊಂದು ಘೋರ ಹಣೆಪಟ್ಟಿಯ ದಿನದ ಆಚರಣೆಯೇ ಅತಿರೇಕದ ನಡೆ. ಇಷ್ಟಾಗಿ, ಕೇಂದ್ರದ ಈ ನಿರ್ಧಾರವೇನೂ ವಿಶ್ವ ಇತಿಹಾಸದಲ್ಲಿ ಅಂದಿನ ಪ್ರಧಾನಿಯ ಹೆಸರಿಗೆ ಒಂದು ಹೊಸ ಕಪ್ಪುಚುಕ್ಕೆಯಾಗಿ ಮತ್ತು ಇಂದಿನ ಪ್ರಧಾನಿಯ ಹೆಸರಿಗೆ ಒಂದು ಹೊಸ ನಕ್ಷತ್ರವಾಗಿ ಅಂಟಿಕೊಳ್ಳುವುದಿಲ್ಲ. ಇಷ್ಟಕ್ಕೂ, ಜಗತ್ತಿನಲ್ಲಿ ಈಗಿರುವ ಇಂತಹ ಅಸಂಖ್ಯಾತ ಚುಕ್ಕೆ, ನಕ್ಷತ್ರಗಳೇ ಜನರಿಗೆ ಬೇಕಾಗಿಲ್ಲ. ಜನರಿಗೆ ಇಂದು ಬೇಕಾಗಿರುವುದು ನೆಮ್ಮದಿಯ ಬಾಳು, ಅಷ್ಟೆ.

ಸಾಮಾಜಿಕ, ಧಾರ್ಮಿಕ, ರಾಜಕೀಯದಂತಹ ರಂಗಗಳ ಬಗ್ಗೆ ಈ ದೇಶದ ಜನರು ಹೊಂದಿರುವ ಅಭಿಪ್ರಾಯ ಹಾಗೂ ಭಾವನೆಗಳಲ್ಲಿ ಹಸ್ತಕ್ಷೇಪ ಮಾಡಿ ಅವುಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಅಭ್ಯಾಸವನ್ನು ಕೈಬಿಡಬೇಕು. ಪ್ರಕೃತಿನಾಶ, ಪರಿಸರಮಾಲಿನ್ಯ, ಆರೋಗ್ಯ ಕ್ಷೇತ್ರದಲ್ಲಿನ ಅವ್ಯವಸ್ಥೆ, ಅಸಮಾನ ಶಿಕ್ಷಣ, ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆ ಏರಿಕೆಯಂತಹ ದೇಶದ ಜ್ವಲಂತ ಸಮಸ್ಯೆಗಳೆಡೆಗೆ ಹೆಚ್ಚಿನ ಗಮನ ನೀಡಲಿ.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಆ...ಯೋಗ?!

ಅಂತೂ ಇಂತೂ
ಆಗಸ್ಟ್‌ನಿಂದ ಆಗುವುದಂತೆ
7ನೇ ವೇತನ
ಆಯೋಗ ಜಾರಿ...
ಅದಕ್ಕೇ ಇರಬೇಕು
ಬಹುತೇಕರು ಬಯಸುವುದು
ಯಾವುದಾದರೂ ಆಗಿರಲಿ
ಇರಬೇಕು ಒಂದು
ಸರ್ಕಾರಿ ನೌಕರಿ!

ಮ.ಗು.ಬಸವಣ್ಣ, ಮೈಸೂರು

ಪರರ ದನಿಗೂ ದನಿಯಾಗಲಿ 'ನಮ್ಮ ಮೆಟ್ರೊ'

ಮೆಟ್ರೊ ರೈಲಿನಲ್ಲಿ ಮಾಹಿತಿ ಪ್ರಕಟಣೆಗೆ ಬಳಸಿರುವ ನಿರೂಪಕಿ ಅಪರ್ಣಾ ಅವರ ಧ್ವನಿಯನ್ನೇ ಎ.ಐ. ತಂತ್ರಜ್ಞಾನದಿಂದ ಸೃಷ್ಟಿಸಿ, ಮುಂದೆ ನಿರ್ಮಾಣವಾಗುವ ಹೊಸ ಮೆಟ್ರೊ ಮಾರ್ಗಗಳಲ್ಲೂ ಬಳಸಬೇಕೆಂದು ಗಣೇಶ್ ಕೆ. ಎಂಬುವರು ಸಲಹೆ ನೀಡಿದ್ದಾರೆ (ವಾ.ವಾ., ಜುಲೈ 15). ಅಪರ್ಣಾ ಅವರ ಅನುಪಮ ಧ್ವನಿಗೆ ಮಾರುಹೋಗದವರೇ ಇಲ್ಲ. ಮೆಟ್ರೊದಲ್ಲಿ ಪ್ರಯಾಣಿಸುವವರಿಗೆ ಸಹಜವಾಗಿಯೇ ಈ ಅನುಭವ ಆಗುತ್ತದೆ. ಆದರೆ ಭವಿಷ್ಯದಲ್ಲಿ ನಿರ್ಮಾಣವಾಗುವ ಮೆಟ್ರೊ ನಿಲ್ದಾಣಗಳಿಗೆ ಎ.ಐ. ತಂತ್ರಜ್ಞಾನದಿಂದ ಸೃಷ್ಟಿಸಿದ ಅಪರ್ಣಾ ಅವರ ದನಿಯನ್ನೇ ಅಳವಡಿಸುವ ಬದಲು, ಅವರಂತೆಯೇ ಶುದ್ಧ ಕನ್ನಡ ಮಾತನಾಡುವವರನ್ನು ಗುರುತಿಸಿ, ಅವಕಾಶ ನೀಡುವುದು ಒಳ್ಳೆಯದು. ಆಗ ಅಪರ್ಣಾ ಅವರಿಗೆ ಪರ್ಯಾಯವಾದ ಹತ್ತಾರು ದನಿಗಳು ದೊರೆಯಬಹುದು. ಉತ್ತಮ ದನಿಯಿದ್ದೂ ಅವಕಾಶವಂಚಿತವಾದ ಎಷ್ಟೋ ದನಿಗಳಿಗೆ 'ನಮ್ಮ ಮೆಟ್ರೊ' ದನಿಯಾದೀತು.

ನಂದೀಶ ಎ. ಮೇಳೇಹಳ್ಳಿ, ಬೆಂಗಳೂರು

ಅರೆಗುತ್ತಿಗೆ ರೂಪದ ನೇಮಕಾತಿ ಅಗತ್ಯವಿರಲಿಲ್ಲ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳಿಗೆ ನೇರ ನೇಮಕಾತಿ ಮಾಡುತ್ತಿರುವ ಪ್ರಕ್ರಿಯೆಯನ್ನು ವಿರೋಧಿಸುವವರೆಲ್ಲರೂ ತಮಗೆ ಹುದ್ದೆ ಸಿಗುವುದಿಲ್ಲ ಎಂದು ಮನಗಂಡವರು ಎಂದು ಪದ್ಮಿನಿ ನಾಗರಾಜು ಅವರು ಅತಾರ್ಕಿಕವಾದ ವಾದವನ್ನು ತಮ್ಮ ಲೇಖನದಲ್ಲಿ (ಪ್ರ.ವಾ., ಜುಲೈ 13) ಮಂಡಿಸಿದ್ದಾರೆ. ಸರ್ಕಾರಿ ಕಾಲೇಜುಗಳ ಅಧ್ಯಾಪಕರು ಖಾಸಗಿ ಕಾಲೇಜುಗಳ ಅಧ್ಯಾಪಕರ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು ಅಂತಲೂ ವಾದಿಸಿದ್ದಾರೆ. ಅಲ್ಲಿ ಕಷ್ಟ ಏನಿದೆಯೋ ಇಲ್ಲವೋ ಅದು ಚರ್ಚೆಯ ವಿಷಯವಲ್ಲ. ಆದರೆ ಪ್ರಾಧ್ಯಾಪಕರ ಬಡ್ತಿಗೆ ಸಂಬಂಧಿಸಿದಂತೆ ಯಾವ ನಿಯಮಗಳನ್ನು ಪಾಲಿಸಲಾಗುತ್ತಿದೆ, ಯಾವ ಕಾಂಪಿಟೆಂಟ್ ಅಥಾರಿಟಿ ಅಲ್ಲಿ ಪದೋನ್ನತಿಯನ್ನು ನಿರ್ಧರಿಸುತ್ತದೆ ಎಂಬಂತಹವು ಖಂಡಿತವಾಗಿಯೂ ಚರ್ಚಿಸಬೇಕಾದ ವಿಷಯಗಳು. ಹಾಗೆಯೇ ಆದಾಯ ಮೂಲವನ್ನು ತರುವ ಶಿಕ್ಷಣದ ಮಾರುಕಟ್ಟೆಯನ್ನೇ ನಿರ್ಮಿಸಿಬಿಟ್ಟಿರುವ ಖಾಸಗಿ ಕಾಲೇಜುಗಳ ಮಂದಿ ಸರ್ಕಾರಿ ಕಾಲೇಜಿಗೆ ಬಂದು ಬಡ, ದೀನ ದಲಿತರ ಸೇವೆ ಮಾಡುವುದನ್ನು, ಈ ಪ್ರಕ್ರಿಯೆ ಎಲ್ಲಾದರೂ ಪೂರ್ಣಗೊಂಡರೆ ಆಗ ರಾಜ್ಯದ ಜನ ಅನುಭವಿಸಿ ತಿಳಿದಾರು.

ಇರಲಿ, ಅದು ಭವಿಷ್ಯದ ಪ್ರಶ್ನೆ. ಆದರೆ ಸಾರಾಸಗಟಾಗಿ ಸರ್ಕಾರಿ ಕಾಲೇಜುಗಳ ಬಹುತೇಕರು ಇದರ ಪರವಾಗಿದ್ದಾರೆ ಎಂಬ, ವಿರೋಧಿಸುವವರೆಲ್ಲರೂ ಹುದ್ದೆ ಸಿಗದವರೆಂಬ ಬೀಸು ಹೇಳಿಕೆಗಳು ಅಪರಿಪಕ್ವವಾದವು. ಯಾಕೆಂದರೆ, ಈಗಾಗಲೇ 2014ರಿಂದ ಪ್ರಾಧ್ಯಾಪಕನಾಗಿ ಸ್ಥಾನೀಕರಣ ಹೊಂದಿ, ಪ್ರಾಂಶುಪಾಲರ ಪರೀಕ್ಷೆಯಲ್ಲಿ ಆಯ್ಕೆಯಾಗಬಹುದಾದ ಸಂಭವನೀಯರ ಪಟ್ಟಿಯಲ್ಲಿರುವ ನಾನೂ ಈ ಪ್ರಕ್ರಿಯೆಯ ಪರವಾಗಿಲ್ಲ ಎಂಬುದನ್ನು ನೇರವಾಗಿಯೇ ಹೇಳಬಯಸುತ್ತೇನೆ. ಇಲಾಖೆಯ ಒಳಗೆ ಯುಜಿಸಿಯ ನಿಯಮಗಳ ಅನ್ವಯ ಕ್ರಮಬದ್ಧವಾದ ಪದೋನ್ನತಿ ಮತ್ತು ಅರ್ಹತೆಯುಳ್ಳ ಸಂಪನ್ಮೂಲ ಬೇಕಾದಷ್ಟಿರುವಾಗ, ಹೊರಗಿನಿಂದ ಈ ಅರೆಗುತ್ತಿಗೆ ರೂಪದ ನೇಮಕಾತಿ ಅಗತ್ಯವಿರಲಿಲ್ಲ ಎಂಬುದು ನನ್ನಂತಹ ಅನೇಕರ ಅಭಿಪ್ರಾಯವಾಗಿದೆ.

ಪ್ರೊ. ಜಯಪ್ರಕಾಶ್ ಶೆಟ್ಟಿ ಎಚ್., ಉಡುಪಿ

ಡಯಟ್ ಸುಲಭ!

4 ಕೆ.ಜಿ. ಇಳಿದಿದೆಯಂತೆ
ನಟ ದರ್ಶನ್ ತೂಕ!
ಹಾಗೆಯೇ ಕೇಜ್ರಿವಾಲ್‌ರಲ್ಲಿ
2 ಕೆ.ಜಿ. ಅಂತೆ,
ಮತ್ತೆ ಡಯಟೀಷಿಯನ್‌ಗಳ್ಯಾಕೆ
ಜನರಿಗೆ ತೂಕ ಇಳಿಸಲು
ಹೇಳಿಕೊಡಬೇಕು
ಬಗೆ ಬಗೆಯ ಪಾಠ?
ಸರಳವಾಗಿ ಹೇಳಿದರಾಯ್ತು
'ಅನುಸರಿಸಿ ಜೈಲಿನೂಟ'!

ಜೆ.ಬಿ.ಮಂಜುನಾಥ, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

To know more about The Printers (Mysore) Private Ltd, visit www.printersmysore.com.



ಜಮ್ಮು ಕಾಶ್ಮೀರದ ಡೋಡಾ ಜಿಲ್ಲೆಯಲ್ಲಿ ಉಗ್ರರೊಂದಿಗೆ ಚಕಮಕಿ ನಡೆದ ಸ್ಥಳದಲ್ಲಿ ಬೀಡುಬಿಟ್ಟಿದ್ದ ಭದ್ರತಾ ಸಿಬ್ಬಂದಿ –ಪಿಟಿಐ ಚಿತ್ರ

‘ಉಗ್ರ’ ತಂತ್ರ ಬದಲು

ಜಮ್ಮುವಿನಲ್ಲಿ ಹೆಚ್ಚಾದ ಭಯೋತ್ಪಾದನಾ ಚಟುವಟಿಕೆ

12 ಜಮ್ಮುವಿನಲ್ಲಿ ಈ ವರ್ಷ ಉಗ್ರರ ದಾಳಿಗೆ ಹುತಾತ್ಮರಾದ ಭದ್ರತಾ ಸಿಬ್ಬಂದಿ

10 ಉಗ್ರರ ದಾಳಿಯಲ್ಲಿ ಮೃತಪಟ್ಟ ನಾಗರಿಕರು

55 ಗಾಯಾಳುಗಳು

5 ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಉಗ್ರರು

50 ಜಮ್ಮು ಪ್ರಾಂತ್ಯದ ಮೂಲಕ ಭಾರತಕ್ಕೆ ನುಸುಳಿರುವ ಉಗ್ರರು

48 32 ತಿಂಗಳ ಅವಧಿಯಲ್ಲಿ ಜಮ್ಮುವಿನಲ್ಲಿ ಹುತಾತ್ಮರಾದ ಯೋಧರು

ಪ್ರಜಾವಾಣಿ ವಾರ್ತೆ

‘ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯ ವಿರುದ್ಧದ ಹೋರಾಟ ಕೊನೆಯ ಹಂತದಲ್ಲಿದೆ. ನಾವು ಈ ವಿಚಾರದಲ್ಲಿ ಬಹುಸ್ತರದ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿದ್ದು, ಅಳಿದುಳಿದ ಉಗ್ರ ಜಾಲವನ್ನು ನಾಶಪಡಿಸಲಾಗುವುದು. ಜಮ್ಮು-ಕಾಶ್ಮೀರದ ಜನರಲ್ಲಿ ಭಯ ಮತ್ತು ಪ್ರತ್ಯೇಕತಾವಾದ ಕೊನೆಗೊಳ್ಳುತ್ತಿದೆ...’

– ಪ್ರಧಾನಿ ನರೇಂದ್ರ ಮೋದಿ ಅವರು ಎರಡು ವಾರಗಳ ಹಿಂದೆ ರಾಜ್ಯಸಭೆಯಲ್ಲಿ ಹೇಳಿದ ಮಾತಿದು. ಆದರೆ, ಜಮ್ಮು ಕಾಶ್ಮೀರದಲ್ಲಿನ ಭಯೋತ್ಪಾದನಾ ಚಟುವಟಿಕೆಗಳ ಅಂಕಿ ಅಂಶಗಳು ಮತ್ತು ವರದಿಗಳು ಇದಕ್ಕೆ ವ್ಯತಿರಿಕ್ತವಾದ ಕಥನವನ್ನು ಹೇಳುತ್ತಿವೆ.

> ಜಮ್ಮುವಿನ ಡೋಡಾದಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮತ್ತೆ ನಾಲ್ವರು ಯೋಧರು ಹುತಾತ್ಮರಾಗಿದ್ದಾರೆ. ಕಳೆದ ವಾರವಷ್ಟೇ ಕಠುವಾ ಜಿಲ್ಲೆಯಲ್ಲಿ ಐವರು ಯೋಧರು ಪ್ರಾಣತೆತ್ತಿದ್ದರು. ಬಹುತೇಕ ಶಾಂತಿಯುತವಾಗಿದ್ದ ಜಮ್ಮುವಿನಲ್ಲಿ ಇತ್ತೀಚೆಗೆ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಹೊಸ ಕಾರ್ಯತಂತ್ರದೊಂದಿಗೆ ದಾಳಿ ಮಾಡುತ್ತಿರುವ ಉಗ್ರರ ಸದೆಬಡಿಯುವ ಕೇಂದ್ರ ಸರ್ಕಾರದ ಪ್ರಯತ್ನಕ್ಕೆ ಜಮ್ಮುವಿನಲ್ಲಿ ಯಶಸ್ಸು ಸಿಕ್ಕಿಲ್ಲ...

ಕೆಲವು ವರ್ಷಗಳವರೆಗೂ ಉಗ್ರರು ನಡೆಸಿದ್ದ ದಾಳಿಗಳು ಕಾಶ್ಮೀರ ಕಣಿವೆಯನ್ನೇ ಗುರಿಯಾಗಿಸಿಕೊಂಡಿದ್ದವು. ಜಮ್ಮು ಪ್ರಾಂತ್ಯದಲ್ಲಿ ಶಾಂತಿ ನೆಲೆಸಿತ್ತು. ಆದರೆ, ಇತ್ತೀಚೆಗೆ ಇಲ್ಲೂ ಭಯೋತ್ಪಾದನಾ ಕೃತ್ಯಗಳು ಜಾಸ್ತಿಯಾಗಿವೆ. ಈ ವರ್ಷದ ಮೊದಲ ಏಳು ತಿಂಗಳ ಅಂಕಿ ಅಂಶಗಳು ಇದನ್ನು ಹೇಳುತ್ತವೆ. ಪಾಕಿಸ್ತಾನದ ಗಡಿಗೆ ಸಮೀಪದಲ್ಲಿರುವ ಪೂಂಛ್, ರಾಜೌರಿ, ಡೋಡಾ, ರಿಯಾಸಿ ಜಿಲ್ಲೆಗಳಲ್ಲಿ ಭಯೋತ್ಪಾದಕರು ಅಟ್ಟಹಾಸ ಮೆರೆಯುತ್ತಿದ್ದಾರೆ. ದಟ್ಟ ಕಾಡಿನಲ್ಲಿ, ಕಡಿದಾದ ಪ್ರದೇಶದಲ್ಲಿ ಅವಿತು ಕುಳಿತಿರುವ ಉಗ್ರರು ಹೊಂಚು ಹಾಕಿ ಭದ್ರತಾ ಪಡೆಗಳು, ಪ್ರವಾಸಿಗರು, ನಾಗರಿಕರ ಮೇಲೆ ಗುಂಡಿನ ಮಳೆಗರೆಯುತ್ತಿದ್ದಾರೆ.

ಪೂಂಛ್ ಜಿಲ್ಲೆಯಲ್ಲಿ ಮೇ 4ರಂದು ವಾಯುಸೇನೆಯ ಬೆಂಗಾವಲು ಪಡೆ ಮೇಲೆ ನಡೆದ ದಾಳಿ, ರಿಯಾಸಿಯಲ್ಲಿ ಜೂನ್ 9ರಂದು ತೀರ್ಥಯಾತ್ರಿಕರ ಬಸ್ ಮೇಲೆ ನಡೆದ ದಾಳಿ ಮತ್ತು ವಾರದ ಹಿಂದೆ ಕಠುವಾದಲ್ಲಿ ಸೈನಿಕರ ಮೇಲೆ ನಡೆದ ದಾಳಿ... ಇವೆಲ್ಲವೂ ಭಯೋತ್ಪಾದನಾ ಚಟುವಟಿಕೆಗಳ ಹೆಚ್ಚಳಕ್ಕೆ ನಿದರ್ಶನಗಳಾಗಿವೆ.


ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ 2019ರಲ್ಲಿ ತೆರವುಗೊಳಿಸುವವರೆಗೂ ಕಾಶ್ಮೀರದಲ್ಲಿ ಕಲ್ಲು ತೂರಾಟದಂತಹ ಚಟುವಟಿಕೆಗಳು ಜಾಸ್ತಿ ನಡೆಯುತ್ತಿದ್ದವು. ವಿಶೇಷ ಸ್ಥಾನಮಾನ ರದ್ದು ಪಡಿಸಿ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಣೆ ಮಾಡಿದ ನಂತರ ಕೆಲವು ಸಮಯ ಭಯೋತ್ಪಾದನಾ ಕೃತ್ಯಗಳು ಕಡಿಮೆಯಾದಂತೆ ಕಂಡು ಬಂದರೂ ಒಂದೂವರೆ ವರ್ಷಗಳಿಂದ ಉಗ್ರರ ಉಪಟಳ ಹೆಚ್ಚಾಗಿದೆ.

ಆಧಾರ: ಪಿಟಿಐ

ಈ ವರ್ಷ ನಡೆದ ಇತರ ಪ್ರಕರಣಗಳು

- ಏಪ್ರಿಲ್ 22: ರಾಜೌರಿ ಜಿಲ್ಲೆಯಲ್ಲಿ ಉಗ್ರರ ಗುಂಡಿಗೆ ಸರ್ಕಾರಿ ನೌಕರ ಬಲಿ
- ಜೂನ್ 26: ಡೋಡಾ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರ ಹತ್ಯೆ
- ಜೂನ್ 12: ಡೋಡಾ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ಐವರು ಭದ್ರತಾ ಸಿಬ್ಬಂದಿ, ಒಬ್ಬ ಪೊಲೀಸ್ ಅಧಿಕಾರಿಗೆ ಗಾಯ
- ಜುಲೈ 7: ರಾಜೌರಿ ಜಿಲ್ಲೆಯಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಒಬ್ಬ ಯೋಧನಿಗೆ ಗಾಯ

ಜಮ್ಮುವಿನಲ್ಲಿ ಈ ವರ್ಷ ನಡೆದ ಪ್ರಮುಖ ಭಯೋತ್ಪಾದನಾ ಕೃತ್ಯಗಳು



ಸರ್ಕಾರವನ್ನು ಪ್ರಶ್ನಿಸಿದ ವಿಪಕ್ಷಗಳು

ಮಂಗಳವಾರ ರಾತ್ರಿ ಡೋಡಾದಲ್ಲಿ ನಾಲ್ವರು ಮತ್ತು ಕಳೆದವಾರ ಕಠುವಾದಲ್ಲಿ ಐವರು ಯೋಧರು ಹುತಾತ್ಮರಾದ ಪ್ರಕರಣ ಸೇರಿದಂತೆ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕರ ದಾಳಿಗಳನ್ನು ಪ್ರಸ್ತಾಪಿಸಿ, ಉಗ್ರರ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಕಾರ್ಯತಂತ್ರವನ್ನು ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಪ್ರಶ್ನಿಸಿದೆ. ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ 38 ದಿನಗಳಲ್ಲಿ ಒಂಬತ್ತು ಭಯೋತ್ಪಾದನಾ ದಾಳಿ ನಡೆದಿವೆ ಎಂದು ಕಾಂಗ್ರೆಸ್ ಕೇಂದ್ರವನ್ನು ಕುಟುಕಿದೆ.

‘ಇಷ್ಟೆಲ್ಲ ನಡೆಯುತ್ತಿದ್ದರೂ, ಏನೂ ನಡೆದಿಲ್ಲವೇನೋ ಎಂಬಂತೆ ಕೇಂದ್ರ ಸರ್ಕಾರ ವರ್ತಿಸುತ್ತಿದೆ’ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದರೆ, ‘ಕೇಂದ್ರ ಸರ್ಕಾರದ ತಪ್ಪು ನೀತಿಗಳಿಗೆ ಯೋಧರು ಮತ್ತು ಅವರ ಕುಟುಂಬದವರು ಬೆಲೆ ತೆರಬೇಕಾಗಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪ್ರತಿಯಾಗಿ, ಭಯೋತ್ಪಾದಕರ ನಿರ್ಮೂಲನೆಗೆ ಬದ್ಧವಿರುವುದಾಗಿ ಸೇನೆ ಮತ್ತು ಸರ್ಕಾರ ಹೇಳಿವೆ.

ಹೊಂಚುಹಾಕಿ ಎರಗುತ್ತಿರುವ ಉಗ್ರರು

ಭಯೋತ್ಪಾದಕರ ಇತ್ತೀಚಿನ ಕೃತ್ಯಗಳನ್ನು ಪರಿಶೀಲಿಸಿದರೆ, ಅವರ ಗಮನವು ಕಾಶ್ಮೀರದಿಂದ ಜಮ್ಮುವಿಗೆ ಸ್ಥಳಾಂತರಗೊಂಡಿರುವುದು ತಿಳಿಯುತ್ತದೆ. ಮೊದಲು ಉಗ್ರರು ಹೆಚ್ಚಾಗಿ ಸೇನಾ ಸಿಬ್ಬಂದಿಯನ್ನು ಗುರಿಯಾಗಿಸಿಕೊಳ್ಳುತ್ತಿದ್ದರು. ಈಗ ಅವರು ಸೇನಾ ಪಡೆಗಳ ಜತೆಗೆ (ಪ್ರವಾಸಿಗರು,ಹೊರರಾಜ್ಯದವರು ಸೇರಿದಂತೆ) ನಾಗರಿಕರನ್ನೂ ಗುರಿಯಾಗಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ದಾಳಿಯ ತಂತ್ರವನ್ನೂ ಬದಲಾಯಿಸಿಕೊಂಡಿದ್ದಾರೆ. ಹಲವು ಪ್ರಕರಣಗಳಲ್ಲಿ ಅವರು ಹೊಂಚು ಹಾಕಿ ದಾಳಿ ಮಾಡಿರುವುದು ಇದನ್ನು ಪುಷ್ಟೀಕರಿಸುತ್ತದೆ.

‘ಉಗ್ರರು, ತಮ್ಮ ದಾಳಿಯ ಸ್ವರೂಪ ಬದಲಾಯಿಸಿದ್ದಾರೆ. ಇತ್ತೀಚೆಗೆ ಗೆರಿಲ್ಲಾ ಮಾದರಿಯ ಯುದ್ಧ ತಂತ್ರ ಅನುಸರಿಸುತ್ತಿದ್ದಾರೆ. ಪಾಕಿಸ್ತಾನದಿಂದ ಒಳನುಸುಳುತ್ತಿರುವ ಅವರು, ಆರಂಭದಲ್ಲಿ ಒಂದಷ್ಟು ಕಾಲ ಯಾವುದೇ ಕಾರ್ಯಚಟುವಟಿಕೆಗೆ ಕೈಹಾಕುವುದಿಲ್ಲ. ಪಾಕಿಸ್ತಾನದಲ್ಲಿರುವ ತಮ್ಮ ನಾಯಕರಿಂದ ಸೂಚನೆ ಬರುವವರೆಗೆ ಸುಮ್ಮನಿರುತ್ತಾರೆ. ಸ್ಥಳೀಯರೊಂದಿಗೆ ಬೆರೆಯುತ್ತಾರೆ. ಮೇಲಿನವರಿಂದ ಸೂಚನೆ ಸಿಕ್ಕ ಕೂಡಲೇ ದಾಳಿ ನಡೆಸುತ್ತಾರೆ. ಹೆಚ್ಚು ಸಾವು ನೋವು ಸಂಭವಿಸುವಂತಹ ದಾಳಿ ಮಾಡುತ್ತಾರೆ’ ಎಂದು ಹೇಳುತ್ತಾರೆ ಅಧಿಕಾರಿಗಳು.

ಏಪ್ರಿಲ್ 26ರಂದು ಸೊಪೋರ್‌ನಲ್ಲಿ ಸೇನಾ ಪಡೆ ಹಾಗೂ ಉಗ್ರರ ನಡುವೆ ಗುಂಡಿನ ಕಾಳಗ ನಡೆದಿತ್ತು. ಅದರಲ್ಲಿ ಭಾಗಿಯಾಗಿದ್ದ ವಿದೇಶಿ ಉಗ್ರರು, 18 ತಿಂಗಳು ಅವಿತು ಕುಳಿತಿದ್ದರು. ಅತ್ಯಾಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ಅವರು, ಕಾಶ್ಮೀರ ಕಣಿವೆಯ ಉಗ್ರರೊಂದಿಗೆ ನಂಟು ಹೊಂದಿದ್ದರು.

ಇದೇ ರೀತಿ, ಜೂನ್‌ನಲ್ಲಿಯೂ ವಿದೇಶಿ ಉಗ್ರರೊಂದಿಗೆ ಗುಂಡಿನ ಚಕಮಕಿ ನಡೆದಿತ್ತು. ಆಗಲೂ ಉಗ್ರರ ಬದಲಾದ ಕಾರ್ಯತಂತ್ರ, ಅವರ ಸಾಮರ್ಥ್ಯದ ಜತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಉಗ್ರರು ವಿದೇಶದಿಂದ ಒಳನುಸುಳುತ್ತಿರುವುದು ತಿಳಿದುಬಂದಿತ್ತು. ಏಪ್ರಿಲ್ 26ರ ಎನ್‌ಕೌಂಟರ್‌ನಲ್ಲಿ ಹತರಾದ ಇಬ್ಬರು ಉಗ್ರರು ಪಾಕಿಸ್ತಾನದ ರಾವಲ್‌ಕೋಟ್‌ಗೆ ಸೇರಿದವರಾದರೆ, ಜೂನ್ 19ರಂದು ಹತನಾದವನು ಪಾಕಿಸ್ತಾನದ ಕುಖ್ಯಾತ ಉಗ್ರವಾದಿ ಉಸ್ಮಾನ್ ಲಂಗ್ಡಾ ಎನ್ನಲಾಗಿದೆ.

ಕಾಶ್ಮೀರದಲ್ಲಿ ಬಳಸಲಾಗುತ್ತಿರುವ ಉಗ್ರ ದಮನ ತಂತ್ರಗಾರಿಕೆ ಜಮ್ಮುವಿನ ಭಿನ್ನ ಭೌಗೋಳಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಹೆಚ್ಚು ಫಲಪ್ರದ ಆಗುತ್ತಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ. ಜಮ್ಮು ಪ್ರಾಂತ್ಯಕ್ಕೆ ಸೀಮಿತವಾಗಿ ಭಿನ್ನ ರೀತಿಯ ಕಾರ್ಯಾಚರಣೆ, ಕಾರ್ಯತಂತ್ರ ಅಗತ್ಯವಿದೆ ಎಂಬುದು ವಿಶ್ಲೇಷಕರ ಪ್ರತಿಪಾದನೆ.

ಗುಪ್ತಚರ ಮಾಹಿತಿ ಕೊರತೆ, ನಿಗಾ ಸವಾಲು

ದಟ್ಟ ಕಾಡು, ಕಡಿದಾದ ಬೆಟ್ಟಗುಡ್ಡಗಳನ್ನು ಹೊಂದಿರುವ ಜಮ್ಮು ಪ್ರಾಂತ್ಯದಲ್ಲಿ ಭದ್ರತಾ ಪಡೆಗಳಿಗೆ ಉಗ್ರರ ಚಲನವಲನಗಳ ಮೇಲೆ ನಿಗಾ ಇಡುವುದಕ್ಕೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ. ತಳ ಮಟ್ಟದ ಗುಪ್ತಚರ ಮಾಹಿತಿ ಸಂಗ್ರಹಿಸುವ ಸುಸಜ್ಜಿತ ವ್ಯವಸ್ಥೆ ಇಲ್ಲ ಎಂದು ಹೇಳುತ್ತಾರೆ ಅಧಿಕಾರಿಗಳು.

ಮೊದಲು ಕಾಶ್ಮೀರ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತದತ್ತ ಒಳನುಸುಳುತ್ತಿದ್ದ ಪಾಕಿಸ್ತಾನ ಉಗ್ರರು ಈಗ ಜಮ್ಮು ವ್ಯಾಪ್ತಿಯಲ್ಲೂ ಭಾರತವನ್ನು ಅಕ್ರಮವಾಗಿ ಪ್ರವೇಶಿಸುತ್ತಿದ್ದಾರೆ. ಸ್ಥಳೀಯ ಭದ್ರತಾ ಅಧಿಕಾರಿಗಳು ಅಂದಾಜಿಸಿರುವ ಪ್ರಕಾರ, ಪಾಕಿಸ್ತಾನವು ಎರಡು ವರ್ಷಗಳ ಅವಧಿಯಲ್ಲಿ 50ಕ್ಕೂ ಹೆಚ್ಚು ಉಗ್ರರನ್ನು ಜಮ್ಮು ಪ್ರಾಂತ್ಯದ ಮೂಲಕ ಭಾರತಕ್ಕೆ ಕಳುಹಿಸಿದೆ. ಪೂಂಛ್, ರಾಜೌರಿ ಸೇರಿದಂತೆ ವಿವಿಧ ಜಿಲ್ಲೆಗಳ ದಟ್ಟ ಅರಣ್ಯ ಪ್ರದೇಶ ಉಗ್ರರ ಅಡಗುದಾಣವಾಗಿದೆ.


ಸೇನಾ ಪಡೆಗಳು ಕಟ್ಟೆಚ್ಚರ ವಹಿಸಿದ್ದರೂ, ತಳಮಟ್ಟದ ಬೇಹುಗಾರಿಕೆಯ ಕೊರತೆ ಇದೆ. ಸೇನಾ ಪಡೆಗಳು ಮಾನವ ಬೇಹುಗಾರಿಕೆಗಿಂತ ಹೆಚ್ಚಾಗಿ ತಾಂತ್ರಿಕ ಬೇಹುಗಾರಿಕೆಯನ್ನು ಹೆಚ್ಚು ಅವಲಂಬಿಸಿವೆ. ಇದನ್ನು ಅರಿತಿರುವ ಉಗ್ರರು ತಮ್ಮ ಆನ್‌ಲೈನ್ ಚಟುವಟಿಕೆಗಳ ಮೂಲಕ ಸೇನಾ ಕಾರ್ಯಾಚರಣೆಯ ದಿಕ್ಕು ತಪ್ಪಿಸುತ್ತಿದ್ದಾರೆ. ವಿದೇಶಿ ಉಗ್ರರನ್ನು ಸದೆಬಡಿಯಲು ನಿಗಾ ಚಟುವಟಿಕೆಗಳನ್ನು ತೀವ್ರಗೊಳಿಸುವ ಅಗತ್ಯವನ್ನು ತಜ್ಞರು ಒತ್ತಿ ಹೇಳುತ್ತಿದ್ದಾರೆ.

‘ಅಲ್ಟ್ರಾ ಟೆಕ್’ ಫೋನ್ ಬಳಕೆ: ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯಾಚರಿಸುತ್ತಿರುವ ಪಾಕಿಸ್ತಾನದ ಉಗ್ರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಜೊತೆಗೆ ತಮ್ಮ ಜಾಲದೊಂದಿಗೆ ಸಂವಹನ ನಡೆಸಲು ‘ಅಲ್ಟ್ರಾ ಟೆಕ್’ನಂತಹ ಆಧುನಿಕ ತಂತ್ರಜ್ಞಾನ ಬಳಸುವ ಭೇದಿಸಲು ಸಾಧ್ಯವಾಗದ (ಎನ್‌ಕ್ರಿಪ್ಟೆಡ್) ಫೋನ್‌ಗಳನ್ನು ಬಳಸುತ್ತಿದ್ದಾರೆ.

ಚೀನಾ ನಿರ್ಮಿತ ಈ ಫೋನ್ ಅನ್ನು ಪಾಕಿಸ್ತಾನ ಸೇನೆ ಬಳಸುತ್ತದೆ. ಅಲ್ಲಿನ ಸೇನೆಯು ಅವುಗಳನ್ನು ಉಗ್ರರ ಕೈಗಿತ್ತಿದೆ ಎಂದು ಹೇಳುತ್ತಾರೆ ಸೇನೆ, ಪೊಲೀಸ್ ಅಧಿಕಾರಿಗಳು.ರೇಡಿಯೊ ಮಾದರಿಯ ಈ ಸಾಧನ ಮೊಬೈಲ್‌ನಂತೆ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ನಡೆಸುವ ಮಾತುಕತೆಯನ್ನು ಬೇರೆಯವರಿಗೆ ಕದ್ದಾಲಿಸಲು ಆಗುವುದಿಲ್ಲ.

ಸಿನಿ ಬಿಟ್ಸ್

ಶಿವರಾಜ್‌ಕುಮಾರ್‌ಗೆ ಕಾರ್ತಿಕ್ ಆ್ಯಕ್ಷನ್ ಕಟ್



ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ನಟನೆಯ 131ನೇ ಸಿನಿಮಾದ ಮೊದಲ ತುಣುಕು ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಈ ಚಿತ್ರಕ್ಕೆ ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಆಗಸ್ಟ್‌ನಲ್ಲಿ ಸಿನಿಮಾ ಸೆಟ್ಟೇರಲಿದೆ.

ಕನ್ನಡ ಚಿತ್ರರಂಗಕ್ಕೆ ನಿರ್ದೇಶಕ ರಾಮ್ ಗೋಪಾಲ್ ವರ್ಮಾ ಅವರನ್ನು ಕರೆತಂದು ಶಿವರಾಜ್‌ಕುಮಾರ್ ಅವರ ‘ಕಿಲ್ಲಿಂಗ್ ವೀರಪ್ಪನ್’ ಸಿನಿಮಾ ಮಾಡಿದ್ದ ಸುಧೀರ್ ಮತ್ತೊಮ್ಮೆ ಸೆಂಚುರಿ ಸ್ಟಾರ್‌ಗೆ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಶಿವರಾಜ್‌ಕುಮಾರ್ ಜನ್ಮದಿನದಂದು 131ನೇ ಚಿತ್ರದ ವಿಡಿಯೊ ತುಣುಕಿನಲ್ಲಿ ಪೊಲೀಸ್ ಸ್ಟೇಷನ್‌ನಲ್ಲಿ ಶಿವರಾಜ್‌ಕುಮಾರ್ ಪಾತ್ರವನ್ನು ಅಚ್ಯುತ್‌ಕುಮಾರ್ ವರ್ಣನೆ ಮಾಡುವಂತಹ ದೃಶ್ಯವಿದೆ. ‘ಐ ಆಮ್ ಕಮಿಂಗ್’ ಎನ್ನುವ ಹಿನ್ನೆಲೆ ಧ್ವನಿಯಲ್ಲಿ ಶಿವರಾಜ್‌ಕುಮಾರ್ ಪಾತ್ರದ ಫಸ್ಟ್‌ಲುಕ್ ಬಿಡುಗಡೆ ಮಾಡಿದೆ ಚಿತ್ರತಂಡ.

ತಮಿಳಿನಲ್ಲಿ ವಿಕ್ರಂ ಪ್ರಭು ಅಭಿನಯದ ‘ಪಾಯುಮ್ ಒಲಿ ನೀ ಎನಕ್ಕು’ ಚಿತ್ರವನ್ನು ನಿರ್ದೇಶಿಸಿದ್ದ ಕಾರ್ತಿಕ್ ಅದ್ವೈತ್, ಈ ಚಿತ್ರದ ಮೂಲಕ ಚಂದನವನಕ್ಕೆ ಕಾಲಿಡುತ್ತಿದ್ದಾರೆ. ಇದು ಇವರ ನಿರ್ದೇಶನದ ಎರಡನೇ ಸಿನಿಮಾ. ಇದೊಂದು ಆ್ಯಕ್ಷನ್ ಥ್ರಿಲ್ಲರ್ ಸಿನಿಮಾವಾಗಿದ್ದು, ಶಿವರಾಜ್‌ಕುಮಾರ್ ಭಿನ್ನವಾದ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಆಗಸ್ಟ್ ತಿಂಗಳಲ್ಲಿ ಚಿತ್ರದ ಮುಹೂರ್ತ ನಡೆಯಲಿದ್ದು, ಇತರ ಕಲಾವಿದರ ಆಯ್ಕೆ ಪ್ರಕ್ರಿಯೆ ಮುಗಿದಿದೆ’ ಎಂದಿದೆ ಚಿತ್ರತಂಡ. ಸ್ಯಾಮ್ ಸಿ.ಎಸ್ ಸಂಗೀತ, ಎ.ಜೆ ಶೆಟ್ಟಿ ಛಾಯಾಚಿತ್ರಗ್ರಹಣ ಸಿನಿಮಾಗಿದೆ. ದೀಪು ಎಸ್. ಕುಮಾರ್ ಸಂಕಲನ ಹಾಗೂ ರವಿ ಸಂತೆಹಕ್ಲು ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿರಲಿದೆ. ಭುವನೇಶ್ವರಿ ಪ್ರೊಡಕ್ಷನ್‌ನಡಿ ಎಸ್.ಎನ್. ರೆಡ್ಡಿ ಹಾಗೂ ಸುಧೀರ್ ಪಿ. ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಒಂದೇ ಸಿನಿಮಾದಲ್ಲಿ ಹಲವು ದಿಗ್ಗಜರು

ಕಮಲಹಾಸನ್, ಮೋಹನ್ ಲಾಲ್, ಮಮ್ಮುಟ್ಟಿ, ಫಹಾದ್ ಫಾಸಿಲ್, ಪಾರ್ವತಿ ತಿರುವೋತ್ತು, ಹರೀಶ್ ಉತ್ತಮನ್, ಬಿಜು ಮೆನನ್ ಮೊದಲಾದ ಮಲಯಾಳಂ ಚಿತ್ರರಂಗದ ದಿಗ್ಗಜರೆಲ್ಲ ಒಂದೇ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಒಂಬತ್ತು ಕಥೆಗಳಿಗೆ ಎಂಟು ನಿರ್ದೇಶಕರು ಆ್ಯಕ್ಷನ್-ಕಟ್ ಹೇಳಿರುವ ‘ಮನೋರಥಂಗಳ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಮಲಯಾಳಂನ ಜನಪ್ರಿಯ ಚಿತ್ರಕಥೆಗಾರ ಮತ್ತು ನಿರ್ದೇಶಕ ಎಂ.ಟಿ. ವಾಸುದೇವನ್ ನಾಯರ್ ಈ ಆಂಥಾಲಜಿ ಸಿನಿಮಾಕ್ಕೆ ಕಥೆ ಬರೆದಿದ್ದಾರೆ. ಜೀ5 ನಿರ್ಮಾಣ ಮಾಡಿರುವ ಈ ಸಿನಿಮಾ ಆಗಸ್ಟ್ 15 ರಂದು ಪ್ರೀಮಿಯರ್ ಆಗಲಿದೆ. ಮಲಯಾಳಂ, ತೆಲುಗು, ತಮಿಳು, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಈ ಸಿನಿಮಾ ವೀಕ್ಷಣೆಗೆ ಲಭ್ಯವಿರುತ್ತದೆ.

ಆಸಿಫ್ ಅಲಿ, ನದಿಯಾ ಮೊಯ್ದು, ಕೈಲಾಸ, ಸುರಭಿ ಲಕ್ಷ್ಮಿ, ಅಪರ್ಣಾ ಬಾಲಮುರಳಿಯಂತಹ ನಟನಟಿಯರು ಈ ಚಿತ್ರದ ಭಾಗವಾಗಿದ್ದಾರೆ. ಮೋಹನ್‌ಲಾಲ್ ನಟಿಸಿರುವ ಚಿತ್ರಕ್ಕೆ ಪ್ರಿಯದರ್ಶನ್ ನಿರ್ದೇಶನವಿದೆ. ರಂಜಿತ್ ನಿರ್ದೇಶನದ ಚಿತ್ರದಲ್ಲಿ ಮಮ್ಮುಟ್ಟಿ ಕಾಣಿಸಿಕೊಂಡಿದ್ದಾರೆ. ಶ್ಯಾಮಪ್ರಸಾದ್, ಅಶ್ವತಿ ನಾಯರ್, ಮಹೇಶ್ ನಾರಾಯಣನ್, ಜಯರಾಜನ್ ನಾಯರ್, ಸಂತೋಷ್ ಶಿವನ್ ಮೊದಲಾದ ಜನಪ್ರಿಯ ನಿರ್ದೇಶಕರು ಉಳಿದ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ.




ಮಮ್ಮುಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ತಾರುಣ್ಯದಲ್ಲಿರುವ ಕಪ್ಪು ಬಿಳುಪು ಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅವರ ಕೈಯಲ್ಲಿ ಸಿಗರೇಟ್ ಇದೆ. ಅದನ್ನು ಸಾವಿರಾರು ಮಂದಿ ಹಂಚಿಕೊಳ್ಳುತ್ತಿದ್ದಾರೆ. ಕೆಲವರು ‘ಇದನ್ನು ಪತ್ತೆ ಹಚ್ಚಿದವರಿಗೆ 8500 ಖಟಾಖಟ್ ಟಕಾ ಟಕ್’ ಎನ್ನುವ ಅಡಿಬರಹದೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಚಿತ್ರದ ಕೆಳಗೆ ಎಡಭಾಗದಲ್ಲಿ ‘ರಿಮಾರ್ಕರ್’ ಎನ್ನುವ ವಾಟರ್ ಮಾರ್ಕ್ ಇದೆ. ಅದನ್ನು ಗೂಗಲ್ ಸರ್ಚ್ ಮಾಡಿದಾಗ, ‘ರಿಮಾರ್ಕರ್’ ಎನ್ನುವುದು ಒಂದು ಎಐ ಕ್ರಿಯೇಟಿವ್ ಕಂಟೆಂಟ್ ಜನರೇಟರ್ ಎನ್ನುವುದು ತಿಳಿಯಿತು. ಸೋನಿಯಾ ಅವರದ್ದು ಎನ್ನಲಾದ ಚಿತ್ರವನ್ನು ನಾವು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು ‘ಟಂಬ್ಲರ್’ (tumblr) ಎನ್ನುವ ಮೈಕ್ರೊಬ್ಲಾಗಿಂಗ್ ವೆಬ್‌ಸೈಟ್‌ನಲ್ಲಿ 2013ರಲ್ಲಿ ಪ್ರಕಟವಾಗಿದ್ದ ಚಿತ್ರ ಎನ್ನುವುದು ತಿಳಿಯಿತು. ಆ ಚಿತ್ರದಲ್ಲಿದ್ದ ಮಹಿಳೆಯ ಮುಖದ ಜಾಗದಲ್ಲಿ ಸೋನಿಯಾ ಅವರ ಮುಖವನ್ನು ಹಾಕಿ ಎಐ ಮೂಲಕ ಸೃಷ್ಟಿಸಲಾಗಿದ್ದ ಚಿತ್ರ ಅದು ಎನ್ನುವುದು ತಿಳಿಯಿತು. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಜುಲೈ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಏಕಾದಶಿ ಗಂ. 21-03 **ನಕ್ಷತ್ರ:** ಅನುರಾಧ ಗಂ. 27-13 **ಯೋಗ:** ಶುಭ ಗಂ. 7-04 **ಕರಣ:** ವಣಿಜ ಗಂ. 08-55, ಕರ್ಕಾಟಕ ಮಾಸದ 01 ನೇ ದಿನ, **ಮಳೆನಕ್ಷತ್ರ:** ಪುನರ್ವಸು 4.
ರಾಹುಕಾಲ: ಮಧ್ಯಾಹ್ನ 12-00–01-30
ಸೂರ್ಯೋದಯ: 06-16 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 10 ಮೊಹರಮ್
ದಿನ ವಿಶೇಷ: ಹರಿಶಾಯನಿ ಏಕಾದಶಿ, ಮೊಹರಮ್ (ಮುಸ್ಲಿಂ), ಅದೃಷ್ಟ ಸಂಖ್ಯೆ : 4, 11

ಮೇಷ: ಮಿತ್ರನ ಮನೆಯ ಸಮಾರಂಭದಲ್ಲಿ ಭಾಗವಹಿಸುವುದರಿಂದ ಹಳೆಯ ಮಿತ್ರರನ್ನು ಭೇಟಿಯಾದ ಸಂಭ್ರಮ ನಿಮ್ಮದಾಗುತ್ತದೆ. ವಿದ್ಯಾರ್ಥಿಗಳಿಗೆ ಸಾಧನೆಗೆ ಪೂರಕವಾದ ದಿನವಾಗಿದೆ. ಷೇರು ಬಂಡವಾಳದಲ್ಲಿ ಲಾಭದ ಸೂಚನೆ ಇದೆ.

ವೃಷಭ: ಆಫೀಸಿನಲ್ಲಿ ಮೇಲಧಿಕಾರಿಗಳ ಒತ್ತಡದಿಂದ ಕೆಲಸದಲ್ಲಿ ಆಯಾಸ ವೆನಿಸುವುದಾದರು ಅಧಿಕಾರಿಗಳ ಮನ ಗೆಲ್ಲುವಂತಾಗುತ್ತದೆ. ಮಾಂಗಲ್ಯ ಯೋಗ ತೋರಿ ಬಂದರೂ ನಿಮ್ಮ ನಿಶ್ಚಿತ ನಿರ್ಧಾರವೇ ಮುಖ್ಯವೆನಿಸಲಿದೆ.

ಮಿಥುನ: ಈ ದಿನ ಎದುರಾಗುವ ಪರಿಸ್ಥಿತಿಗೆ ನೀವೇ ಹೊಂದುಕೊಳ್ಳುವ ತೀರ್ಮಾನವನ್ನು ಮಾಡಿರಿ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು. ನಿಮ್ಮ ಅಧಿಕಾರವನ್ನು ಎಲ್ಲೆಂದರಲ್ಲಿ ಚಲಾಯಿಸಬೇಡಿ.

ಕರ್ಕಾಟಕ: ಆರ್ಥಿಕವಾಗಿ ಹೆಚ್ಚಾಗಿ ಚೇತರಿಕೆ ಕಂಡುಬರದಿದ್ದರೂ ಜೀವನಕ್ಕೆ ಕೊರತೆ ಇರಲಾರದು. ಹಲವು ಪ್ರಯತ್ನದ ನಂತರ ಪ್ರವಾಸದ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಉದರ ಸಂಬಂಧಿ ವ್ಯಾಧಿ ಕಾಣಿಸಿಕೊಳ್ಳಬಹುದು.

ಸಿಂಹ: ಉದ್ಯೋಗ ಬದಲಾವಣೆಯ ಯೋಚನೆಗಿಂತ ಇರುವ ಉದ್ಯೋಗದಲ್ಲಿ ವರಮಾನ ಹೆಚ್ಚಿಸಿಕೊಳ್ಳುವ ಹೊಸ ದಾರಿ ಹುಡುಕಿ. ಹೊಸ ವೃತ್ತಿಯ ವಿಚಾರವಾಗಿ ಯಾವ ಜಾಗದಲ್ಲಿ ವೃತ್ತಿಯನ್ನು ಮಾಡುವುದೆಂದು ಚಿಂತಿಸುವಿರಿ.

ಕನ್ಯಾ: ಕೆಲಸದಲ್ಲಿ ತೊಡಕನ್ನುಂಟುಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು. ಹೊಸಾ ವಿನ್ಯಾಸದ ನಿಮ್ಮ ಉಡುಪುಗಳು ನೀವಿರುವ ಸ್ಥಳಕ್ಕೆ ಸರಿಯಾಗದಿರಬಹುದು. ಕೆಲಸದ ಕಡೆ ಹೆಚ್ಚಿನ ಗಮನ ಹರಿಸುವಿರಿ.

ತುಲಾ: ಮಕ್ಕಳಿಗೆ ಓದಿನಲ್ಲಿ ಹೆಚ್ಚು ಆಸಕ್ತಿ ಹುಟ್ಟುವಂತೆ ಮನೆಯ ಪರಿಸರವನ್ನು ನಿರ್ಮಿಸಿ. ಗೃಹ ಸಾಮಾಗ್ರಿ ವಸ್ತುಗಳ ಖರೀದಿಯಿಂದ ಅಧಿಕ ಖರ್ಚು ಬರುವುದು. ಕೆಲವರ ದುಷ್ಟಬುದ್ಧಿಯ ಅನಾವರಣ ಆಗಲಿದೆ.

ವೃಶ್ಚಿಕ: ಕೆಲಸದಲ್ಲಿ ಆತುರದ ಸ್ವಭಾವ ಬೇಡ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ. ಮಗನೊಡನೆ ಗಹನವಾದ ಮಾತುಕತೆ ನಡೆಯುವ ಸಂಭವವಿದೆ. ನಿಮ್ಮ ಚಾಣಾಕ್ಷತನದಿಂದ ಪ್ರತಿಸ್ಪರ್ಧಿಗಳು ದೂರಾಗುವರು.

ಧನು: ಪ್ರಯತ್ನ ಬಲ ಹಾಗೂ ಪಿತೃ ಕಾರ್ಯವನ್ನು ನಡೆಸಿದರೆ ಕೌಟುಂಬಿಕವಾದ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿಯಾಗಬಹುದು. ಸಮಸ್ಯೆಗಳ ಸರಮಾಲೆಗಳು ಒಂದೊಂದಾಗಿ ನಿವಾರಣೆಯಾಗುತ್ತದೆ.

ಮಕರ: ಕಲ್ಪನಾಶಕ್ತಿ ಇಂದು ಚುರುಕಾಗಿ ಕೆಲಸ ಮಾಡಲಿದೆ. ವ್ಯಾವಹಾರಿಕವಾಗಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವಲ್ಲಿ ಜಯಶೀಲರಾಗುವಿರಿ. ಹಿರಿಯರ ಆರೋಗ್ಯದ ಕಾರಣ ನಿಮ್ಮ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಕುಂಭ: ಮನೆಯ ಕೆಲಸಗಳನ್ನು ನಿಭಾಯಿಸುವುದರಲ್ಲಿ ನಿಮ್ಮ ಹೆಚ್ಚಿನ ಸಮಯವನ್ನು ಕಳೆಯುವಿರಿ. ಖಾದಿ ಉದ್ಯಮದವರಿಗೆ ಸರಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ. ಸಂಬಂಧಿಗಳ ಆಗಮನವಾಗಬಹುದು.

ಮೀನ: ಸಹೋದ್ಯೋಗಿಗಳ ಮೇಲೆ ಹೆಚ್ಚಿನ ಗಮನ ಇಡುವುದರಿಂದ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಮಾರ್ಗ ದೊರೆಯುತ್ತದೆ. ನೈಪುಣ್ಯದಿಂದಾಗಿ ಹೆಚ್ಚಿನ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳುವ ಯೋಗವಿದೆ.

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಬದುಕಿನ ಲಯ ಅರಿಯಲಾಗದೆ...

ಎಂಜಿನಿಯರಿಂಗ್ ಮುಗಿಸಿದ ತಕ್ಷಣ ಕೆಲಸ ಸಿಕ್ಕಿತು.ಊಹಿಸದಷ್ಟು ಸಂಬಳ ಕಂಡಿತು. ಬಾಲ್ಯದಿಂದ ಹುದುಗಿಸಿಕೊಂಡ ಆಸೆಗಳು ಭುಗಿಲೆದ್ದವು. ಖರೀದಿ, ಮೋಜು, ಪ್ರವಾಸ, ಕಾರು, ತಿರುಗಾಟ, ಪಟ್ಟಿ ಬೆಳೆಯುತ್ತಾ ಹೋಯಿತು. ಈತ ತನ್ನ ನಿತ್ಯ ಹೊಗಳುವ ಗೆಳೆಯರ ಗುಂಪು ಹಿಗ್ಗಿಸಿಕೊಂಡ. ಜೀವನ ಪರಮ ಸುಖ ಎನಿಸಿತು.

ರಾತ್ರಿ ದುಡಿದು ಹಗಲು ಮಲಗುವ ಕೆಲಸ ನಿಧಾನಕ್ಕೆ ನೀರಸವಾಗತೊಡಗಿತು. ಮೊದಲು ಸುಖವೆನಿಸಿದ ಹವಾ ನಿಯಂತ್ರಿತ ಚೆಂದದ ಕಚೇರಿ ಉಸಿರುಗಟ್ಟುತ್ತಿತ್ತು. ಕೆಲಸದ ಒತ್ತಡ, ಮೇಲಿನವರ ಕಿರಿಕಿರಿ, ಹಗಲು ರಾತ್ರಿಗಳ ವ್ಯತ್ಯಾಸ ತಿಳಿಯದ ಸ್ಥಿತಿ ಜಿಗುಪ್ಸೆ ಎನಿಸತೊಡಗಿತು.

ಚಿಕ್ಕ ವಯಸ್ಸಿನಲ್ಲೇ ಆರೋಗ್ಯದಲ್ಲಿ ಬಿರುಕು ಕಾಣಿಸಿಕೊಂಡವು. ಕೆಲವರು ಬೇಗ ಮದುವೆಯಾದರೆ ಎಲ್ಲಾ ಸರಿ ಹೋಗುತ್ತದೆ ಎಂದು ಪುಕ್ಕಟ್ಟೆ ಸಲಹೆ ಕೊಟ್ಟರು. ತನ್ನಂತೆಯೇ ಐಟಿ ಕಂಪನಿಯಲ್ಲಿ ದುಡಿಯುತ್ತಿದ್ದ ಹುಡುಗಿಯ ಮಾತಾಡಿಸಿದ. ಪರಿಚಯ ಸ್ನೇಹಕ್ಕೆ, ನಂತರ ಪ್ರೇಮಕ್ಕೆ ಮುಂದೆ ಮದುವೆಯ ದಿನಾಂಕಕ್ಕೆ ಬಂದಿತು. ಮನೆಯ ಎರಡೂ ಬದಿಯಲ್ಲೂ ವಿರೋಧ ಹೊಗೆಯಾಡಿತು. ಜಾತಿ, ಅಂತಸ್ತು, ಭಾಷೆ, ರಾಜ್ಯಗಳು ಅಡ್ಡಿ ಬಂದವು. ಮುನಿಸಿಕೊಂಡವರ ಜೊತೆ ಮಾತಾಡಿ, ಒಪ್ಪಿಸಿ, ಬದುಕಲ್ಲಿ ಮುಂದೆ ಏನೇ ಆದರೂ ನಾವಿಬ್ಬರೇ ಹೊಣೆ ಎಂದು ಹೇಳಿ ಒಂದಾದರು. ಮುಂದಿನ ವರ್ಷದಲ್ಲೇ ಕಂದನ ಪಡೆದರು. ಇಬ್ಬರೂ ಕೆಲಸಕ್ಕೆ ಹೊರಗೆ ಹೋಗುವ ಕಾರಣ ಮನೆಯ ಜವಾಬ್ದಾರಿ ಹಂಚಿಕೆಯಾಗಬೇಕಿತ್ತು. ಹೆಂಡತಿಯೂ ತಾಯಿಯೂ ಆದವಳು ಹೆಚ್ಚು ಒತ್ತಡದಲ್ಲಿದ್ದಳು. ಇವನು ಯಥಾಪ್ರಕಾರ ಮೊದಲಿನ ಐಷಾರಾಮಿ, ಸೋಂಬೇರಿ, ಮನೆಯಾಚೆ ಕಾಲ ಕಳೆಯುವ ಗೆಳೆಯರ ಸೇರಿದ. ನಶೆಯಲ್ಲಿರುವುದು ಗಂಡಾದ ತನ್ನ ಹಕ್ಕೆಂದು ನಿರ್ಣಯಿಸಿಕೊಂಡ.

ಈ ಹೆಣ್ಣು ಮಗಳಿಗೆ ಎಲ್ಲವನ್ನೂ ಸಂಭಾಳಿಸುವುದು ಕಷ್ಟವಾಗತೊಡಗಿತು. ಮನೆ, ಮಗು, ಹೊರಗೆಲಸ ಯಾವುದೂ ಬಿಡುವಂತಿರಲಿಲ್ಲ. ಇಷ್ಟರಲ್ಲೇ ಇವನು ಕೆಲಸ ಮಾಡುತ್ತಿದ್ದ ಕಂಪನಿ ಅದಕ್ಷತೆಯ ಕಾರಣ ಒಡ್ಡಿ ಉಗಿದು ಹೊರಗಟ್ಟಿತು. ಹೊಸ ಕೆಲಸ ಹುಡುಕುವ ಬದಲಿಗೆ ಮನೆಯಲ್ಲೇ ಟಿ.ವಿ, ಸಿನಿಮಾ ನೋಡುತ್ತಾ ಮಗು ಆಡಿಸುತ್ತಾ ಕಾಲ ಕಳೆದ. ಸಂಜೆಗೆ ಕಣ್ಮರೆಯಾಗಿ ಬೆಳಗಿನ ಜಾವಕ್ಕೆ ಕದ ತಟ್ಟುವ ಪತಿಯಾದ. ಒಪ್ಪಿ ಮದುವೆಯಾದ ಕಾರಣ ಹೆತ್ತವರ ಬಳಿ ಕೂಡ ಈಕೆ ದೂರು ಸಲ್ಲಿಸುವಂತಿಲ್ಲ. ಕೊನೆಗೆ ಸಂಸಾರ ಈಗ ಕೋರ್ಟಿನ ಬಾಗಿಲಲ್ಲಿ ನ್ಯಾಯಕ್ಕಾಗಿ ನಿಂತು ಬಿಟ್ಟಿದೆ.


ಉತ್ತಮ ಓದು, ಒಳ್ಳೆಯ ಕೆಲಸ, ಕೈ ತುಂಬ ಸಂಬಳ, ನಗರದ ಬದುಕು ಸಿಕ್ಕರಷ್ಟೆ ಸುಖ ಸಿಗುವುದಿಲ್ಲ. ಹೇಗೆ ಬಾಳಬೇಕೆಂಬ ಕನಿಷ್ಠ ಶಿಸ್ತು, ಹಿಡಿಯಷ್ಟು ಆದರ್ಶ, ತಿದ್ದಿ ಹೇಳಬಲ್ಲ ಗೆಳೆಯರು, ಹೆತ್ತವರ ಸಂಪರ್ಕ ಇಲ್ಲದಿದ್ದರೆ ಬದುಕು ಹೀಗೆ ಮೂರಾ ಬಟ್ಟೆಯಾಗುತ್ತದೆ. ಚಿಕ್ಕ ವಯಸ್ಸಿಗೆ ಸಕಲವನ್ನೂ ಗಳಿಸುವ ಇಂದಿನ ತಲೆಮಾರಿಗೆ ತಿಳಿವಳಿಕೆಯ ಆಪ್ತ ಮಾತು ಹೇಳಬಲ್ಲವರು ಯಾರು?

ಪದಬಂಧ 5744

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪೊಳ್ಳು ಹರಟೆಯಿದು (4)
3.ಉತ್ತ ನೆಲವನ್ನು ಮಟ್ಟಮಾಡುವ ಸಾಧನ (3)
5. ವಿನಾಯಕ ಇಲ್ಲಿಯೇ ಪ್ರತ್ಯಕ್ಷ (3)
7.ತಿರುಗಿ ಲಾಗ ಹಾಕಿದಾಗ ಆದ ಗದ್ದಲ (3)
8.ಲೋಹದ ಹಕ್ಕಿಯಲ್ಲಿನ ಪಯಣ (5)
11.ಮುಳ್ಳುಗಳ ನಡುವೆ ಅರಳುವ ಹೂ (3)
12.ಆನೆಯ ಮರಿಯಿದು (3)
15.ಮೆಟ್ಟಿಲಿರುವ ಚೌಕಾಕಾರದ ಕೊಳ (3)
16.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ! (4)

ಮೇಲಿಂದ ಕೆಳಕ್ಕೆ
1.ಯೋಗವಿದ್ದರೂ ಅಗಲಿಕೆಯೇ! (3)
2.ಹದಿನೈದು ದಿನಗಳ ಅವಧಿ (2)
3.ಕೆಲಸಕ್ಕೆ ಬಾರದ ಮಾತಾಡುವಿಕೆ (3)
4.ನಸುನಗೆಯಿಂದ ಮಾಡಿರುವ ಜೋಡಣೆ (3)
6.ಚಿಗುರು ಇಲ್ಲಿ ಕಾಣುತ್ತಿದೆ (3)
7.ಆಕಾಶವನ್ನು ಮುಟ್ಟುವಂಥಾ ಕಟ್ಟಡ (5)
9.ಸೊಂಟದಿಂದ ಪ್ರಾರಂಭವಾದ ಕಂಪನ! (3)
10.ಇದು ದೇಹಕ್ಕೆ ಸಂಬಂಧಿಸಿದ್ದು (3)
11.ರಾಣಿ ಹಿಡಿದಿರುವ ಥಾಲು (3)
13.ವನದ ಕೊನೆಗಿರುವ ಮನೆ (3)
14. ಸಂಸಾರ ಬಂಧನಕ್ಕೊಳಗಾದವನು (2)



5743ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಯವಂಚಕ 3.ಪರಾತ 5.ಸಜ್ಜೆ 6.ಡಿದು 9. ಪ್ರಭಾತ 10.ಪಟ್ಟಾಭಿಷೇಕ 13.ತರಂಗ 14.ಯುತಿ 16.ಕಾಲ 17.ಮಿಸುನಿ 18.ಹುಲುಮನುಜ

ಮೇಲಿಂದ ಕೆಳಕ್ಕೆ: 1.ನಪುಂಸಕ 2.ಚರಂಡಿ 4.ತಲಾಂತರ 8.ದುರಭಿಪ್ರಾಯ 9.ಪ್ರತೀಕ 10.ಪರಾಗ 11.ಅಂತರ್ಯಾಮಿ 12.ಮಲಯಜ 15.ತಿಕ್ಕಲು

ಸುಡೊಕು 6129

	7	5		9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6128 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಎರಡನೇ ದಿನವೂ ಪ್ರತಿಧ್ವನಿಸಿದ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ

ಮುಖ್ಯಮಂತ್ರಿ ರಾಜೀನಾಮೆಗೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ



ವಿಧಾನಸಭೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಮಾತಿನ ಜಟಾಪಟಿ ನಡೆಯಿತು

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾಯಿಸಿರುವ ಹಗರಣದ ವಿಷಯವು ವಿಧಾನಮಂಡಲ ಅಧಿವೇಶನದ ಎರಡನೇ ದಿನವೂ ಉಭಯ ಸದನಗಳಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಎರಡೂ ಸದನಗಳಲ್ಲಿ ಚರ್ಚೆ ಮುಂದುವರಿಸಿದ ಬಿಜೆಪಿ ಸದಸ್ಯರು, 'ಪ್ರಕರಣದ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ವಿಧಾನಸಭೆಯಲ್ಲಿ ಮಂಗಳವಾರವೂ ಚರ್ಚೆ ಮುಂದುವರಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ₹89 ಕೋಟಿ ಮೊತ್ತದ ಹಗರಣ ನಡೆದಿದೆ ಎಂದು ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ. ನಿಗಮವು ಕ್ರಿಯಾ ಯೋಜನೆಯನ್ನು ಅನುಮೋದಿಸಿ ಐದು ತಿಂಗಳಾದರೂ ಹಣ ಬಳಸಿರಲಿಲ್ಲ. ಹಣಕಾಸು ಇಲಾಖೆಯ ಉಸ್ತುವಾರಿ ಹೊಂದಿರುವ ಮುಖ್ಯಮಂತ್ರಿಯವರು ಏಕೆ ಪ್ರಗತಿ ಪರಿಶೀಲನೆ ನಡೆಸಿರಲಿಲ್ಲ. ಈ ವೈಫಲ್ಯದ ಹೊಣೆಯನ್ನು ಸಿದ್ದರಾಮಯ್ಯ ಅವರೇ ಹೊರಬೇಕಲ್ಲವೇ' ಎಂದು ಪ್ರಶ್ನಿಸಿದರು.

'ಈ ವರ್ಷದ ಬಜೆಟ್ ಸಿದ್ಧಪಡಿಸಲು ಮುಖ್ಯಮಂತ್ರಿಯವರು ಇಲಾಖಾವಾರು ಪೂರ್ವಭಾವಿ ಸಭೆ ನಡೆಸಿದ್ದರು. ಹಿಂದಿನ ವರ್ಷದ ಅನುದಾನವನ್ನು ಬಾಕಿ ಉಳಿಸಿಕೊಂಡ ಬಗ್ಗೆ ಅಧಿಕಾರಿಗಳನ್ನು ಏಕೆ ಪ್ರಶ್ನಿಸಲಿಲ್ಲ? ನಿಗಮದ ಅಧಿಕಾರಿ ಪಿ. ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳದಿದ್ದರೆ ಈ ಹಗರಣ ಹೊರ ಬರುತ್ತಲೇ ಇರಲಿಲ್ಲ. ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣ ಲೂಟಿ ಆಗಿರುವುದರ ಹೊಣೆಯನ್ನು ಮುಖ್ಯಮಂತ್ರಿಯವರೇ ಹೊರಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ಬಿ.ವೈ.ವಿಜಯೇಂದ್ರ ಮಾತನಾಡಿ, ಲೂಟಿ ಮಾಡಿದ ಹಣವನ್ನು ಹೊರ ರಾಜ್ಯಗಳಿಗೆ ಸಾಗಿಸಲಾಗಿದೆ. ಇಷ್ಟೆಲ್ಲ ಆದರೂ ಸರ್ಕಾರದ ಗಮನಕ್ಕೆ ಬರಲಿಲ್ಲ. ಲೆಕ್ಕಾಧಿಕಾರಿಯ ಆತ್ಮಹತ್ಯೆ ಬಳಿಕ, ಒತ್ತಡ ಹೆಚ್ಚಾದಾಗ ಎಸ್‌ಐಟಿ ರಚನೆ ಮಾಡಲಾಯಿತು ಎಂದರು. ಆಗ ಮಧ್ಯ ಪ್ರವೇಶಿದ ಗೃಹ ಸಚಿವ ಪರಮೇಶ್ವರ ಅವರು, ಹಗರಣ ಗೊತ್ತಾದ ತಕ್ಷಣವೇ ಮುಖ್ಯಮಂತ್ರಿ ಎಸ್‌ಐಟಿ ರಚಿಸಿದರು ಎಂದು ಸಮಜಾಯಿಷಿ ನೀಡಿದರು.

'ಈ ಹಣ ಯಾವ ಚುನಾವಣೆಗಳಿಗೆ ಹೋಗಿದೆ ಹೇಳಿ. ಬಳ್ಳಾರಿಯಲ್ಲಿ ಖರ್ಚು ಮಾಡಿದ್ದೀರೋ ಅಮೇಠಿಯಲ್ಲಿ ಖರ್ಚು ಮಾಡಿದ್ದೀರೊ? ಮುಖ್ಯಮಂತ್ರಿ ಪಾತ್ರ ಇಲ್ಲ ಎನ್ನುವುದಾದರೆ ಹೈಕಮಾಂಡ್ ಪಾತ್ರ ಇದೆಯೇ ಹೇಳಿ' ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದಾಗ, ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಗದ್ದಲ ಎಬ್ಬಿಸಿದರು. ಬಿಜೆಪಿ–ಕಾಂಗ್ರೆಸ್ ಸದಸ್ಯರ ಮಧ್ಯೆ ಗದ್ದಲದಲ್ಲಿ ಧಿಕ್ಕಾರಗಳ ಘೋಷಣೆ ಮೊಳಗಿತು. ಪೀಠದಲ್ಲಿದ್ದ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಕಲಾಪವನ್ನು ಮುಂದೂಡಿದರು.

ಆರಗ ಜ್ಞಾನೇಂದ್ರ ಮಾತನಾಡುವಾಗ ಕಾಂಗ್ರೆಸ್‌ನ ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಮಧ್ಯ ಪ್ರವೇಶಿಸಿ ಆಗಾಗ್ಗೆ ಅಡಚಣೆ ಮಾಡಿದ್ದರಿಂದ ಕಾಂಗ್ರೆಸ್– ಬಿಜೆಪಿ ಮಧ್ಯೆ ಪದೇ ಪದೇ ಮಾತಿನ ಜಟಾಪಟಿ ನಡೆಯಿತು.

'ಶಿಥಿಲ ಆಡಳಿತ, ದುರ್ಬಲ ಸಿ.ಎಂ'

'ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಖಡಕ್ ಆಡಳಿತ ನೀಡಿದ್ದರು. ಆದರೆ, ಈ ಬಾರಿ ಜಾಳು ಜಾಳು ಆಡಳಿತ. ಮುಖ್ಯಮಂತ್ರಿ ಬಗ್ಗೆ ಯಾರಲ್ಲೂ ಭಯ, ಶ್ರದ್ಧೆ ಇಲ್ಲವಾಗಿದೆ. ಏಕೆ ಹೀಗಾಗಿದೆ? ನಿಮ್ಮ ನೇತೃತ್ವದ ಸರ್ಕಾರ ಇರುವಾಗಲೇ ದಲಿತರ ಹಣವನ್ನು ಹರಿದು ತಿಂದಿದ್ದಾರೆ. ಆದರೆ ನೀವು ಕೈಚೆಲ್ಲಿ ಕೂತಿದ್ದೀರಿ. ಅಸಹಾಯಕರಾಗಿದ್ದೀರಿ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

'ಹೌದಾ ಹುಲಿಯಾ ಏಕೆ ಹೀಗಾದ್ರಿ?'

'ಹೌದಾ ಹುಲಿಯಾ ಎಂದು ಕರೆಸಿಕೊಳ್ಳುವ ನೀವು ಈಗ ಏಕೆ ಹೀಗಾಗಿದ್ದೀರಿ? ಎರಡು ದಿನಗಳಿಂದ ಮೌನಕ್ಕೆ ಶರಣಾಗಿದ್ದೀರಿ. ನನ್ನ ಅವಧಿಯಲ್ಲಿ ಹೀಗಾಯಿತಲ್ಲ ಎಂದು ಕೊರಗುತ್ತಿದ್ದೀರಾ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಸಿದ್ದರಾಮಯ್ಯ ಅವರ ಕಾಲೆಳೆದರು.

'ಅಪ್ಪಾಜಿ ಸಂಸ್ಕೃತಿ ನಡೆಯಲ್ಲ'

'ವಿರೋಧ ಪಕ್ಷದ ನಾಯಕ ಅಶೋಕ ನಿನ್ನೆ ಚೆನ್ನಾಗಿ ಮಾತನಾಡಿದರು. ಈಗ ಅವರು ಸ್ವತಂತ್ರ, ಸ್ವಾಭಿಮಾನಿ ನಾಯಕರಾಗಿ ಮಾತನಾಡಿದ್ದಾರೆ. ಅಪ್ಪಾಜಿ ಎಂದು ಹೇಳುವುದು ಬಿಟ್ಟಿದ್ದಾರೆ. ಅಪ್ಪ–ಮಕ್ಕಳ ಹಂಗಿಲ್ಲದ ಕಾರಣ ಉತ್ತಮವಾಗಿ ನಿರ್ವಹಣೆ ಮಾಡಿದ್ದಾರೆ' ಎಂದು ಬಸನಗೌಡ ಪಾಟೀಲ ಯತ್ನಾಳ ಅವರು ಹೇಳಿದ್ದು, ಸದನವನ್ನು ನಗೆಗಡಲಲ್ಲಿ ತೇಲಿಸಿತು.

'ಇನ್ನು ಅಪ್ಪಾಜಿ ಸಂಸ್ಕೃತಿ ನಡೆಯುವುದಿಲ್ಲ. ನಿಮ್ಮ ನಿಮ್ಮ ತಂದೆಗೆ ಅಪ್ಪಾಜಿ ಅನ್ನಿ, ಯಾರ್‍ಯಾರಿಗೋ ಅಪ್ಪಾಜಿ ಅನ್ನಬೇಕಾಗಿಲ್ಲ' ಎಂದು ಹೇಳಿದರು.

'ನೈತಿಕತೆ ಬಗ್ಗೆ ಮಾತಾಡುವ ಅಧಿಕಾರ ನಿಮಗಿಲ್ಲ'

'ನೀವು ಗೃಹ ಸಚಿವರಾಗಿದ್ದಾಗಲೇ ಪಿಎಸ್‌ಐ ಹಗರಣ ನಡೆದಿದ್ದು. ಆಗ ನೀವು ರಾಜೀನಾಮೆ ಕೊಟ್ಟಿದ್ದಿರಾ? ನೈತಿಕತೆ ಬಗ್ಗೆ ಮಾತನಾಡಲು ನಿಮಗೆ ಅಧಿಕಾರವೇ ಇಲ್ಲ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿಯ ಜ್ಞಾನೇಂದ್ರ ಅವರನ್ನು ತರಾಟೆಗೆ ತೆಗೆದುಕೊಂಡರು.

ಸುದ್ದಿ 2 ನಿಮಿಷ

ಎಂಪಿಎಂಗೆ ಸರ್ಕಾರಿ–ಖಾಸಗಿ ಸಹಭಾಗಿತ್ವ: ಎಂ.ಬಿ. ಪಾಟೀಲ

ಬೆಂಗಳೂರು: ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆಯನ್ನು (ಎಂಪಿಎಂ) ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಎಂಪಿಎಂಗೆ ಗುತ್ತಿಗೆ ನೀಡಿದ ನೆಡುತೋಪುಗಳಲ್ಲಿ ಬೆಳೆದಿರುವ ಅಕೇಶಿಯಾ, ನೀಲಗಿರಿ ಪೈನಸ್ ಮತ್ತಿತರ ಪರಿಸರಕ್ಕೆ ಮಾರಕವಾದ ಮರಗಳನ್ನು ತೆರವುಗೊಳಿಸಲು ಹಾಗೂ ಪ್ರದೇಶಗಳಲ್ಲಿ ನೈಸರ್ಗಿಕ ಮರಗಳನ್ನು ಬೆಳೆಸಲು ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಕಾಂಗ್ರೆಸ್‌ನ ಬಲ್ಕೀಸ್ ಬಾನು ಪ್ರಶ್ನೆಗೆ ವಿಧಾನ ಪರಿಷತ್‌ನಲ್ಲಿ ಉತ್ತರ ನೀಡಿದ ಅವರು, ಎಂಪಿಎಂಗೆ ಕಚ್ಚಾ ಸಾಮಗ್ರಿ ಪೂರೈಸಲು ಅಗತ್ಯವಾದ ಮರಗಳನ್ನು ಬೆಳೆಸಲು 1980ರಲ್ಲೇ 30 ಸಾವಿರ ಹೆಕ್ಟೇರ್ ನೀಡಲಾಗಿತ್ತು. 2015ರಿಂದ ಕಾರ್ಖಾನೆ ಬಾಗಿಲು ಮುಚ್ಚಿದೆ. ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ನೆಡುತೋಪುಗಳ ಗುತ್ತಿಗೆ ಅವಧಿ 2060ರವರೆಗೆ ವಿಸ್ತರಿಸಲಾಗಿದೆ. ನೀಲಗಿರಿ ನೆಡಲು ಅನುಮತಿ ಇಲ್ಲ, ಆದರೆ, ತೆರವುಗೊಳಿಸಲು ಕೋರ್ಟ್ ತಡೆಯಾಜ್ಞೆ ಇದೆ. ಹಾಗಾಗಿ, ನಿರ್ಮೂಲನೆ ಸಾಧ್ಯವಾಗಿಲ್ಲ ಎಂದರು.



ಎಂಪಿಎಂ ಪುನರಾರಂಭಕ್ಕೆ ಪ್ರಯತ್ನ ನಡೆದಿವೆ. ಅರ್ಹ ಕಂಪನಿಗಳು ಮುಂದೆ ಬಾರದ ಕಾರಣ ಖಾಸಗಿಗೆ ಗುತ್ತಿಗೆ ಆಧಾರದಲ್ಲಿ ನೀಡುವ ಪ್ರಕ್ರಿಯೆಗಳು ನನೆಗುದಿಗೆ ಬಿದ್ದಿವೆ. ಎಂಪಿಎಂ ನೆಡುತೋಪುಗಳಲ್ಲಿ ನೀಲಗಿರಿ ಬೆಳೆಯಲು ಹಾಗೂ ಹೊಣೆಗಾರಿಕೆ ಇಲ್ಲದ ಕಾರ್ಯ ಚಟುವಟಿಕೆಗಳ ಷರತ್ತುಗಳನ್ನು ಕೆಲ ಕಂಪನಿಗಳು ವಿಧಿಸಿದ್ದ ಕಾರಣ ಸರ್ಕಾರ ಒಪ್ಪಲಿಲ್ಲ ಎಂದು ಹೇಳಿದರು.

'ಸಿ.ಎಂ ರಾಜೀನಾಮೆ ನೀಡಲಿ'

ನವದೆಹಲಿ: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮೈಸೂರಿನ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಹಗರಣದ ಬಗ್ಗೆ ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಯಬೇಕಾದರೆ ಸಿದ್ದರಾಮಯ್ಯ ತಮ್ಮ ಸ್ಥಾನ ತ್ಯಜಿಸಬೇಕು' ಎಂದರು.

ಸಿದ್ದರಾಮಯ್ಯ ಅವರು ವಾಲ್ಮೀಕಿ ನಿಗಮ ಮಾತ್ರವಲ್ಲದೆ ಎಲ್ಲ ನಿಗಮಗಳಿಂದ ಹಣ ಪಡೆದಿದ್ದಾರೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು. ಕಾಂಗ್ರೆಸ್ ಮತ್ತು ಅದರ ಹೈಕಮಾಂಡ್‌ಗೆ ಕರ್ನಾಟಕ ಎಟಿಎಂ ಆಗಿ ಮಾರ್ಪಟ್ಟಿದೆ ಎಂದರು.

ಪರಿಷತ್: 'ಪೋಸ್ಟರ್ ವಾರ್'

ಪ್ರಜಾವಾಣಿ ವಾರ್ತೆ



ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಪರಸ್ಪರ ಪೋಸ್ಟರ್‌ಗಳನ್ನು ಪ್ರದರ್ಶಿಸಿ ವಾಗ್ವಾದ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಬಂಧಿತನಾಗಿರುವ ಮಾಜಿ ಸಚಿವ ಬಿ. ನಾಗೇಂದ್ರ ಆಪ್ತ ನೆಕ್ಕಂಟಿ ನಾಗರಾಜ್, ಕಾಂಗ್ರೆಸ್ ನಾಯಕರ ಜೊತೆಗಿದ್ದ ಪೋಸ್ಟರ್ ಅನ್ನು ಬಿಜೆಪಿಯ ಸಿ.ಟಿ. ರವಿ ಪ್ರದರ್ಶಿಸುತ್ತಿದ್ದಂತೆ ಕೆರಳಿದ ಆಡಳಿತ ಪಕ್ಷ ಕಾಂಗ್ರೆಸ್‌ನ ಸದಸ್ಯರು, ಆತ ಬಿಜೆಪಿ ಕಾರ್ಯಕರ್ತನೆಂದು ಬಿ. ಶ್ರೀರಾಮುಲು ಜೊತೆಗಿರುವ ಪೋಸ್ಟರ್‌ಗಳನ್ನು ಪ್ರದರ್ಶಿಸಿದರು. ಇದರಿಂದ ವಿಧಾನ ಪರಿಷತ್‌ನಲ್ಲಿ ಭಾರಿ ಕೋಲಾಹಲವೇ ಸೃಷ್ಟಿಯಾಯಿತು.

ಮಂಗಳವಾರ ಮಧ್ಯಾಹ್ನ ನಂತರ ಕಲಾಪ ಆರಂಭವಾಗುತ್ತಿದ್ದಂತೆಯೇ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಪ್ರಕರಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಸಿ.ಟಿ. ರವಿ, 'ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟರಿಗೆ ರಾಜಯೋಗ, ಪ್ರಾಮಾಣಿಕರಿಗೆ ಆತ್ಮಹತ್ಯೆಗೆ ಭಾಗ್ಯ' ಎಂದು ವ್ಯಂಗವಾಡಿದರು. 'ನಿಗಮದ ಹಣವನ್ನು ಪೂರ್ವಯೋಜಿತವಾಗಿಯೇ ಲೂಟಿ ಮಾಡಲಾಗಿದೆ. ಹಣಕಾಸು ಇಲಾಖೆಯ ಅಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಬಾರದೆ ಹಣ ವರ್ಗಾವಣೆ ಹೇಗೆ ಸಾಧ್ಯ' ಎಂದೂ ಪ್ರಶ್ನಿಸಿದರು.

ಮುಖ್ಯಮಂತ್ರಿಯ ಹೆಸರು ಪ್ರಸ್ತಾಪಿಸುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ಈ ಹಗರಣವನ್ನು ಮುಚ್ಚಿ ಹಾಕಲು ಪೂರ್ವತಯಾರಿ ನಡೆಸಿಕೊಂಡೇ ಕಾಂಗ್ರೆಸ್‌ನವರು ಬಂದಿದ್ದಾರೆ' ಎಂದೂ ರವಿ ಆರೋಪಿಸಿದರು. ಬಿಜೆಪಿಯ ಇತರ ಸದಸ್ಯರೂ ಅವರ ಜೊತೆ ದನಿಗೂಡಿಸಿದರು.

ಅದೇ ವೇಳೆ ಎರಡೂ ಪಕ್ಷಗಳ ಸದಸ್ಯರು ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಮಾತಿನ ಜಟಾಪಟಿಯೂ ನಡೆಯಿತು. ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾಡಿದ ಮನವಿಗೂ ಸದಸ್ಯರು ಸುಮ್ಮನಾಗಲಿಲ್ಲ. ಹೀಗಾಗಿ, ಕಲಾಪವನ್ನು ಗುರುವಾರಕ್ಕೆ ಸಭಾಪತಿ ಮುಂದೂಡಿದರು.

ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೇರಿಸಲಿ: ರೇವಣ್ಣ

ಪ್ರಜಾವಾಣಿ ವಾರ್ತೆ



ಎಚ್‌.ಡಿ. ರೇವಣ್ಣ

ಬೆಂಗಳೂರು: 'ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಲಿ' ಎಂದು ಜೆಡಿಎಸ್‌ನ ಎಚ್. ಡಿ. ರೇವಣ್ಣ ಅವರು ವಿಧಾನಸಭೆಯಲ್ಲಿ ಮಂಗಳವಾರ ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವರ್ಗಾವಣೆ ಅಕ್ರಮದ ಮೇಲಿನ ಚರ್ಚೆ ವೇಳೆ ವಿಶೇಷ ತನಿಖಾ ದಳಗಳ (ಎಸ್‌ಐಟಿ) ಕಾರ್ಯನಿರ್ವಹಣೆ ಕುರಿತು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಸ್ತಾಪಿಸಿದರು. 'ಒಂದು ಎಸ್‌ಐಟಿ ರೇವಣ್ಣ, ಅವರ ಪತ್ನಿಯ ಬಂಧನಕ್ಕೆ ಇನ್ನಿಲ್ಲದ ಪ್ರಯತ್ನ ನಡೆಸುತ್ತದೆ. ರೇವಣ್ಣ ಅವರನ್ನು ಬೆನ್ನುಹತ್ತಿ ಬಂಧಿಸುತ್ತದೆ. ಆದರೆ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ 40 ದಿನಗಳಾದರೂ ಶಾಸಕ ಬಿ. ನಾಗೇಂದ್ರ ಅವರನ್ನು ಬಂಧಿಸಿರಲಿಲ್ಲ' ಎಂದರು.

ತಮ್ಮ ಹೆಸರು ಪ್ರಸ್ತಾಪವಾಗುತ್ತಿದ್ದಂತೆಯೇ ಮಧ್ಯ ಪ್ರವೇಶಿಸಿದ ರೇವಣ್ಣ, '40 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದು, 25 ವರ್ಷಗಳಿಂದ ಶಾಸಕನಾಗಿದ್ದೇನೆ. ನನ್ನ ವಿರುದ್ಧ ಹೆಣ್ಣು ಮಗಳೊಬ್ಬಳನ್ನು ಕರೆತಂದು ಪೊಲೀಸ್ ಮಹಾನಿರ್ದೇಶಕರ (ಡಿಜಿಪಿ) ಕಚೇರಿಯಲ್ಲಿ ದೂರು ಬರೆಸಿಕೊಂಡರು. ಈ ಅಧಿಕಾರಿ ಡಿಜಿಪಿ ಹುದ್ದೆಯಲ್ಲಿರಲು ನಾಲಾಯಕ್' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೇವಣ್ಣ ಕುಟುಂಬದ ಪರವಾಗಿ ಅಶೋಕ ಮಾತನಾಡುತ್ತಿದ್ದಾರೆ ಎಂದು ಆಕ್ಷೇಪಿಸಿದ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್, 'ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ದೊಡ್ಡದು, ರೇವಣ್ಣ ಮಕ್ಕಳ ಪ್ರಕರಣ ಸಣ್ಣದು ಎಂದು ಸಮರ್ಥನೆ ಮಾಡುತ್ತಿದ್ದೀರಾ' ಎಂದು ಕೇಳಿದರು.

'ರೇವಣ್ಣ ಕುಟುಂಬವನ್ನು ನಾನು ಸಮರ್ಥಿಸಿಕೊಳ್ಳುತ್ತಿಲ್ಲ. ಎರಡು ಎಸ್‌ಐಟಿಯಲ್ಲಿರುವ ಅಧಿಕಾರಿಗಳು ವಿಭಿನ್ನವಾಗಿ ಹೇಗೆ ವರ್ತಿಸುತ್ತಿದ್ದಾರೆ ಎಂಬುದಕ್ಕೆ ಉದಾಹರಣೆ ನೀಡಿದೆ' ಎಂದು ಅಶೋಕ ಸಮಜಾಯಿಷಿ ನೀಡಿದರು.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹೋದ ಹಣವನ್ನು ವಾಪಸ್ ತರಬಹುದು. ಆದರೆ, ಹೆಣ್ಣು ಮಕ್ಕಳ ಮಾನ ವಾಪಸ್ ಬರುತ್ತದಾ' ಎಂದು ಕಾಂಗ್ರೆಸ್‌ನ ಎಸ್. ಎನ್. ನಾರಾಯಣಸ್ವಾಮಿ ಪ್ರಶ್ನಿಸಿದರು.

ಮಿಹಿರ್‌ಗೆ 14 ದಿನ ನ್ಯಾಯಾಂಗ ಬಂಧನ

ಮುಂಬೈ (ಪಿಟಿಐ): ಮುಂಬೈನಲ್ಲಿ ನಡೆದಿದ್ದ ಬಿಎಂಡಬ್ಲ್ಯು ಅಪಘಾತ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ನ್ಯಾಯಾಲಯವು ಮಂಗಳವಾರ ಆದೇಶಿಸಿದೆ.

ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿ ಮಿಹಿರ್‌ನನ್ನು ಪೊಲೀಸರು ಮಂಗಳವಾರ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಿದ್ದರು.

ವಾಲ್ಮೀಕಿ ನಿಗಮದ ಹಣ ಚುನಾವಣೆಗೆ ಖರ್ಚು: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ ಮತ್ತು ಈ ಹಣ ಲೋಕಸಭೆ ಚುನಾವಣೆಗೆ ಖರ್ಚಾಗಿದೆ ಎಂಬಂತಹ ಮಾಹಿತಿಗಳನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಇಡೀ ಪ್ರಪಂಚಕ್ಕೇ ಗೊತ್ತಾಗುವಂತೆ ಡಂಗುರ ಹೊಡೆದಿದ್ದಾರೆ' ಎಂದು ಪ್ರಕರಣದ ಆರೋಪಿಯಾದ ಮಾಜಿ ಸಚಿವ ಬಿ.ನಾಗೇಂದ್ರ ಪರ ಹಿರಿಯ ವಕೀಲರು ಜನಪ್ರತಿನಿಧಿಗಳ ಕೋರ್ಟ್‌ನಲ್ಲಿ ಆರೋಪಿಸಿದರು.

ಸದ್ಯ ಜಾರಿ ನಿರ್ದೇಶನಾಲಯದ (ಇ–ಡಿ) ವಶದಲ್ಲಿರುವ ನಾಗೇಂದ್ರ, 'ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನನ್ನ ವಕೀಲರ ಜೊತೆ ಖಾಸಗಿಯಾಗಿ ಮಾತನಾಡಲು ಅವಕಾಶ ನೀಡುತ್ತಿಲ್ಲ' ಎಂದು ಆಕ್ಷೇಪಿಸಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ನಾಗೇಂದ್ರ ಪರ ಹಾಜರಾಗಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್, 'ಇ–ಡಿ ಅಧಿಕಾರಿಗಳು ಅರ್ಜಿದಾರರ ಮೂರು ಮೊಬೈಲ್‌ಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಇವುಗಳಲ್ಲಿ ಅವರ ಕುಟುಂಬದ ಮತ್ತು ಆರೋಗ್ಯದ ವಿಚಾರಕ್ಕೆ ಸಂಬಂಧಿಸಿದ ಖಾಸಗಿ ವಿಷಯಗಳು ಅಡಕವಾಗಿವೆ. ಇವುಗಳನ್ನೆಲ್ಲಾ ಅಧಿಕಾರಿಗಳು ತನಿಖೆಯ ನೆಪದಲ್ಲಿ ಒಳಹೊಕ್ಕು ಬಗೆಯುತ್ತಿರುವುದು ಕಾನೂನುಬಾಹಿರ. ಅಷ್ಟೇ ಅಲ್ಲ ಪ್ರತಿಯೊಂದು ಮಾಹಿತಿಯನ್ನೂ ಮಾಧ್ಯಮಗಳಿಗೆ ಮುದ್ದಾಂ ನೀಡುತ್ತಿದ್ದಾರೆ' ಎಂದು ದೂಷಿಸಿದರು.

'ನಾಗೇಂದ್ರ ಅವರಿಗೆ ಹೃದಯ ಸಂಬಂಧಿ ಮತ್ತು ಚರ್ಮರೋಗವಿದೆ. ಅಂತೆಯೇ, ಅವರು ತಮ್ಮ ವಕೀಲರ ಜೊತೆ ಖಾಸಗಿಯಾಗಿ ಮಾತನಾಡಲು ಅವಕಾಶ ನೀಡಬೇಕು. ತನಿಖಾಧಿಕಾರಿಗಳು ಅವರಿಂದ ಪಡೆಯುವ ಹೇಳಿಕೆ ಪ್ರಕ್ರಿಯೆಯನ್ನು ವಿಡಿಯೊ ರೆಕಾರ್ಡಿಂಗ್ ಮಾಡಲು ನಿರ್ದೇಶಿಸಬೇಕು' ಎಂದು ಕೋರಿದರು.

ಈ ವಾದಕ್ಕೆ ತೀವ್ರವಾಗಿ ಪ್ರತಿ ಆಕ್ಷೇಪ ವ್ಯಕ್ತಪಡಿಸಿದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಅರ್ಜಿಯನ್ನು ಪಿಎಂಎಲ್‌ಎ (ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ) ಅಡಿಯಲ್ಲಿ ಸಲ್ಲಿಸಲಾಗಿದೆ. ಆದರೆ, ಅಧಿಕಾರಿಗಳು ದಂಡ ಪ್ರಕ್ರಿಯಾ ಸಂಹಿತೆ ಕಾನೂನಿನ ಅಡಿಯಲ್ಲೇ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತನಿಖಾಧಿಕಾರಿಗಳು ಕಾನೂನು ಚೌಕಟ್ಟು ಬಿಟ್ಟು ವರ್ತಿಸುತ್ತಿಲ್ಲ. ಅಂತೆಯೇ, ಆರೋಪಿಯು ತಮಗೆ ಚರ್ಮರೋಗ ಇದೆ ಎಂಬುದನ್ನು ನಮಗೆಲ್ಲೂ ತಿಳಿಸಿಲ್ಲ' ಎಂದರು.

'ಆರೋಪಿಗೆ ಸರ್ಕಾರಿ ವೈದ್ಯರು ಚಿಕಿತ್ಸೆ ನೀಡುವುದು ಬೇಡ ಎಂದರೆ ಹೇಗೆ' ಎಂದು ಖಾರವಾಗಿ ಪ್ರಶ್ನಿಸಿದ ಪ್ರಸನ್ನಕುಮಾರ್, 'ಪರಪ್ಪನ ಅಗ್ರಹಾರದಲ್ಲಿ 3,500ರಷ್ಟು ಕೈದಿಗಳಿದ್ದಾರೆ. ಅವರೆಲ್ಲರೂ ಇದೇ ರೀತಿಯ ಅರ್ಜಿಗಳನ್ನು ಹಾಕಿಕೊಂಡು ನ್ಯಾಯಾಲಯಕ್ಕೆ ಬಂದರೆ ಹೇಗೆ? ಇಂತಹ ಅರ್ಜಿಗಳೆಲ್ಲಾ ವಿಲಾಸಿ ಆರೋಪಿಗಳ ಅರ್ಜಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಮಧ್ಯಂತರ ಅರ್ಜಿ ಮೇಲಿನ ಆದೇಶವನ್ನು ಇದೇ 18ರಂದು ಪ್ರಕಟಿಸುವುದಾಗಿ ತಿಳಿಸಿದರು.

'ವೇತನ ಪರಿಷ್ಕರಣೆ: ₹20,208 ಕೋಟಿ ಹೊರೆ'

ಬೆಂಗಳೂರು: ಏಳನೇ ರಾಜ್ಯ ವೇತನ ಆಯೋಗದ ಶಿಫಾರಸಿನ ಅನುಸಾರ ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮಾಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹20,208 ಕೋಟಿಗಳಷ್ಟು ಹೊರೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನೌಕರರ ವೇತನ ಪರಿಷ್ಕರಣೆ ತೀರ್ಮಾನ ಕುರಿತು ವಿಧಾನಸಭೆಯಲ್ಲಿ ಮಂಗಳವಾರ ಹೇಳಿಕೆ ನೀಡಿದ ಅವರು, 'ಜುಲೈ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಿಸಲಾಗಿದೆ. ಆಗಸ್ಟ್ 1ರಿಂದ ಈ ತೀರ್ಮಾನ ಜಾರಿಗೆ ಬರಲಿದೆ. ನೌಕರರ ಮೂಲವೇತನದ ಶೇ 31ರಷ್ಟು ತುಟ್ಟಿಭತ್ಯೆ ಮತ್ತು ಶೇ 27.50ರಷ್ಟು ಫಿಟ್‌ಮೆಂಟ್ ಹೆಚ್ಚಿಸಲಾಗಿದೆ' ಎಂದರು.

'ಅಂಜಲಿ ಕುಟುಂಬಕ್ಕೆ ಪರಿಹಾರ ಶೀಘ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿಯಲ್ಲಿ ನಡೆದ ಯುವತಿ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮುಖ್ಯಮಂತ್ರಿ ಜೊತೆ ಚರ್ಚಿಸಿ ಕುಟುಂಬಕ್ಕೆ ಶೀಘ್ರದಲ್ಲಿ ಪರಿಹಾರ ವಿತರಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ತಿಪ್ಪಣ್ಣ ಕಮಕನೂರ ಅವರು ವಿಷಯ ಪ್ರಸ್ತಾಪಿಸಿ, 'ಅಂಜಲಿ ಅಂಬಿಗೇರ ಕುಟುಂಬಕ್ಕೆ ಪರಿಹಾರ ನೀಡಲು ವಿಳಂಬ ಯಾಕೆ' ಎಂದು ಪ್ರಶ್ನಿಸಿದರು. ಬಿಜೆಪಿಯ ಎನ್. ರವಿಕುಮಾರ್ ಕೂಡ ಅದಕ್ಕೆ ದನಿಗೂಡಿಸಿದರು.

ಆಗ ಪರಮೇಶ್ವರ, 'ಕೊಲೆ ಪ್ರಕರಣಗಳಿಗೆ ಸಾಮಾನ್ಯವಾಗಿ ಸರ್ಕಾರದಿಂದ ಪರಿಹಾರ ನೀಡುವುದಿಲ್ಲ. ಘಟನೆ ನಡೆದ ಬಳಿಕ ಆಕೆಯ ನಿವಾಸಕ್ಕೆ ಭೇಟಿ ನೀಡಿ ಅಜ್ಜಿ ಜೊತೆ ಮಾತನಾಡಿದ್ದೇನೆ. ಯುವತಿಯ ಕುಟುಂಬದ ಬಡತನ ನೋಡಿದಾಗ ಎಂಥವರಿಗಾದರೂ ಕನಿಕರ, ಅನುಕಂಪ ಬರುತ್ತದೆ. ಹೀಗಾಗಿ, ಈ ಕೃತ್ಯವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರ ಕಲ್ಪಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಕೊಳೆಗೇರಿ ಮಂಡಳಿ ಅಥವಾ ಆಶ್ರಯ ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸುವುದಾಗಿ ಯುವತಿಯ ಅಜ್ಜಿಗೆ ಭರವಸೆ ನೀಡಿದ್ದೇನೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರು ಆಶ್ರಯ ಯೋಜನೆಯಡಿ ಮನೆ ನೀಡಲು ಈಗಾಗಲೇ ಒಪ್ಪಿದ್ದಾರೆ. ತಕ್ಷಣ ಮನೆ ಕೊಡುವ ವ್ಯವಸ್ಥೆ ಮಾಡಲಾಗುವುದು' ಎಂದರು.

'ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ದೋಷಾರೋಪ ಪಟ್ಟಿ ಸಲ್ಲಿಸುವ ಹಂತದಲ್ಲಿದೆ. ಆರೋಪಿಯನ್ನು ಈಗಾಗಲೇ ಬಂಧಿಸಲಾಗಿದೆ. ಎಲ್ಲ ಸಾಕ್ಷ್ಯಗಳನ್ನೂ ಸಂಗ್ರಹಿಸಲಾಗಿದೆ. ಹೀಗಾಗಿ, ತ್ವರಿತಗತಿಯ ನ್ಯಾಯಾಲಯ ಸ್ಥಾಪಿಸುವ ಅಗತ್ಯ ಇಲ್ಲ' ಎಂದೂ ಹೇಳಿದರು.

'ನೂರು ಈಟಿಗಳಿಂದ ಚುಚ್ಚಿದ ನೋವಾಗಿದೆ'

ಪ್ರಜಾವಾಣಿ ವಾರ್ತೆ



ಪಿ.ಎಂ. ನರೇಂದ್ರಸ್ವಾಮಿ

ಬೆಂಗಳೂರು: 'ದಲಿತ... ದಲಿತ ಎಂದು ಪದೇ ಪದೇ ಹೇಳಿದ್ದೀರಿ. ಇದರಿಂದ ನನ್ನ ಎದೆಗೆ ನೂರು ಈಟಿಗಳಿಂದ ಚುಚ್ಚಿದಂತಾಗಿದೆ. ನನಗೆ ಅವಮಾನ, ನೋವು ಆಗಿದೆ' ಎಂದು ಕಾಂಗ್ರೆಸ್‌ನ ಪಿ.ಎಂ.ನರೇಂದ್ರಸ್ವಾಮಿ ಏರಿದ ಧ್ವನಿಯಲ್ಲಿ ಹೇಳಿದಾಗ, ವಿಧಾನ ಸಭೆಯಲ್ಲಿ ಕೆಲ ಕಾಲ ಮೌನ ಆವರಿಸಿತು. ಎಲ್ಲರ ಬಾಯಿ ಕಟ್ಟಿತು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಚರ್ಚೆಯ ವೇಳೆ ಬಿಜೆಪಿಯ ಆರಗ ಜ್ಞಾನೇಂದ್ರ ಅವರು ದಲಿತರ ಹಣ ಎಂದು ಪ್ರಸ್ತಾಪಿಸಿದ ಬಗ್ಗೆ ನರೇಂದ್ರಸ್ವಾಮಿ ತೀವ್ರವಾಗಿ ಆಕ್ಷೇಪಿಸಿ, 'ದಲಿತ ಪದ ಬಳಸಬಾರದು. ನಿನ್ನೆಯಿಂದಲೂ ಎಲ್ಲರೂ ಅದೇ ಪದ ಬಳಸುತ್ತಿದ್ದಾರೆ. ನನಗೆ ಅವಮಾನವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ ಎಂದು ಬಳಸಿ' ಎಂದು ಆಗ್ರಹಿಸಿದರು.

ಆಗ ಮಧ್ಯಪ್ರವೇಶಿಸಿದ ಗೃಹ ಸಚಿವ ಜಿ.ಪರಮೇಶ್ವರ ಅವರು, ದಲಿತ ಎಂಬ ಪದವನ್ನು ಬಳಸುವ ಬಗ್ಗೆ ಅಂಬೇಡ್ಕರ್ ಅವರೇ ವಿರೋಧ ಮಾಡಿದ್ದರು. ಪರಿಶಿಷ್ಟ ಜಾತಿ ಮತ್ತು ಪಂಗಡ ಎಂದು ಉಪಯೋಗಿಸಬೇಕು ಎಂದು ಹೇಳಿದ್ದರು. ಅದೇ ರೀತಿ ಬಳಸುವುದು ಸೂಕ್ತ ಎಂದರು.

ಈ ಕುರಿತು ಸಮಜಾಯಿಷಿ ನೀಡಿದ ವಿರೋಧಪಕ್ಷದ ನಾಯಕ ಆರ್.ಅಶೋಕ, ಇನ್ನು ಮುಂದೆ ಆ ಪದ ಬಳಸುವುದಿಲ್ಲ. ಪರಿಶಿಷ್ಟರು ಎಂದೇ ಬಳಸುತ್ತೇವೆ. ಅದೇ ರೀತಿಯಲ್ಲಿ ಕೆಲವು ಸಂಘಟನೆಗಳು ದಲಿತ ಎಂಬುದಾಗಿ ಬಳಸುವುದನ್ನೂ ನಿಷೇಧಿಸಬೇಕು ಎಂದು ಹೇಳಿದಾಗ, ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರೂ ಬೆಂಬಲಿಸಿದರು. ಸದನದಲ್ಲಿ ಪರಿಶಿಷ್ಟರು ಎಂಬ ಪದ ಬಳಸುವ ಬಗ್ಗೆ ಸಭಾಧ್ಯಕ್ಷರು ಒಂದು ರೂಲಿಂಗ್ ಹೊರಡಿಸಬೇಕು ಎಂದು ಸಲಹೆ ನೀಡಿದರು.

'ದಲಿತ ಪದದ ಬದಲಿಗೆ ಪರಿಶಿಷ್ಟರು ಎಂದೇ ಕರೆಯಬೇಕು ಎಂದು ಸಂವಿಧಾನವೇ ಹೇಳಿದೆ. ಗಾಂಧೀಜಿಯವರು ಹರಿಜನ ಎಂದು ಕರೆದಾಗ ಅಂಬೇಡ್ಕರ್ ಅವರು ಅದನ್ನು ಬಲವಾಗಿ ವಿರೋಧಿಸಿದ್ದರು' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

31 ಸಾವಿರ ರೈತರಿಗೆ ಸಿಗದ 'ಸಾಲ ಮನ್ನಾ'ದ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ 2017 ಹಾಗೂ 2018ರಲ್ಲಿ ಘೋಷಿಸಿದ್ದ ಕೃಷಿ ಸಾಲ ಮನ್ನಾದ ಪ್ರಯೋಜನ 31 ಸಾವಿರ ರೈತರಿಗೆ ಇನ್ನೂ ಸಿಕ್ಕಿಲ್ಲ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಸ್. ರವಿ, ಬಿಜೆಪಿಯ ಸುನೀಲ್ ವಲ್ಯಾಪುರೆ ಅವರ ಪ್ರಶ್ನೆಗೆ ಉತ್ತರಿಸಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ನೀಡಲಾಗಿದ್ದ ₹50 ಸಾವಿರ ಸಾಲ ಮನ್ನಾ ಪ್ರಯೋಜನವನ್ನು 21.57 ಲಕ್ಷ ರೈತರು, 2018ರಲ್ಲಿ ಘೋಷಿಸಿದ್ದ ₹1 ಲಕ್ಷ ಸಾಲ ಮನ್ನಾ ಪ್ರಯೋಜನವನ್ನು 17.37 ಲಕ್ಷ ರೈತರು ಪಡೆದುಕೊಂಡಿದ್ದರು. ಎರಡೂ ಸಾಲ ಮನ್ನಾಕ್ಕಾಗಿ ಸರ್ಕಾರ ಕ್ರಮವಾಗಿ ₹7,662.26 ಕೋಟಿ ಹಾಗೂ 7,987.47 ಕೋಟಿ ಬಿಡುಗಡೆ ಮಾಡಿತ್ತು ಎಂದರು.



ಕೆ.ಎನ್‌.ರಾಜಣ್ಣ

ತಾಂತ್ರಿಕ ಕಾರಣಗಳಿಂದ 31 ಸಾವಿರ ರೈತರಿಗೆ ಸೌಲಭ್ಯ ಸಿಕ್ಕಿಲ್ಲ. ಅವರಿಗೆ ನೀಡಬೇಕಿರುವ ಮೊತ್ತ ₹167.51 ಕೋಟಿ, ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ಬಾಬ್ತು ₹64.49 ಕೋಟಿ ಸೇರಿ ಒಟ್ಟು ₹232 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಎಲ್ಲರಿಗೂ ಪ್ರಯೋಜನ ದೊರಕಲಿದೆ ಎಂದು ಹೇಳಿದರು.

ಶೂನ್ಯ ಬಡ್ಡಿದರದಲ್ಲಿ ₹25 ಸಾವಿರ ಕೋಟಿ ಸಾಲ: ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಪ್ರಸಕ್ತ ಸಾಲಿನಲ್ಲಿ 35.10 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ₹25 ಸಾವಿರ ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸಲಾಗುವುದು ಎಂದು ಹೇಳಿದರು.

ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 2023–24ನೇ ಸಾಲಿನಲ್ಲಿ 29.26 ಲಕ್ಷ ರೈತರಿಗೆ ₹22,982 ಕೋಟಿ ಬೆಳೆ ಸಾಲ ವಿತರಿಸಲಾಗಿತ್ತು. 2024–25ನೇ ಸಾಲಿನಲ್ಲಿ ಬೆಳೆಸಾಲದ ಜೊತೆಗೆ ಪಶುಸಂಗೋಪನೆಗೆ ದುಡಿಯುವ ಬಂಡವಾಳ ಸಾಲ ಹಾಗೂ 90 ಸಾವಿರ ರೈತರಿಗೆ ₹2 ಸಾವಿರ ಕೋಟಿ ಮಧ್ಯಮ, ದೀರ್ಘಾವಧಿ ಸಾಲ ವಿತರಿಸಲಾಗುತ್ತಿದೆ ಎಂದರು.

ಸರ್ಕಾರದ ವಿರುದ್ಧ ಜಂಟಿ ಹೋರಾಟ: ಸುರೇಶ್ ಬಾಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ 'ಮುಡಾ' ಹಗರಣದ ವಿರುದ್ಧ ಸದನದ ಒಳಗೆ ಮಿತ್ರಪಕ್ಷ ಬಿಜೆಪಿ ಜೊತೆ ಸೇರಿ ಹೋರಾಟ ಮುಂದುವರಿಸುತ್ತೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಗರಣಗಳನ್ನು ಸಮರ್ಥಿಸಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಿಲ್ಲ. ಸಾಕ್ಷ್ಯ ಸಮೇತ ಸಿಕ್ಕಿಬಿದ್ದಿದ್ದಾರೆ. ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡುವ ಜೊತೆಗೆ, ಕಾನೂನು ಹೋರಾಟಕ್ಕೂ ಜೆಡಿಎಸ್ ಕೈಜೋಡಿಸಲಿದೆ ಎಂದರು.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಕುರಿತು ಎಸ್‌ಐಟಿ ತನಿಖೆ ನಡೆಯುತ್ತಿದೆ. ತನಿಖೆಗೆ ಪಕ್ಷ ಅಡ್ಡಿಪಡಿಸುವುದಿಲ್ಲ. ಅಶ್ಲೀಲ ದೃಶ್ಯಗಳಿರುವ ಪೆನ್‌ಡ್ರೈವ್‌ಗಳನ್ನು ಹಂಚಿದ್ದು ನವೀನ್ ಗೌಡ ಎನ್ನುವುದನ್ನು ಎಸ್‌ಐಟಿಯೇ ಹೇಳಿದೆ. ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಕಾರಣ ಈ ಕುರಿತು ಹೆಚ್ಚು ಚರ್ಚೆ ನಡೆಸುವುದಿಲ್ಲ ಎಂದರು.

ತಮಿಳುನಾಡು ಸರ್ಕಾರಕ್ಕೆ ಉಪಮುಖ್ಯಮಂತ್ರಿ ಡಿಕೆಶಿ ಮನವಿ

ಮೇಕೆದಾಟು ಯೋಜನೆಗೆ ಸಹಕಾರ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ಆಗಲಿದೆ. ಹೀಗಾಗಿ, ಈ ಯೋಜನೆ ಅನುಷ್ಠಾನಕ್ಕೆ ತಮಿಳುನಾಡು ಸರ್ಕಾರ ಸಹಕಾರ ನೀಡಬೇಕು' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಕಾವೇರಿ ನೀರಿನ ವಿಚಾರವಾಗಿ ತಮಿಳುನಾಡು ಸರ್ಕಾರ ಸರ್ವಪಕ್ಷ ಸಭೆ ನಡೆಸಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಕಾವೇರಿ ನೀರಿನ ವಿಚಾರದಲ್ಲಿ ನಾವು ಸರ್ವಪಕ್ಷ ಸಭೆ ಮಾಡಿದಂತೆ, ತಮಿಳುನಾಡಿನವರೂ ಸರ್ವಪಕ್ಷ ಸಭೆ ಮಾಡುತ್ತಿದ್ದಾರೆ. ಅದು ಅವರ ಹಕ್ಕು. ಅದಕ್ಕೆ ನಮ್ಮ ಆಕ್ಷೇಪವಿಲ್ಲ' ಎಂದರು.

'ಬೆಂಗಳೂರಿನಲ್ಲಿ ಕನ್ನಡಿಗರು, ತಮಿಳಿಗರು, ಆಂಧ್ರದವರು, ಉತ್ತರ ಭಾರತದ ರಾಜ್ಯಗಳ ಜನರು ನೆಲೆಸಿದ್ದಾರೆ. ಮೇಕೆದಾಟು ಯೋಜನೆ ಜಾರಿಯಾದರೆ ಎಲ್ಲರಿಗೂ ಕುಡಿಯುವ ನೀರು ಲಭಿಸಲಿದೆ. ತಮ್ಮ ಹಿತಾಸಕ್ತಿ ಕಾಪಾಡಲು ಈ ಯೋಜನೆಗೆ ಸಹಕಾರ ನೀಡುವಂತೆ ತಮಿಳುನಾಡು ಸರ್ಕಾರಕ್ಕೆ ಮನವಿ ಮಾಡುತ್ತೇನೆ' ಎಂದೂ ಹೇಳಿದರು.

'ರಾಜ್ಯದಲ್ಲಿ ಸೋಮವಾರದಿಂದ ಹೆಚ್ಚು ಮಳೆ ಬೀಳುತ್ತಿದೆ. ಹೀಗಾಗಿ, ಕಾವೇರಿ ಕೊಳ್ಳದ ಜಲಾಶಯಗಳ ಒಳಹರಿವು ಪ್ರಮಾಣ ಹೆಚ್ಚಾಗಿದೆ. ಹಾರಂಗಿಯಿಂದ 20 ಸಾವಿರ ಕ್ಯುಸೆಕ್‌ನಷ್ಟು ನೀರನ್ನು ಹೊರಗೆ ಹರಿಬಿಡಲಾಗುತ್ತಿದೆ' ಎಂದರು.

'ತಮಿಳುನಾಡಿಗೆ ನಿತ್ಯ 1.5 ಟಿಎಂಸಿ ಅಡಿ ನೀರು': ಕಾವೇರಿ ಕಣಿವೆಯ ವಿವಿಧ ಜಲಾಶಯಗಳಲ್ಲಿ ನಿತ್ಯ 65,627 ಕ್ಯೂಸೆಕ್ ಒಳಹರಿವು ಇದ್ದು, ಪ್ರತಿದಿನ 1.5 ಟಿಎಂಸಿ ಅಡಿಗಳಷ್ಟು ನೀರನ್ನು ಹರಿಸಲಾಗುತ್ತಿದೆ ಎಂದು ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಈ ಕುರಿತು ಹೇಳಿಕೆ ನೀಡಿದ ಅವರು, 'ಹಾರಂಗಿ ಜಲಾಶಯಕ್ಕೆ 12,827 ಕ್ಯುಸೆಕ್, ಹೇಮಾವತಿ ಜಲಾಶಯಕ್ಕೆ 14,027 ಕ್ಯುಸೆಕ್, ಕೃಷ್ಣರಾಜ ಸಾಗರ ಜಲಾಶಯಕ್ಕೆ 25,933 ಕ್ಯುಸೆಕ್ ಮತ್ತು ಕಬಿನಿ ಜಲಾಶಯಕ್ಕೆ 12,840 ಕ್ಯುಸೆಕ್ ಒಳಹರಿವಿದೆ' ಎಂದು ಮಾಹಿತಿ ನೀಡಿದರು.

ಕಾವೇರಿ ನ್ಯಾಯಮಂಡಳಿ ಹಂಚಿಕೆ ಪ್ರಕಾರ, ಪ್ರಸಕ್ತ ವರ್ಷದಲ್ಲಿ ಈವರೆಗೆ ಬಿಳಿಗುಂಡ್ಲು ಮಾಪನ ಕೇಂದ್ರದ ಮೂಲಕ ತಮಿಳುನಾಡಿಗೆ 40 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ಈಗ ನಾಲ್ಕು ದಿನಗಳಲ್ಲಿ ಆರು ಟಿಎಂಸಿ ಅಡಿ ನೀರು ಹರಿದಿದೆ. ಕಾವೇರಿ ಕಣಿವೆಯಲ್ಲಿ ಬಿರುಸಿನ ಮಳೆಯಾಗುತ್ತಿದ್ದು, ಸಮಸ್ಯೆ ಪರಿಹಾರವಾಗುವ ವಿಶ್ವಾಸ ಮೂಡಿದೆ ಎಂದರು.

'ನಿಮ್ಮ ಪಕ್ಷದವರನ್ನು ಗೋಡಂಬಿ, ದ್ರಾಕ್ಷಿ ತಿನ್ನಲು ಕಳುಹಿಸಿದ್ದೀರಾ?'



'ಕುಮಾರಸ್ವಾಮಿ ತಮ್ಮ ಪಕ್ಷದ ನಾಯಕರನ್ನು ಸರ್ವಪಕ್ಷ ಸಭೆಗೆ ಗೋಡಂಬಿ, ದ್ರಾಕ್ಷಿ ತಿನ್ನಲು ಕಳುಹಿಸಿದ್ದರೆ' ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಸರ್ವಪಕ್ಷ ಸಭೆಗೆ ಗೋಡಂಬಿ, ದ್ರಾಕ್ಷಿ ತಿನ್ನಲು ಹೋಗಬೇಕಿತ್ತೇ' ಎಂಬ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಹೇಳಿಕೆಯ ಬಗ್ಗೆ ಕೇಳಿದಾಗ, 'ಅವರು ಸಿನಿಮಾ ಶೈಲಿಯಲ್ಲಿ ಮಾತನಾಡುತ್ತಿದ್ದಾರೆ. ಗೋಡಂಬಿ, ದ್ರಾಕ್ಷಿ ತಿನ್ನಲು ನಾವು ಕರೆದಿದ್ದೇವೆಯೇ? ಕುಮಾರಸ್ವಾಮಿಗೆ ರಾಜಕಾರಣ, ಟೀಕೆ, ಆರೋಪ, ಹಿಟ್ ಆ್ಯಂಡ್ ರನ್ ಮಾಡುವುದು ಬಿಟ್ಟರೆ, ಕಾವೇರಿ ನೀರು, ನಮ್ಮ ರೈತರ ಹಿತದ ಬಗ್ಗೆ ಕಾಳಜಿ ಇಲ್ಲ' ಎಂದರು.

'ನೀರು ಕಳವು ನಿಯಂತ್ರಣಕ್ಕೆ ಮಸೂದೆ'

ಬೆಂಗಳೂರು: ರಾಜ್ಯದಲ್ಲಿ ನೀರಾವರಿ ಯೋಜನೆಗಳ ನಾಲೆಗಳಿಂದ ನೀರು ಕಳವು ಮಾಡುವುದನ್ನು ನಿಯಂತ್ರಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಶೀಘ್ರದಲ್ಲಿ ವಿಧಾನಮಂಡಲದಲ್ಲಿ ಮಂಡಿಸಲಾಗುವುದು ಎಂದು ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಜಗದೀಶ ಗುಡಗಂಟಿ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಸಚಿವರು, 'ನಮ್ಮ ರಾಜ್ಯದಲ್ಲಿನ ಬಹುತೇಕ ನೀರಾವರಿ ಯೋಜನೆಗಳಲ್ಲಿ ನಾಲೆಗಳ ಕೊನೆಯವರೆಗೂ ನೀರು ತಲುಪುತ್ತಿಲ್ಲ. ಮಾರ್ಗ ಮಧ್ಯದಲ್ಲಿ ಪಂಪ್ ಅಳವಡಿಸಿ, ನಾಲೆಗಳ ಪಕ್ಕದಲ್ಲಿ ಕೊಳವೆ ಬಾವಿಗಳನ್ನು ಕೊರೆದು ನೀರು ಕಳವು ಮಾಡಲಾಗುತ್ತಿದೆ. ಅದನ್ನು ನಿಯಂತ್ರಿಸದಿದ್ದರೆ ನಮ್ಮ ಯಾವ ಯೋಜನೆಗಳೂ ಗುರಿ ತಲುಪಲು ಸಾಧ್ಯವಿಲ್ಲ' ಎಂದರು.

ಶಾಸಕರು ಒಪ್ಪಿದರೆ ಮುಂದಿನ ವಾರವೇ ಮಸೂದೆ ಮಂಡಿಸಲಾಗುವುದು ಎಂದು ಹೇಳಿದರು.

ತುಂಗಳ–ಸಾವಳಗಿ ಏತ ನೀರಾವರಿ ಯೋಜನೆಯ ನಾಲೆಗಳಲ್ಲಿ ಮಾರ್ಗಮಧ್ಯೆ ನೀರು ತೆಗೆಯುವುದನ್ನು ನಿಯಂತ್ರಿಸುವಂತೆ ಜಗದೀಶ ಗುಡಗಂಟಿ ಆಗ್ರಹಿಸಿದರು.





ಅಘನಾಶಿನಿ ನದಿ ಉಕ್ಕಿ ಹರಿದ ಪರಿಣಾಮ ಉಂಟಾದ ನೆರೆಯಿಂದಾಗಿ ಕುಮಟಾ ತಾಲ್ಲೂಕಿನ ದೀವಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳು ಜಲಾವೃತಗೊಂಡಿದ್ದವು –ಚಿತ್ರ: ಗೋಪಿ ಜಾಲಿ (ಎಡಚಿತ್ರ) ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯಲ್ಲಿ ತುಂಗಾ ನದಿ ಉಕ್ಕಿ ಹರಿದ ನೋಟ – ಪ್ರಜಾವಾಣಿ ಚಿತ್ರ/ರಾಘವೇಂದ್ರ ಕೆ.ಎನ್.ಶೃಂಗೇರಿ

ಕೊಡಗು ಜಿಲ್ಲೆಯಲ್ಲಿ ವಿಪತ್ತು ನಿರ್ವಹಣಾ ಕೇಂದ್ರ ಆರಂಭ • ಆಗುಂಬೆಯಲ್ಲಿ 34.2 ಸೆಂ.ಮೀ ಮಳೆ; ತುಂಗಾ ನದಿಪಾತ್ರದಲ್ಲಿ ಪ್ರವಾಹ ಭೀತಿ

ಭರಪೂರ ಮಳೆ: ನದಿಗಳ ಅಬ್ಬರ, ಜನಜೀವನ ತತ್ತರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ಮಡಿಕೇರಿ: ದಕ್ಷಿಣ ಕನ್ನಡ, ಕೊಡಗು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಬಿರುಸಿನ ಮಳೆ ಮುಂದುವರಿದಿದೆ. ಸೋಮವಾರ ರಾತ್ರಿಯಿಡೀ ಸುರಿದ ಕುಂಭದ್ರೋಣ ಮಳೆಗೆ ಮಲೆನಾಡಿನಲ್ಲಿ ತುಂಗಾ, ಭದ್ರಾ, ಶರಾವತಿ, ವರದಾ ಹಾಗೂ ಕುಮದ್ವತಿ ನದಿಗಳು ಉಕ್ಕಿ ಹರಿಯುತ್ತಿವೆ.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಅತಿಹೆಚ್ಚು 34.2 ಸೆಂ.ಮೀ ಮಳೆ ದಾಖಲಾಗಿದೆ. ವರುಣನ ಆರ್ಭಟದಿಂದ ಜಲಾಶಯಗಳಿಗೆ ಈ ಮುಂಗಾರು ಹಂಗಾಮಿನಲ್ಲಿ ದಾಖಲೆ ಪ್ರಮಾಣದ ನೀರು ಹರಿದುಬರುತ್ತಿದೆ.

ಗಾಜನೂರು ಬಳಿ ಇರುವ ತುಂಗಾ ಜಲಾಶಯ ಈಗಾಗಲೇ ಭರ್ತಿಯಾಗಿದೆ. ಆದರೆ ಮಂಗಳವಾರ ಜಲಾಶಯಕ್ಕೆ 70,037 ಕ್ಯುಸೆಕ್ ನೀರು ಹರಿದುಬರುತ್ತಿದೆ. ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಇದರಿಂದ ತುಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಶಿವಮೊಗ್ಗ ನಗರದಲ್ಲಿನ ನದಿ ದಂಡೆಯ ಮಂಟಪ ಸಂಪೂರ್ಣ ಮುಳುಗಡೆ ಆಗಿದೆ. ತುಂಗಾ ಜಲಾಶಯದ ಆಡಳಿತ ಕೂಡ ನದಿ ದಂಡೆಯ ನಿವಾಸಿಗಳಿಗೆ ಪ್ರವಾಹದ ಮುನ್ನೆಚ್ಚರಿಕೆ ನೀಡಿದೆ.

ಶರಾವತಿ ನದಿಯೂ ಮೈದುಂಬಿದ್ದು, ಲಿಂಗನಮಕ್ಕಿ ಜಲಾಶಯಕ್ಕೆ ದಾಖಲೆಯ 77,911 ಕ್ಯುಸೆಕ್ ಒಳಹರಿವು ಇದ್ದು, 24 ಗಂಟೆಗಳಲ್ಲಿ 35,000 ಕ್ಯುಸೆಕ್‌ನಷ್ಟು ನೀರಿನ ಪ್ರಮಾಣ ಏರಿಕೆಯಾಗಿದೆ. ಶರಾವತಿ ಜಲಾನಯನ ಪ್ರದೇಶದಲ್ಲಿ ಹೊಸನಗರ ತಾಲ್ಲೂಕಿನ ಮಾಸ್ತಿಕಟ್ಟೆಯಲ್ಲಿ 24.70 ಸೆಂ.ಮೀ ಹಾಗೂ ಹುಲಿಕಲ್‌ನಲ್ಲಿ 24.50 ಸೆಂ.ಮೀ ಮಳೆ ದಾಖಲಾಗಿದೆ.

ಭದ್ರಾಗೆ ಒಂದೇ ದಿನ 3.4 ಅಡಿ ನೀರು: ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ 27,839 ಕ್ಯುಸೆಕ್ ನೀರು ಹರಿದುಬರುತ್ತಿದೆ. ಇದರಿಂದ ಜಲಾಶಯದಲ್ಲಿ ನೀರಿನಮಟ್ಟ 144.7 ಅಡಿಗೆ ಏರಿಕೆ ಆಗಿದೆ. ಸೋಮವಾರ ಜಲಾಶಯದಲ್ಲಿ 141.3 ಅಡಿ ನೀರು ಇತ್ತು.

ಮಳೆ ಬಿರುಸು: ಕೊಡಗು ಜಿಲ್ಲೆಯಲ್ಲಿ ಮುಂಗಾರು ಬಿರುಸುಗೊಂಡಿದ್ದು, ಮಡಿಕೇರಿ ತಾಲ್ಲೂಕಿನ ಕೊಯನಾಡು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮೇಲೆ ಸೋಮವಾರ ತಡರಾತ್ರಿ ಭಾರಿ ಪ್ರಮಾಣದ ಮಣ್ಣು ಕುಸಿದು, 5 ಕೋಣೆಗಳು ಸಂಪೂರ್ಣ ಹಾನಿಯಾಗಿವೆ. ಹಗಲಿನಲ್ಲಿ ಕುಸಿದಿದ್ದರೆ ಹೆಚ್ಚು ಅನಾಹುತವಾಗುತ್ತಿತ್ತು. ಶಾಲೆಯ ಎಲ್ಲ 86 ಮಕ್ಕಳನ್ನು ಇಲ್ಲಿಗೆ 2.5 ಕಿ.ಮೀ ದೂರದ ಸಂಪಾಜೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಥಳಾಂತರಿಸಲಾಗಿದೆ.

ತ್ರಿವೇಣಿ ಸಂಗಮ ಭರ್ತಿಯಾಗಿರುವುದರಿಂದ ಭಾಗಮಂಡಲ–ನಾಪೋಕ್ಲು ರಸ್ತೆಗೆ ನೀರು ಬಂದಿದ್ದರೂ ಮೇಲ್ಸೇತುವೆ ಇರುವುದರಿಂದ ಸಂಚಾರಕ್ಕೆ ಸಮಸ್ಯೆಯಾಗಿಲ್ಲ. ಜಿಲ್ಲೆಯಲ್ಲಿ ವಿಪತ್ತು ನಿರ್ವಹಣಾ ಕೇಂದ್ರವನ್ನು ತೆರೆಯಲಾಗಿದೆ. ಸೋಮವಾರಪೇಟೆ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಜನ ವಿದ್ಯುತ್ ಮತ್ತು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಾರಂಗಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ 8,764 ಕ್ಯುಸೆಕ್‌ಗೆ ಇಳಿಕೆಯಾಗಿರುವುದರಿಂದ ನದಿಗೆ ಬಿಡುತ್ತಿರುವ ನೀರಿನ ಪ್ರಮಾಣವನ್ನು 10 ಸಾವಿರ ಕ್ಯುಸೆಕ್‌ಗೆ ಇಳಿಸಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಸೋಮವಾರ ತಡರಾತ್ರಿ ಮತ್ತು ಮಂಗಳವಾರವೂ ಉತ್ತಮ ಮಳೆಯಾಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಳಿಯಿಂದ ಕೂಡಿದ ಬಿರುಸಿನ ಮಳೆ ಸುರಿಯಿತು.

ನೇತ್ರಾವತಿ, ಕುಮಾರಧಾರಾ, ಫಲ್ಗುಣಿ, ಶಾಂಭವಿ ಹಾಗೂ ನಂದಿನಿ ನದಿಗಳು ತುಂಬಿ ಹರಿಯುತ್ತಿವೆ. ಭಾರಿ ಮಳೆಯಿಂದಾಗಿ ಬೆಳ್ತಂಗಡಿ– ಉಜಿರೆ ರಸ್ತೆಯು ಜಲಾವೃತವಾಗಿ, ವಾಹನ ಸವಾರರು ಸಮಸ್ಯೆ ಎದುರಿಸಿದರು.

ಉಡುಪಿ ಜಿಲ್ಲೆಯಲ್ಲಿಯೂ ಧಾರಾಕಾರ ಮಳೆ ಸುರಿದಿದೆ. ಬ್ರಹ್ಮಾವರ, ಕುಂದಾಪುರ, ಬೈಂದೂರು ವ್ಯಾಪ್ತಿಯಲ್ಲಿ ಹಲವೆಡೆ ನದಿಗಳು ಉಕ್ಕಿ ಹರಿಯುವುತ್ತಿರುವುದರಿಂದ ನೆರೆ ನಿರ್ಮಾಣವಾಗಿದೆ. ಬೈಂದೂರಿನ ಶಿರೂರು, ಉಪ್ಪುಂದ, ನಾಗೂರು, ಕಿರಿಮಂಜೇಶ್ವರ, ಮುಂತಾದೆಡೆ ಭಾರಿ ಮಳೆಗೆ ಅಪಾರ ಹಾನಿ ಸಂಭವಿಸಿದೆ.

ಕೋಟ, ಬ್ರಹ್ಮಾವರ ಪರಿಸರದ ಹಲವೆಡೆ ಧಾರಾಕಾರ ಮಳೆಯಾಗಿದ್ದು, ಸೀತಾ, ಮಡಿಸಾಲು ನದಿಗಳು ಉಕ್ಕಿ ಹರಿದು ಅನೇಕ ಮನೆಗಳು ಜಲಾವೃತಗೊಂಡಿವೆ. ಮಡಿಸಾಲು ನದಿ ನೀರು ಮಡಿ ಕುಕ್ಕೆಹಳ್ಳಿ, ಹೇರೂರು ಉಗ್ಗೇಲ್ ವೆಟ್ಟು, ಆರೂರು ಬೆಳ್ಮಾರು ಸಂಪರ್ಕ ರಸ್ತೆ, ಸೇತುವೆ ಮೇಲೆ ಹರಿದು ಮಂಗಳವಾರ ಮಧ್ಯಾಹ್ನದವರೆಗೆ ಈ ಮಾರ್ಗದಲ್ಲಿ ರಸ್ತೆ ಸಂಪರ್ಕ ಕಡಿತಗೊಂಡಿತ್ತು. ಆರೂರು ವಿಷ್ಣುಮೂರ್ತಿ ದೇವಸ್ಥಾನದೊಳಗೆ ನೀರು ನುಗ್ಗಿದೆ.



ಶಿವಮೊಗ್ಗ ನಗರದ ಬಳಿ ತುಂಗಾ ನದಿ ಅಪಾಯದ ಹಂತ ಮೀರಿ ಹರಿಯುತ್ತಿದೆ

> ಧಾರಾಕಾರವಾಗಿ ಮಳೆ ಸುರಿಯುತ್ತಿರುವ ಕಾರಣ, ಸುರಕ್ಷತೆ ದೃಷ್ಟಿಯಿಂದ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸ ಕೈಗೊಳ್ಳಬೇಡಿ
>
> **ಮೀನಾ ನಾಗರಾಜ್**, ಜಿಲ್ಲಾಧಿಕಾರಿ ಚಿಕ್ಕಮಗಳೂರು

> ಕರಾವಳಿಯಲ್ಲಿ ಭೂಕುಸಿತ ತಡೆಗೆ ಹಸಿರು ಕವಚಯೋಜನೆ ಅನುಷ್ಠಾನದ ಜತೆ, ಮಲೆನಾಡು ಭೂ ಕುಸಿತ ತಡೆ ಅಧ್ಯಯನ ವರದಿಯ ಶಿಫಾರಸು ಜಾರಿ ಮಾಡಬೇಕು
>
> **ಅನಂತ ಅಶೀಸರ**, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ


12 ತಾಸು ಸಂಚಾರ ವ್ಯತ್ಯಯ

ಕಾರವಾರ: ಮಳೆಯಿಂದ ಗುಂಡಬಾಳ ನದಿ ಉಕ್ಕೇರಿದ್ದರಿಂದ ಹೊನ್ನಾವರದ ಕಡತೋಕಾ, ಭಾಸ್ಕೇರಿ ಸೇರಿ ಹಲವೆಡೆ ನೆರೆ ಪರಿಸ್ಥಿತಿ ಉದ್ಭವಿಸಿದೆ. ಅಘನಾಶಿನಿ ನದಿ ಉಕ್ಕಿ ಹರಿದು ದೀವಗಿ, ಹೆಗಡೆ ಸೇರಿ 13ಕ್ಕೂ ಹೆಚ್ಚು ಗ್ರಾಮಗಳು ಜಲಾವೃತ ಆಗಿವೆ. ಕಾಳಜಿ ಕೇಂದ್ರಗಳಲ್ಲಿ 2,368 ಹೆಚ್ಚು ಜನರು ಆಶ್ರಯ ಪಡೆದಿದ್ದಾರೆ' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದರು.

ಚತುಷ್ಪಥ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಕಾರವಾರ ತಾಲ್ಲೂಕಿನ ಚೆಂಡಿಯಾ ಬಳಿ ನೀರು ತುಂಬಿಕೊಂಡು 12 ತಾಸುಗಳಿಗೂ ಹೆಚ್ಚು ಸಮಯ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಶಿರಸಿ ತಾಲ್ಲೂಕಿನ ರಾಗಿಹೊಸಳ್ಳಿ ಸಮೀಪ ಗುಡ್ಡ ಕುಸಿದು ಶಿರಸಿ-ಕುಮಟಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 766ಇ ಮೇಲೆ ಮಣ್ಣಿನ ರಾಶಿ ಆವರಿಸಿಕೊಂಡಿದ್ದಲ್ಲದೆ, ಇದೇ ರಸ್ತೆಯಲ್ಲಿ ಕುಮಟಾ ತಾಲ್ಲೂಕಿನ ಕತಗಾಲ ಸಮೀಪ ಚಂಡಿಕಾ ನದಿ ಉಕ್ಕಿ ಹರಿದ ಪರಿಣಾಮ ಕರಾವಳಿ–ಮಲೆನಾಡು ಸಂಪರ್ಕಿಸುವ ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಂಡಿತ್ತು.

ಹೊನ್ನಾವರ ತಾಲ್ಲೂಕಿನ ಖರ್ವಾ ಕಲಭಾಗ ಬಳಿ ಹೊನ್ನಾವರ-ಬೆಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-69ರಲ್ಲಿ ಗುಡ್ಡ ಕುಸಿದು ಕೆಲ ತಾಸು ಸಂಚಾರ ಸ್ಥಗಿತವಾಗಿತ್ತು. ಗೋಕರ್ಣದ ರಾಮತೀರ್ಥದ ದೇವಸ್ಥಾನದ ಬಳಿ ಗುಡ್ಡ ಕುಸಿತ ಉಂಟಾಯಿತು.

- ಕಬಿನಿ ಜಲಾಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಬೀಚನಹಳ್ಳಿ ಜಲಾಶಯ ಭರ್ತಿ
- ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ರಾಟೆಮನೆ ಬಳಿ 100 ಮೀಟರ್‌ನಷ್ಟು ಕುಸಿದ ಬೆಂಗಳೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿ –75ರ ಚತುಷ್ಪಥ ರಸ್ತೆ
- ಸುಬ್ರಹ್ಮಣ್ಯದಲ್ಲಿ ಕುಮಾರಧಾರಾ ನದಿಯ ಪ್ರವಾಹದಲ್ಲಿ ತೇಲಿಹೋದ ಆನೆಯ ಮೃತದೇಹ







1. ಧಾರಾಕಾರ ಮಳೆಯಿಂದ ಕೊಡಗು ಜಿಲ್ಲೆಯ ಇರ್ಪು ಜಲಪಾತ ತುಂಬಿ ಹರಿಯುತ್ತಿದೆ 2. ಮಡಿಕೇರಿ ತಾಲ್ಲೂಕಿನ ಕೊಯನಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲೆ ಸೋಮವಾರ ತಡರಾತ್ರಿ ಮಣ್ಣು ಕುಸಿದ ರಭಸಕ್ಕೆ ಕೋಣೆಯೊಂದರ ಗೋಡೆ ಛಿದ್ರಗೊಂಡು ಕಲ್ಲುಗುಂಡುಗಳು ನುಗ್ಗಿವೆ 3. ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಸುಕ್ಷೇತ್ರ ನರಸಿಂಹವಾಡಿಯ ದತ್ತ ಮಂದಿರ ಕೃಷ್ಣಾ ನದಿನೀರಿನಿಂದ ಆವೃತವಾಗಿದೆ



ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದಿದ್ದರಿಂದ ಗಂಗಾವಳಿ ನದಿಯ ಇನ್ನೊಂದು ಪಕ್ಕದಲ್ಲಿರುವ ಉಳುವರೆ ಗ್ರಾಮದ ಮನೆಗಳ ಬಳಿ ಮಣ್ಣಿನ ರಾಶಿ ಬಂದು ಬಿದ್ದಿದೆ– ಪ್ರಜಾವಾಣಿ ಚಿತ್ರಗಳು

ತಾಯಿ, ಮಗಳು ಸಜೀವ ದಹನ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ರನ್ನಬೆಳಗಲಿಯ ಅಕ್ಕಿಮರಡಿ ರಸ್ತೆಯಲ್ಲಿರುವ ತೋಟದ ಪತ್ರಾಸ್ ಶೆಡ್‌ಗೆ ದುಷ್ಕರ್ಮಿಗಳು ಮಂಗಳವಾರ ಬೆಳಗಿನ ಜಾವ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಪರಿಣಾಮ ತಾಯಿ–ಮಗಳು ಸಜೀವವಾಗಿ ದಹನಗೊಂಡು ಇನ್ನಿಬ್ಬರು ಗಾಯಗೊಂಡಿದ್ದಾರೆ.

ತಾಯಿ ಜೈಬಾನು ದಸ್ತಗೀರ ಪೆಂಡಾರಿ (55) ಹಾಗೂ ಪುತ್ರಿ ಶಬಾನಾ ದಸ್ತಗೀರ ಪೆಂಡಾರಿ (29) ಮೃತರು. ಜೈಬಾನು ಪತಿ ದಸ್ತಗೀರ ಮೌಲಾಸಾಬ ಪೆಂಡಾರಿ (64) ಮತ್ತು ಪುತ್ರ ಸುಬಾನ್ ದಸ್ತಗೀರ ಪೆಂಡಾರಿ (27) ಅವರಿಗೆ ಗಾಯವಾಗಿದೆ. ಶಬಾನಾ ಸಹೋದರಿಯ ಪುತ್ರ ಸಿದ್ದಿಕ್ ಶೌಕತ್ ಪೆಂಡಾರಿಗೆ (19) ಹೆಚ್ಚು ಗಾಯಗಳಾಗಿಲ್ಲ.

ವಿವರ: ಕುಟುಂಬದ ಐವರು ಸದಸ್ಯರು ಮಲಗಿದ್ದ ವೇಳೆ ಮಧ್ಯರಾತ್ರಿ 2 ರಿಂದ 3 ಗಂಟೆಗೆ ದುಷ್ಕರ್ಮಿಗಳು 200 ಲೀಟರ್ ಸಾಮರ್ಥ್ಯದ ಸಿಂಟೆಕ್ಸ್‌ನಲ್ಲಿ ಪೆಟ್ರೋಲ್ ತುಂಬಿ, ಅದಕ್ಕೆ 3 ಎಚ್‌ಪಿ ಮೋಟರ್ ಬಳಸಿ ಪೈಪ್ ಮೂಲಕ ಶೆಡ್‌ಗೆ ಪೆಟ್ರೋಲ್ ಸುರಿದಿದ್ದಾರೆ. ನಂತರ ಶೆಡ್‌ನ ಬಾಗಿಲಿಗೆ ಚಿಲಕ ಹಾಕಿ, ಬೆಂಕಿ ಹಚ್ಚಿದ್ದಾರೆ.

'ಸಿದ್ದಿಕ್ ಪೆಂಡಾರಿಗೆ ತಕ್ಷಣವೇ ಎಚ್ಚರವಾಗಿದ್ದು, ಎಲ್ಲರನ್ನೂ ಎಬ್ಬಿಸಿ ಶೆಡ್‌ನ ಕಟ್ಟಿಗೆ ಮುರಿದು ಹೊರಬಂದಿದ್ದಾರೆ. ಅಷ್ಟರಲ್ಲಿ ಬೆಂಕಿ ವ್ಯಾಪಿಸಿದೆ. ನಾಲ್ವರು ಶೆಡ್‌ನಿಂದ ಹೊರಬರಲು, ಪರಸ್ಪರ ಉಳಿಸಲು ಪ್ರಯತ್ನಿಸಿದರು' ಎಂದು ಪೊಲೀಸರು ತಿಳಿಸಿದರು.

'ಪ್ರಾಚೀನ ಪಾರ್ಲಿಮೆಂಟುಗಳ ಪ್ರದರ್ಶಿಣೆ' 20ರಂದು ಲಂಡನ್‌ನಲ್ಲಿ ಬಿಡುಗಡೆ

ಮೈಸೂರು: ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಅವರು ರಚಿಸಿರುವ 'ಪ್ರಾಚೀನ ಪಾರ್ಲಿಮೆಂಟುಗಳ ಪ್ರದರ್ಶಿಣೆ' ಕೃತಿಯ ಬಿಡುಗಡೆ ಕಾರ್ಯಕ್ರಮ ಲಂಡನ್‌ನಲ್ಲಿ ಜುಲೈ 20ರಂದು ನಡೆಯಲಿದೆ.

ಥೇಮ್ಸ್ ನದಿ ದಂಡೆಯ ಬಳಿ ಇರುವ ಬಸವೇಶ್ವರ ಪುತ್ಥಳಿ ಬಳಿ ಕೃತಿಯನ್ನು, ಲಂಡನ್‌ನಲ್ಲಿ ಮೇಯರ್ ಆಗಿದ್ದ ನೀರಜ್ ಪಾಟೀಲ್ ಬಿಡುಗಡೆ ಮಾಡಲಿದ್ದಾರೆ. ಬೆಂಗಳೂರಿನ ಸೃಷ್ಟಿ ಪ್ರಕಾಶನವು ಕೃತಿ ಪ್ರಕಟಿಸಿದೆ.

'ಭಾರತ, ಯೂರೋಪ್, ಗ್ರೀಕ್ ಸೇರಿದಂತೆ ವಿಶ್ವದ ವಿವಿಧ ಸಂಸತ್ತುಗಳ ಸ್ವರೂಪ, ಕಾರ್ಯವೈಖರಿಯನ್ನು ವಿವರಿಸಿರುವ ಕೃತಿ ಇದು' ಎಂದು ವಿಶ್ವನಾಥ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಅನುಭವ ಮಂಟಪದ ಮೂಲಕ ಜಗತ್ತಿಗೆ ಸಂಸತ್ತಿನ ಪರಿಕಲ್ಪನೆಯನ್ನು ಪರಿಚಯಿಸಿದ ಕಾರಣಕ್ಕೆ ಬಸವಣ್ಣನ ಪುತ್ಥಳಿ ಬಳಿಯೇ ಕೃತಿ ಬಿಡುಗಡೆಯನ್ನು ಆಯೋಜಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಗುಡ್ಡ ಕುಸಿತ: ಆರು ಸಾವು

ಒಂದನೇ ಪುಟದಿಂದ...

ಲಕ್ಷ್ಮಣ ಪುತ್ರಿ ಅವಂತಿಕಾ (6) ಅವರ ಮೃತದೇಹ ಗಂಗೆಕೊಳ್ಳ ಸಮೀಪ ಕಾಣಿಸಿತು. ದಡಕ್ಕೆ ಎಳೆಯುವಷ್ಟರಲ್ಲಿ ನೀರಿನ ರಭಸಕ್ಕೆ ಕೊಚ್ಚಿ ಹೋಯಿತು ಎಂದು ಸ್ಥಳೀಯರು ತಿಳಿಸಿದ್ದಾರೆ. ಈ ಕುಟುಂಬದ ಸಂಬಂಧಿ ಉಪೇಂದ್ರ (50), ಸ್ಥಳೀಯರಾದ ಜಗನ್ನಾಥ ಮತ್ತು ಉಳುವರೆ ಗ್ರಾಮದ ಸಣ್ಣಿ ಗೌಡ ಎಂಬುವರು ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗುಡ್ಡ ಕುಸಿದ ಸ್ಥಳದಲ್ಲಿ ನಿತ್ಯ ಹತ್ತಾರು ಲಾರಿ, ಟ್ಯಾಂಕರ್ ನಿಲುಗಡೆಯಾಗುತ್ತಿದ್ದವು. ಇಲ್ಲಿನ ಗುಡ್ಡದ ಬುಡದಲ್ಲಿ ಬೀಳುವ ನೀರಿನಲ್ಲಿ ಸ್ನಾನ ಮಾಡುತ್ತಿದ್ದ ಚಾಲಕರು ಚಹಾದಂಗಡಿಯಲ್ಲಿ ಉಪಾಹಾರಕ್ಕಾಗಿ ನಿಲ್ಲುತ್ತಿದ್ದರು' ಎಂದು ಸ್ಥಳೀಯರೊಬ್ಬರು ಹೇಳಿದರು.

'ಗುಡ್ಡ ಕುಸಿದು ಬೀಳುವುದು ಕಣ್ಣೆದುರೇ ಕಾಣುತ್ತಿತ್ತು. ಅಂಗಡಿ ಎದುರು ನಿಂತಿದ್ದವರು, ರಸ್ತೆ ಪಕ್ಕ ವಾಹನ ನಿಲ್ಲಿಸಿಕೊಂಡಿದ್ದ ಚಾಲಕರು ಮಣ್ಣಿನ ರಾಶಿಯಡಿ ಸಿಲುಕಿದ್ದನ್ನು ನೋಡಿದೆ. ತಕ್ಷಣವೇ ಲಾರಿಯನ್ನು ಹಿಮ್ಮುಖವಾಗಿ ಚಲಾಯಿಸಿ, ಜೀವ ಉಳಿಸಿಕೊಂಡೆ' ಎಂದು ಲಾರಿ ಚಾಲಕ ರಾಜು ಹುಲಿದೇವರವಾಡಾ ವಿವರಿಸಿದರು.

ಸಾವಿರಾರು ಟನ್ ಮಣ್ಣು ಬಿದ್ದ ರಭಸಕ್ಕೆ ನದಿಯ ಇನ್ನೊಂದು ಬದಿಯಲ್ಲಿರುವ ಉಳುವರೆ ಗ್ರಾಮದ ನಾಲ್ಕು ಮನೆಗಳಿಗೂ ಹಾನಿಯಾಗಿದೆ. ಅಲ್ಲಿನ ಆರಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದು, ಕುಮಟಾದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಣ್ಣಿನಡಿ ಸಿಲುಕಿದವರ ಶೋಧ ಕಾರ್ಯವನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ದಳದ (ಎನ್‌ಡಿಆರ್‌ಎಫ್) ತಂಡವು ಕೈಗೊಂಡಿದೆ. ಹೆದ್ದಾರಿಯ ಮೇಲೆರಗಿರುವ ಮಣ್ಣಿನ ರಾಶಿ ತೆರವುಗೊಳಿಸಲು 12ಕ್ಕೂ ಹೆಚ್ಚು ಜೆಸಿಬಿ ಕಾರ್ಯಾಚರಣೆ ನಡೆಸಿವೆ. ಗಂಗಾವಳಿ ನದಿಯಲ್ಲೂ ಶೋಧ ಮುಂದುವರೆದಿದೆ.

ಮಣ್ಣಿನ ರಾಶಿ ತೆರವುಗೊಳಿಸಿದಂತೆ ಇನ್ನಷ್ಟು ಮಣ್ಣು ಕುಸಿಯುವ ಅಪಾಯದ ಆತಂಕದಲ್ಲಿಯೇ ಶೋಧ ಕಾರ್ಯ ನಡೆದಿದೆ. ದುರ್ಘಟನೆ ನಡೆದ ಸ್ಥಳದ ಬಳಿ ಜನರ ಓಡಾಟ ನಿರ್ಬಂಧಿಸಲಾಗಿದೆ.

ಮತ್ತೊಬ್ಬ ವ್ಯಕ್ತಿ ಸಾವು: ಸತತ ಮಳೆಯಿಂದ ಕಾರವಾರ ತಾಲ್ಲೂಕಿನ ಕಿನ್ನರ ಗ್ರಾಮದಲ್ಲಿ ಮನೆ ಮೇಲೆ ಗುಡ್ಡ ಕುಸಿದು, ತಿಕರ್ಸ್ ಗುರವ (65) ಎಂಬುವರು ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ವರದಿ: ಜಿಲ್ಲೆಯಲ್ಲಿ ಮಳೆ ಆರ್ಭಟ ಹೆಚ್ಚಿದ್ದು, ಅಲ್ಲಲ್ಲಿ ಭೂಕುಸಿತ, ಮನೆ ಕುಸಿತ, ಮರ ಬೀಳುವುದು ಮುಂದುವರಿದಿದೆ. ವಿಪರೀತ ಮಳೆಯಿಂದ ಶೃಂಗೇರಿಯ ತುಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಭೂಕುಸಿತದಿಂದ ಚಿಕ್ಕಮಗಳೂರು– ಕೊಪ್ಪ ಸಂಪರ್ಕ ಕಡಿತಗೊಂಡಿದೆ. ತುಂಗಾನದಿ ಉಕ್ಕಿ ಹರಿಯುತ್ತಿದ್ದು, ಶಾರದ ಪೀಠ ಭಾರತೀ ತೀರ್ಥ ಸ್ವಾಮೀಜಿ ಅವರ ಸ್ನಾನಘಟ್ಟ ಹಾಗೂ ಸಂಧ್ಯಾ ವಂದನೆ ಮಂಟಪ ಮುಳುಗಿದೆ.

ಹೊರಹರಿವು ಹೆಚ್ಚಳ: ಆಲಮಟ್ಟಿ ಜಲಾಶಯದಿಂದ 14 ಗೇಟ್‌ಗಳ ಮೂಲಕ ನೀರನ್ನು ನದಿ ಪಾತ್ರಕ್ಕೆ ಬಿಡಲಾಗುತ್ತಿದೆ. ಮಹಾರಾಷ್ಟ್ರದಲ್ಲಿ ಎರಡು ದಿನಗಳಿಂದ ಸುರಿದ ಭಾರೀ ಮಳೆ ಕಾರಣ ಒಂದು ಲಕ್ಷ ಕ್ಯುಸೆಕ್‌ಗೂ ಹೆಚ್ಚಿನ ನೀರು ಹರಿದು ಬಂದಿದ್ದು, ಜಲಾಶಯದ ಹೊರಹರಿವನ್ನು ಮಂಗಳವಾರ ಹಂತಹಂತವಾಗಿ ಹೆಚ್ಚಿಸಲಾಯಿತು.

ಗ್ಯಾಸ್ ಟ್ಯಾಂಕರ್ ಭಯ

ಗಂಗಾವಳಿ ನದಿಗೆ ಉರುಳಿ ಬಿದ್ದ ಗ್ಯಾಸ್ ಟ್ಯಾಂಕರ್ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿದೆ. ನದಿಗೆ ಉರುಳಿ ತೇಲುತ್ತಿದ್ದ ಟ್ಯಾಂಕರ್‌ನಿಂದ ಅನಿಲ ಸೋರಿಕೆಯಾಗುತ್ತಿರುವ ಆತಂಕವೂ ಉಂಟಾಗಿತ್ತು. ಸಗಡಗೇರಿ ಸಮೀಪ ನದಿ ದಡಕ್ಕೆ ಅಪ್ಪಳಿಸಿ ಟ್ಯಾಂಕರ್ ನಿಂತಿತ್ತು. ಸುರಕ್ಷತೆ ದೃಷ್ಟಿಯಿಂದ ನದಿಯಂಚಿನ ಗ್ರಾಮಗಳ ಜನರನ್ನು ದೂರದಲ್ಲಿರುವ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	109.10	35,997	2,357
ಹಾರಂಗಿ	2,859	2,852.65	8,764	10,000
ಕಬಿನಿ	2,284.00	2,282.38	29,310	36,000
ಹೇಮಾವತಿ	2,922	2,906.10	14,027	250
ಲಿಂಗನಮಕ್ಕಿ	1,819	1,782.15	77,911	-
ಸೂಪಾ (ಮೀ)	564	537.5	28,566	-
ಮಾಣಿ	595	578.80	10,592	-
ತುಂಗಭದ್ರಾ	1,633	1,608.91	28,153	211
ಮಲಪ್ರಭಾ	2,079.5	2,055.90	5,865	194
ಘಟಪ್ರಭಾ	2175	2,141.50	15,601	367
ಭದ್ರಾ	186	144.7	27,839	166
ಆಲಮಟ್ಟಿ (ಮೀ)	519.6	517.84	61,683	17,563
ನಾರಾಯಣಪುರ (ಮೀ)	492.25	490.18	22,621	92

* ನೆಲಮಟ್ಟದಿಂದ

'ಅನನ್ಯ ನಿರ್ಮಾಪಕ, ರಂಗಯೋಗಿ'

• ಗಿರೀಶ ಕಾಸರವಳ್ಳಿ

ನುಡಿ ನಮನ

ಸದಾನಂದ ಸುವರ್ಣ ಅವರ ಜೊತೆಗೆ ಒಡನಾಡಿದ ಎಲ್ಲ ಪರಿಚಯಸ್ಥರು ಹೇಳುವ ಮಾತೆಂದರೆ, ಅವರು 'ಜಂಟಲ್‌ಮ್ಯಾನ್ ಟು ದಿ ಕೋರ್'. ಯಾವುದೇ ರೀತಿಯ ಹೊಟ್ಟೆಕಿಚ್ಚು, ಕುಚೇಷ್ಟೆ ಇಲ್ಲದೆ ಬದುಕಿದರು. ಬಹಳ ನಿಷ್ಠುರವಾದಿ. ಹೀಗಾಗಿಯೇ ನಾನು ಏನೇ ಬರೆದರೂ ಮೊದಲು ಸುವರ್ಣ ಅವರಿಗೆ ತೋರಿಸಿ ಪ್ರತಿಕ್ರಿಯೆ ಕೇಳುತ್ತಿದ್ದೆ.

ಸುವರ್ಣರು ನನಗೆ ಪರಿಚಯವಾಗಿದ್ದೇ ಒಂದು ರೀತಿ ಸೋಜಿಗ. ಆಗಷ್ಟೇ ಎಫ್‌ಟಿಐಐನಲ್ಲಿ ಎಕ್ಸಾಂ ಮುಗಿಸಿ ಮುಂಬೈ ಫಿಲ್ಮ್ ಫೆಸ್ಟಿವಲ್‌ಗೆ ಹೋಗಿದ್ದೆ. ಅಲ್ಲಿ ಸಂತೋಷ್‌ಕುಮಾರ್ ಗುಲ್ವಾಡಿ, ಅವರನ್ನು ಪರಿಚಯ ಮಾಡಿಕೊಟ್ಟರು. ಅವರ 'ಗುಡ್ಡದ ಭೂತ' ಧಾರಾವಾಹಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲು ಕರೆದರು. 'ಇಲ್ಲ, ನಾನೇ ಸಿನಿಮಾ ಮಾಡುತ್ತೇನೆ' ಎಂದೆ. 'ಸ್ಕ್ರಿಪ್ಟ್ ಸಿದ್ಧವಿದೆಯಾ?' ಎಂದರು. ಯು.ಆರ್. ಅನಂತಮೂರ್ತಿಯವರ 'ಘಟಶ್ರಾದ್ಧ' ಆಧರಿಸಿ ಸಿನಿಮಾ ಚಿತ್ರಕಥೆ ಬರೆದಿದ್ದೆ. ಅದನ್ನು ಓದಿ, ತಾವೇ ಸಿನಿಮಾ ಮಾಡಲು ಸುವರ್ಣರು ಮುಂದೆ ಬಂದರು. ಅಲ್ಲಿಂದ ಅವರ ಕೊನೆಯ ದಿನಗಳ ತನಕ ನಮ್ಮ ಒಡನಾಟವಿತ್ತು.

ಸಿನಿಮಾಗೆ ದುಂದು ವೆಚ್ಚವಿಲ್ಲದೆ ಅವರು ಪ್ಲ್ಯಾನಿಂಗ್ ಮಾಡುತ್ತಿದ್ದರು. ಕಥೆ ಏನು ಕೇಳುತ್ತಿತ್ತೋ ಅದನ್ನು ಒದಗಿಸುತ್ತಿದ್ದರು. ನನ್ನ ನಾಲ್ಕೈದು ಸಿನಿಮಾಗಳಲ್ಲಿ ಜೊತೆಗಿದ್ದರು. ಅವರ ಎಲ್ಲ ಸಿನಿಮಾಗಳಲ್ಲೂ ನಾನು ಜೊತೆಗಿದ್ದೆ. ಅವರು ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಸಿನಿಮಾ ಮಾಡುವಾಗ ಮಾತ್ರ ನಾನು ಜೊತೆಗೆ ಇರಲಿಲ್ಲ; ಬೇರೆ ಕಡೆ ಬ್ಯುಸಿಯಾಗಿದ್ದೆ.

ನಾವಿಬ್ಬರು ಕಸರತ್ತು ಮಾಡಿ, ಮಾಡಲು ಸಾಧ್ಯವಾಗದ ಸಿನಿಮಾಗಳು ಕೆಲವಷ್ಟಿವೆ. ನಾರಾಯಣ ಗುರುಗಳ ಬಗ್ಗೆ ಸಿನಿಮಾ ಮಾಡುವ ಕಸರತ್ತು ನಡೆದಿತ್ತು. ಆದರೆ, ಆಗಲಿಲ್ಲ. ಇಬ್ಬರೂ ಎಲ್ಲವನ್ನೂ ಹಂಚಿಕೊಳ್ಳುತ್ತಿದ್ದೆವು. ಅವರು ಒಂದು ರೀತಿ ನನ್ನ ಹಿರಿಯ ಅಣ್ಣ. ಬಾಂಬೆಯಲ್ಲಿನ ಅವರ ಆಫೀಸ್ ರೂಮು ನಾನು ಅಲ್ಲಿಗೆ ಹೋದಾಗಲೆಲ್ಲ ವಾಸಸ್ಥಾನವಾಗಿತ್ತು.

ಸುವರ್ಣರ ನಿಜವಾದ ಸಾಧನೆ ರಂಗಭೂಮಿ. ಮುಂಬೈ ರಂಗಭೂಮಿ ಜೀವಂತವಾಗಿಟ್ಟವರಲ್ಲಿ ಅವರೂ ಒಬ್ಬರು. ಹವ್ಯಾಸಿ ರಂಗಭೂಮಿಯೇ ಸಂಕಷ್ಟದಲ್ಲಿದ್ದಾಗ ಸುವರ್ಣರು ಮುಂಬೈನಲ್ಲಿ ವೃತ್ತಿಪರ ರಂಗಭೂಮಿಯನ್ನು ಕಟ್ಟಿ ಬೆಳೆಸಿದರು. ಮೊನ್ನೆ ಅವರನ್ನು ಹುಡುಕಿಕೊಂಡು ಹೋಗಿ, ಬಿ.ವಿ.ಕಾರಂತ ಪ್ರಶಸ್ತಿ ಕೊಟ್ಟಿದ್ದು ಬಹಳ ಖುಷಿಯಾಯಿತು.

ಅವರ ಕೊನೆ ಕೊನೆಯ 'ಉರುಳು', 'ಕೋರ್ಟ್ ಮಾರ್ಷಲ್' ಅತ್ಯಂತ ಯಶಸ್ವಿ ನಾಟಕಗಳಾಗಿದ್ದವು. ತುಳುವಿನಲ್ಲೊಂದು ಸಿನಿಮಾ ಮಾಡಬೇಕು ಎಂಬ ಅವರ ಕೊನೆಯಾಸೆ ಉಳಿದೇಹೋಯಿತು.

ಇತ್ತೀಚೆಗೆ ನನಗೆ ಸಿನಿಮಾ ಮಾಡಿ ಕೊಡಿ ಅಂತ ಸುವರ್ಣ ದುಡ್ಡು ತಂದು ಕೊಟ್ಟರು. ಆಗ ಅವರಿಗೆ 80 ವರ್ಷವಾಗಿತ್ತು. ಈಗ ನೀವ್ಯಾಕೆ ಸಿನಿಮಾ ಮಾಡುವಿರಿ ಎಂದು ವಾಪಸ್ ಕೊಟ್ಟೆ. ಸದಾನಂದ ಸುವರ್ಣರಿಗೆ ದುಡ್ಡು ಕೊಟ್ಟರೆ 'ಎಫ್‌ಡಿ' ಇದ್ದಂತೆ ಎಂಬ ಮಾತಿತ್ತು. 'ಘಟಶ್ರಾದ್ಧ'ಕ್ಕೆ ಬ್ಯಾಂಕ್‌ನಿಂದ ಸಾಲ ಪಡೆದಿದ್ದೆವು. ಸಬ್ಸಿಡಿ ಹಣದ ಚೆಕ್ ಅನ್ನು ನೇರವಾಗಿ ಬ್ಯಾಂಕ್‌ಗೆ ತಲುಪಿಸಿದ್ದರು.

ಸುವರ್ಣ ಅವಿವಾಹಿತರಾಗಿಯೇ ಇದ್ದರು. ಹೀಗಾಗಿ ಕೊನೆಯಲ್ಲಿ ಮುಂಬೈನಿಂದ ಮಂಗಳೂರಿಗೆ ಬಂದರು. ಆಗ ಸಂಪರ್ಕದಲ್ಲಿದ್ದ ಕೆಲವರಲ್ಲಿ ನಾನೂ ಒಬ್ಬ. ಕೊನೆಯ ಕಾಲದಲ್ಲಿ ಅವರನ್ನು 'ಓಲ್ಡ್ ಏಜ್ ಹೋಮ್'ಗೆ ಸೇರಿಸಿದ್ವಿ.


'ಗುಡ್ಡದ ಭೂತ'ದ ಸಮಯದಲ್ಲಿ ಅವರೇ ಒಂದು ಪಾಡ್ದನ ಹಾಡಿ ತೋರಿಸಿದ್ದರು. ಇದನ್ನೇ ಶೀರ್ಷಿಕೆ ಗೀತೆ ಮಾಡಿದರೆ ಹೇಗಿರುತ್ತೆ ಅಂತ ಕೇಳಿದ್ದರು. ಅವರೇ ಸಾಹಿತ್ಯ ಬರೆದರು. ಆ ಗೀತೆ ಸೂಪರ್ ಹಿಟ್ ಆಯ್ತು. ಅದನ್ನು 'ರಂಗಿತರಂಗ' ಚಿತ್ರತಂಡ ಮತ್ತೆ ಬಳಸಿತು. ಕೊನೆತನಕ ಸಿನಿಮಾ, ರಂಗಭೂಮಿಗಾಗಿ ಉಸಿರಾಡಿದ ವ್ಯಕ್ತಿತ್ವ ಅವರದ್ದು.

(ಲೇಖಕರು ಸಿನಿಮಾ ನಿರ್ದೇಶಕರು)

ನಿರೂಪಣೆ: ವಿನಾಯಕ ಕೆ.ಎಸ್

ಚಲನಚಿತ್ರ ನಿರ್ಮಾಪಕ ಸದಾನಂದ ಸುವರ್ಣ ನಿಧನ

ಮಂಗಳೂರು: 'ಘಟಶ್ರಾದ್ಧ' ಸೇರಿ ಹಲವು ಸಿನಿಮಾಗಳನ್ನು ನಿರ್ಮಿಸಿದ್ದ ಕನ್ನಡದ ಹೆಸರಾಂತ ನಿರ್ಮಾಪಕ ಸದಾನಂದ ಸುವರ್ಣ (93) ಮಂಗಳವಾರ ಇಲ್ಲಿ ನಿಧನರಾದರು.



ಸದಾನಂದ ಸುವರ್ಣ

ಇವರು ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯವರು. ಇವರು ನಿರ್ಮಿಸಿದ ಮೊದಲ ಸಿನಿಮಾ ಘಟಶ್ರಾದ್ಧ. ಗಿರೀಶ್ ಕಾಸರವಳ್ಳಿ ನಿರ್ದೇಶನದ ಮೊದಲ ಚಲನಚಿತ್ರವಿದು. ಇದಕ್ಕೆ ಸ್ವರ್ಣಕಮಲ ಪ್ರಶಸ್ತಿ ಬಂದಿತ್ತು.


'ಕುಬಿ ಮತ್ತು ಇಯಾಲ' ಸಿನಿಮಾ ನಿರ್ದೇಶಿಸಿದ್ದರು. 'ತಬರನ ಕಥೆ' ಚಿತ್ರಕ್ಕೆ ಕಾರ್ಯನಿರ್ವಾಹಕ ನಿರ್ಮಾಪಕರಾಗಿದ್ದರು.

ದೂರದರ್ಶನಕ್ಕೆ 'ಗುಡ್ಡದ ಭೂತ' ಧಾರಾವಾಹಿ ನಿರ್ಮಿಸಿ, ನಿರ್ದೇಶಿಸಿದ್ದರು. ಇದು ನಟ ಪ್ರಕಾಶ್ ರೈ ಅವರಿಗೆ ಜನಪ್ರಿಯತೆ ತಂದು ಕೊಟ್ಟಿತು. ದೂರದರ್ಶನಕ್ಕಾಗಿ ಸದಾನಂದ ಸುವರ್ಣ ನಿರ್ದೇಶಿಸಿದ್ದ, ಶಿವರಾಮ ಕಾರಂತ ಅವರ ಸಂದರ್ಶನವು 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಹೆಸರಿನಲ್ಲಿ ಹತ್ತು ಕಂತುಗಳಲ್ಲಿ ಪ್ರಸಾರವಾಗಿತ್ತು. ರಾಜ್ಯದಾದ್ಯಂತ ಪ್ರದರ್ಶನ ಕಂಡಿದ್ದ ಅವರ ನಿರ್ದೇಶನದ 'ಕೋರ್ಟ್ ಮಾರ್ಷಲ್", ಮಳೆನಿಲ್ಲುವವರೆಗೆ, ನಾಟಕಗಳು ರಂಗಾಸಕ್ತರ ಮೆಚ್ಚುಗೆಗೆ ಪಾತ್ರವಾಗಿತ್ತು.

ಮುಂಬೈನಲ್ಲಿ ರಾತ್ರಿ ಶಾಲೆಯಲ್ಲಿ ಕಲಿತು, ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದ ಸುವರ್ಣ ಕೆಲ ವರ್ಷಗಳ ಹಿಂದೆ ಮಂಗಳೂರಿಗೆ ಮರಳಿ ಕೊಟ್ಟಾರ ಚೌಕಿ ಬಳಿ ನೆಲೆಸಿದ್ದರು. ಕೆಲ ದಿನಗಳಿಂದ ವಾಮಂಜೂರು ಬಳಿಯ ಆಶ್ರಮವೊಂದರಲ್ಲಿದ್ದರು. ರಾಜ್ಯ ಸರ್ಕಾರವು ಬಿ.ವಿ.ಕಾರಂತ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿತ್ತು.

ಷೇರುಪೇಟೆ ವಹಿವಾಟು

51




ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,586
ಇಂದಿನ ಅಂತ್ಯ	24,613
▲	26
ದಿನದ ಗರಿಷ್ಠ	24,661

ವಿನಿಮಯ ದರ

$ ಡಾಲರ್	83.56
£ ಪೌಂಡ್	108.43
€ ಯುರೊ	91.12
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹573

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹970 (965)
ಸೂರ್ಯಕಾಂತಿ (ರಿಫೈನ್ಡ್)	₹970 (965)
ಪಾಮೋಲಿನ್	₹908 (904)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹204
ಆರ್‌ಎಸ್‌ಎಸ್-5	₹198
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹185

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹250-430
ದ್ವಿತಳಿ (ಬಿ.ವಿ)	₹222-596

ಬಜಾಜ್ ಆಟೊ ಲಾಭ ಏರಿಕೆ

ನವದೆಹಲಿ (ಪಿಟಿಐ): ಬಜಾಜ್ ಆಟೊ ಕಂಪನಿಯು, 2024-25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹1,924 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹1,644 ಕೋಟಿ ಲಾಭಗಳಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 18ರಷ್ಟು ಏರಿಕೆಯಾಗಿದೆ. ಈ ತ್ರೈಮಾಸಿಕದಲ್ಲಿ ₹11,932 ಕೋಟಿ ವರಮಾನ ಗಳಿಸಲಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹10,312 ಕೋಟಿ ವರಮಾನ ಗಳಿಸಲಾಗಿತ್ತು ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ದೇಶೀಯ ಮಟ್ಟದಲ್ಲಿ ವಾಹನಗಳ ಮಾರಾಟವು ಏರಿಕೆಯಾಗಿದೆ. ರಫ್ತು ಪ್ರಮಾಣದಲ್ಲೂ ಹೆಚ್ಚಳವಾಗಿರುವುದಿಂದ ಈ ಲಾಭ ಗಳಿಕೆ ಸಾಧ್ಯವಾಗಿದೆ ಎಂದು ಹೇಳಿದೆ.

ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ 10.27 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ಈ ಬಾರಿ 11.02 ಲಕ್ಷ ವಾಹನಗಳು ಮಾರಾಟವಾಗಿವೆ. ಒಟ್ಟಾರೆ ಮಾರಾಟದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ಮೊದಲ ತ್ರೈಮಾಸಿಕದಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ವಾಹನಗಳ ಮಾರಾಟದಲ್ಲಿ ಶೇ 8ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

16-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	915 (910)
ಪಾಮ್ ವಾರದ ಡೆಲಿವರಿ	910 (902)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹73,200 (72,550)

ಬೆಳ್ಳಿ ಕೆ.ಜಿ ₹92,200 (91,750)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇ.ವಿ, ಹೈಬ್ರಿಡ್ ವಾಹನ ಬಳಕೆಗೆ ಉತ್ತೇಜನ: ಎಚ್‌ಡಿಕೆ

ಫೇಮ್–3 ಜಾರಿಗೆ ಸಿದ್ಧತೆ

ನವದೆಹಲಿ (ಪಿಟಿಐ): 'ದೇಶದಲ್ಲಿ ವಿದ್ಯುತ್ ಚಾಲಿತ ಹಾಗೂ ಹೈಬ್ರಿಡ್ ವಾಹನಗಳ ತಯಾರಿಕೆ ಮತ್ತು ಬಳಕೆಗೆ ಉತ್ತೇಜನ ನೀಡುವ ಸಂಬಂಧ 3ನೇ ಹಂತದ 'ಫೇಮ್' ಯೋಜನೆಯ ಜಾರಿಗೆ ಸರ್ಕಾರವು ಸಿದ್ಧತೆ ನಡೆಸಿದೆ' ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

ವಿದ್ಯುತ್ ಚಾಲಿತ ಮತ್ತು ಹೈಬ್ರಿಡ್ ವಾಹನಗಳ ತಯಾರಿಕೆ ಮತ್ತು ಬಳಕೆಯನ್ನು ತ್ವರಿತಗೊಳಿಸುವ 'ಫೇಮ್-2' ಯೋಜನೆಯು ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಮುಕ್ತಾಯಗೊಂಡಿದೆ.

'ಇದೇ 23ರಂದು ಮಂಡನೆಯಾಗಲಿರುವ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯ ಮುಂದುವರಿಕೆ ಬಗ್ಗೆ ಸರ್ಕಾರ ಕ್ರಮಕೊಳ್ಳಲಿದೆಯೇ' ಎಂಬ ಪತ್ರಕರ್ತರ ಪ್ರಶ್ನೆಗೆ ಸಚಿವರು ಸ್ಪಷ್ಟ ಉತ್ತರ ನೀಡಲಿಲ್ಲ.

'ಫೇಮ್- 3 ಯೋಜನೆಯನ್ನು ಹೇಗೆ ಅನುಷ್ಠಾನಗೊಳಿಸಬೇಕು ಎಂಬ ಬಗ್ಗೆ ಹಲವು ಸಚಿವಾಲಯಗಳಿಂದ ಶಿಫಾರಸು ಸಲ್ಲಿಕೆಯಾಗಿವೆ. ಮುಂಬರುವ ದಿನಗಳಲ್ಲಿ ಯೋಜನೆ ಜಾರಿಯಾಗಲಿದೆ' ಎಂದು ಹೇಳಿದರು.



ಇ.ವಿ ಉದ್ಯಮವು ಆರ್ಥಿಕತೆ ಪ್ರಗತಿಗೆ ನೆರವಾಗಲಿದೆ. ಇಂಧನದ ಭದ್ರತೆ ನೀಡುವ ಜೊತೆಗೆ ಸುಸ್ಥಿರ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಲಿದೆ

ಎಚ್‌.ಡಿ. ಕುಮಾರಸ್ವಾಮಿ, ಸಚಿವ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ

'ಹೈಬ್ರಿಡ್ ವಾಹನಗಳ ಮೇಲಿನ ತೆರಿಗೆ ಕಡಿತದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರೊಟ್ಟಿಗೆ ಚರ್ಚಿಸಲಾಗುವುದು. ಅವರೇ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಈ ಕುರಿತು ಹಣಕಾಸು ಸಚಿವಾಲಯವು ರೂಪರೇಷೆಯನ್ನು ಸಿದ್ಧಪಡಿಸಲಿದೆ' ಎಂದು ವಿವರಿಸಿದರು.

ಸಚಿವಾಲಯವು ಹೈಬ್ರಿಡ್ ವಾಹನಗಳ ಮೇಲಿನ ತೆರಿಗೆ ಕಡಿತದ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡಲಿದೆಯೇ ಎಂಬ ಪ್ರಶ್ನೆಗೆ, 'ಮುಂದಿನ ವಾರ ಬಜೆಟ್ ಮಂಡನೆಯಾಗಲಿದೆ. ಅಲ್ಲಿಯವರೆಗೂ ಕಾದು ನೋಡಿ' ಎಂದು ಉತ್ತರಿಸಿದರು.

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಉದ್ಯಮದ ಬೆಳವಣಿಗೆಗೆ ಎದುರಾಗಿರುವ ಸವಾಲುಗಳನ್ನು ಎದುರಿಸಲು ಸಚಿವಾಲಯವು ಸಿದ್ಧವಿದೆ. ಲಭ್ಯವಿರುವ ಅವಕಾಶವನ್ನು ಬಳಸಿಕೊಂಡು ಈ ಉದ್ಯಮದ ಅಭಿವೃದ್ಧಿಗೆ ಒತ್ತು ನೀಡಲಿದೆ ಎಂದರು.

ಸಚಿವಾಲಯ ಹೇಳಿದ್ದೇನು?: ಇ.ವಿಗಳಿಗೆ ಫೇಮ್-2 ಅಡಿ ಮಾರ್ಚ್ 31ರ ವರೆಗೆ ಸಬ್ಸಿಡಿ ಪಡೆಯಬಹುದಾಗಿದೆ ಅಥವಾ ಸಬ್ಸಿಡಿ ಮೊತ್ತವು ಎಲ್ಲಿಯವರೆಗೆ ಲಭ್ಯವಿದೆಯೋ ಅಲ್ಲಿಯವರೆಗೆ ಸೌಲಭ್ಯ ದೊರೆಯಲಿದೆ. ಸದ್ಯ ಈ ಯೋಜನೆಗೆ ನಿಗದಿಪಡಿಸಿರುವ ಅನುದಾನವನ್ನು ₹10 ಸಾವಿರ ಕೋಟಿಯಿಂದ ₹11,500 ಕೋಟಿಗೆ ಹೆಚ್ಚಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವಾಲಯವು ಈ ವರ್ಷದ ಆರಂಭದಲ್ಲಿಯೇ ಹೇಳಿತ್ತು.

'ಸರ್ಕಾರದ ಜತೆ ಟೆಸ್ಲಾ ಚರ್ಚಿಸಿಲ್ಲ'

ಅಮೆರಿಕದ ಕಾರು ತಯಾರಿಕಾ ಕಂಪನಿ ಟೆಸ್ಲಾ ಭಾರತದಲ್ಲಿ ತನ್ನ ಘಟಕ ಸ್ಥಾಪನೆಗೆ ಮುಂದಾಗಿದೆ. ಈ ಕಂಪನಿಗೆ ಅನುಕೂಲ ಕಲ್ಪಿಸಲು ಕೇಂದ್ರವು ಹೊಸ ಇ.ವಿ ನೀತಿ ರೂಪಿಸಿದೆ ಎಂದು ಹೇಳಲಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಹೊಸ ಇ.ವಿ ನೀತಿ ಅನುಸಾರ ಭಾರತದಲ್ಲಿ ಹೂಡಿಕೆ ಸಂಬಂಧ ಟೆಸ್ಲಾ ಕಂಪನಿಯು ಕೇಂದ್ರ ಸರ್ಕಾರದ ಜೊತೆಗೆ ಚರ್ಚಿಸಿಲ್ಲ' ಎಂದು ಸ್ಪಷ್ಟಪಡಿಸಿದರು.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹16500
ಎಸಿ	₹9940
ಆರ್‌ಪಿ	₹18000
ಆರ್‌ಸಿ	₹10270

ಕೊಬ್ಬರಿ ಧಾರಣೆ


(ಕ್ವಿಂಟಲ್‌ಗೆ)

ಅರಸೀಕೆರೆ	₹8500-9510
ಕೆ.ಆರ್.ಪೇಟೆ	₹9455-9455

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-38500
ಹಳತು	38500-46500
ಕಾರ್ಕಳ	
ಹೊಸತು	25000-38500
ಹಳತು	30000-46500
ಪುತ್ತೂರು	
ಹೊಸತು	28000-38500
ಸಾಗರ	
ಬಿಳಿಗೋಟು	25199-25791
ಚಾಲಿ	28299-36699
ಕೋಕ	24299-24299
ರಾಶಿ	46899-48839
ಸಿಪ್ಪೆಗೋಟು	18199-18799
ಶಿವಮೊಗ್ಗ	
ಬೆಟ್ಟೆ	40172-54319
ಗೊರಬಲು	16000-34262
ರಾಶಿ	28108-50300
ಸರಕು	48699-87999
ಶಿರಸಿ	
ಬೆಟ್ಟೆ	30900-46489
ಬಿಳಿಗೋಟು	21899-30599
ಚಾಲಿ	32861-36500
ಕೆಂಪುಗೋಟು	21900-27800
ರಾಶಿ	44899-48110
ಸಿದ್ದಾಪುರ	
ಬಿಳಿಗೋಟು	25899-28680
ಚಾಲಿ	33219-35140
ಕೋಕ	25789-28680
ಕೆಂಪುಗೋಟು	26469-27689
ರಾಶಿ	41689-47969
ತಟ್ಟಿಬೆಟ್ಟೆ	30200-33900
ಯಲ್ಲಾಪುರ	
ಅಪಿ	56429-56965
ಬಿಳಿಗೋಟು	22899-31610
ಚಾಲಿ	31969-36301
ಕೋಕ	11069-24601
ಕೆಂಪುಗೋಟು	22899-32699
ರಾಶಿ	43899-52899
ತಟ್ಟಿಬೆಟ್ಟೆ	33999-42869

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜು ಎಂ.ಎಸ್., ಬೆಂಗಳೂರು.

- **ಪ್ರಶ್ನೆ: ನಾನು ಒಂದು ವರ್ಷದ ಹಿಂದೆ ಮನೆಯನ್ನು ಮಾರಾಟ ಮಾಡಿ ಬಂದ ಲಾಭದ ಮೇಲೆ ತೆರಿಗೆ ಉಳಿತಾಯಕ್ಕೆ ಸಂಬಂಧಿಸಿ 'ಕ್ಯಾಪಿಟಲ್ ಗೈನ್ಸ್' ಖಾತೆ ತೆರೆದು ತೆರಿಗೆ ವಿನಾಯಿತಿ ಪಡೆದಿದ್ದೆ. ಪ್ರಸ್ತುತ ನಾನು ಮೊದಲ ಹಂತದಲ್ಲಿ ನಿವೇಶನ ಖರೀದಿಸಿ ಮುಂದೆ ಮನೆಯನ್ನು ಕಟ್ಟಬೇಕೆಂದಿದ್ದೇನೆ. ಮನೆ ನಿರ್ಮಾಣಕ್ಕೆ ಸಂದಾಯವಾಗುವ ಹಣಕ್ಕಿಂತ ಅಧಿಕ ಮೊತ್ತ ಭೂಮಿಗೆ ಪಾವತಿಯಾಗುತ್ತಿದೆ. ಉಳಿದ ಹಣವನ್ನು ಮನೆ ಕಟ್ಟುವ ಕೆಲಸಕ್ಕೆ ಉಪಯೋಗಿಸಲಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಮನೆ ನಿರ್ಮಾಣವನ್ನು ತುಸು ಮುಂದೂಡಿ ಮೊದಲ ಹಂತದಲ್ಲಿ ಭೂಮಿ ಖರೀದಿಸಿ ಇಟ್ಟುಕೊಂಡು ಅವಕಾಶವಾದಾಗ ಮನೆ ನಿರ್ಮಿಸಲು ಇಚ್ಛಿಸಿದ್ದೇನೆ. ಇದರಿಂದ ಯಾವುದಾದರೂ ತೊಂದರೆ ಇದೆಯೇ? ಈ ಹಿಂದೆ ಪಡೆದ ತೆರಿಗೆ ವಿನಾಯಿತಿಗೆ ಯಾವುದಾದರೂ ತೊಡಕಾಗುತ್ತದೆಯೇ? ಈ ಬಗ್ಗೆ ನಾನು ಮುಂದೇನು ಮಾಡಬಹುದು?**

ಉತ್ತರ: ನೀವು ನೀಡಿರುವ ಮಾಹಿತಿಯಂತೆ ಹಿಂದಿನ ವರ್ಷದಲ್ಲಿ ನಿಮ್ಮ ಮನೆ ಮಾರಾಟ ಮಾಡಿ ಅದೇ ಸಂದರ್ಭದಲ್ಲಿ 'ಕ್ಯಾಪಿಟಲ್ ಗೈನ್ಸ್' ಅಕೌಂಟ್ ತೆರೆದು ತೆರಿಗೆ ವಿನಾಯಿತಿ ಪಡೆದಿದ್ದೀರಿ. ಈ ಖಾತೆಯಲ್ಲಿ ಹಣ ಹೂಡಿಕೆ ಮಾಡಿದ್ದ ಸನ್ನಿವೇಶಗಳಲ್ಲಿ ತೆರಿಗೆದಾರರಿಗೆ ಒಂದಿಷ್ಟು ಸಮಯ ತಮ್ಮ ಮುಂದಿನ ಯೋಜನೆಯನ್ನು ನಿರೂಪಿಸಿ ಖಾತೆಯಲ್ಲಿ ಇರುವ ಹಣವನ್ನು ತೆರಿಗೆ ಉಳಿತಾಯಕ್ಕಿರುವ ನಿಯಮದಂತೆ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಇದರಂತೆ ನಿಮ್ಮ ಮೂಲ ಆಸ್ತಿ ಮಾರಾಟವಾದ ಸಂದರ್ಭದಿಂದ ಎರಡು ವರ್ಷದೊಳಗೆ ಹೊಸದೊಂದು ಮನೆ ಖರೀದಿಸಿರಬೇಕು ಅಥವಾ ಮೂರು ವರ್ಷದೊಳಗೆ ಮನೆ ಕಟ್ಟಿಸಿರಬೇಕು. ಒಂದು ವೇಳೆ ಇದು ಯಾವುದೂ ಕಾರ್ಯಗತ ಮಾಡಿರದ ಸನ್ನಿವೇಶದಲ್ಲಿ ಮೂಲ ಮನೆಯ ಮಾರಾಟದ ಸಂದರ್ಭದಲ್ಲಿ ನೀಡಲಾಗಿದ್ದ ವಿನಾಯಿತಿಯನ್ನು ರದ್ದುಗೊಳಿಸಿ ಹಿಂದೆ ನೀಡಲಾದ ವಿನಾಯಿತಿಯನ್ನು ಮೂರು ವರ್ಷದ ಸಮಯ ಪರಿಮಿತಿ ಕಳೆದೊಡನೆ ದೀರ್ಘಾವಧಿ ಬಂಡವಾಳ ಲಾಭವೆಂದು ಪರಿಗಣಿಸಿ ತೆರಿಗೆಗೆ ಒಳಪಡಿಸಲಾಗುತ್ತದೆ.

ಹೀಗಾಗಿ, ನಿಮ್ಮ ಮೊದಲ ಹಂತದ ಯೋಜನೆ ಕೇವಲ ಭೂಮಿ ಖರೀದಿಸುವುದು ಹಾಗೂ ಅವಕಾಶ ಬಂದಾಗ ಮುಂದೆ ಮನೆ ಕಟ್ಟುವ ದೀರ್ಘಾವಧಿ ಯೋಜನೆ ಇದ್ದರೂ, ಅದು ತೆರಿಗೆ ನಿಯಮಗಳ ಅನ್ವಯ ಸಮಯ ಪರಿಮಿತಿ ಮೀರಿದಾಗ ಈಗಾಗಲೇ ಪಡೆದ ವಿನಾಯಿತಿಯು ತಾತ್ಕಾಲಿಕವಾಗುತ್ತದೆ. ತೆರಿಗೆ ನಿಯಮದ ಅನ್ವಯ ಕೇವಲ ಭೂಮಿ ಖರೀದಿಗಾಗಿ ಅಥವಾ ಭೂಮಿಯಲ್ಲಿ ಹೂಡಿಕೆಗಾಗಿ ಯಾವುದೇ ವಿನಾಯಿತಿ ಇರುವುದಿಲ್ಲ.

ನೀವು ಮನೆ ಮಾರಾಟ ಮಾಡಿ ಮನೆ ಖರೀದಿಸುವುದರಿಂದ ಸೆಕ್ಷನ್ 54ರ ಅಡಿ ವಿನಾಯಿತಿ ಪಡೆದಿರುತ್ತೀರಿ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ತೆರಿಗೆದಾರರಲ್ಲಿ ಹೊಸ ಮನೆ ನಿರ್ಮಾಣ- ಖರೀದಿಗೆ ಉತ್ತೇಜನ ನೀಡುವುದಾಗಿದೆಯೇ ಹೊರತು, ಕೇವಲ ಮರು ಹೂಡಿಕೆಯ ದೃಷ್ಟಿಯಿಂದ ಕೈಗೊಳ್ಳುವ ಭೂ ವ್ಯವಹಾರಗಳಿಗೆ ತೆರಿಗೆ ವಿನಾಯಿತಿ ನೀಡುವುದಲ್ಲ.

ಹೊಸ ಮನೆ ಖರೀದಿಗೆ ಉತ್ತೇಜನ ನೀಡಿದಾಗ ಪರೋಕ್ಷವಾಗಿ ದೇಶದ ಆರ್ಥಿಕತೆಗೂ ಸಹಕಾರಿಯಾಗುತ್ತದೆ ಎಂಬುದು ಇದರ ಹಿಂದಿನ ಅಲಿಖಿತ ಆಶಯ. ಒಂದು ವೇಳೆ ನಿಮ್ಮ ಖಾತೆಯಲ್ಲಿ ಮಾಡಲಾದ ಹೂಡಿಕೆಯನ್ನು ಯಾವುದೇ ನಿರ್ಧಾರ ಕೈಗೊಳ್ಳದೆ ಹಾಗೆಯೇ ಇಟ್ಟರೂ ಉದ್ದೇಶಿತ ಗುರಿ ಈಡೇರದ ಕಾರಣ ತೆರಿಗೆ ಕಟ್ಟಿಯೇ ಹಣ ಹಿಂಪಡೆಯಬೇಕಾಗುತ್ತದೆ. ಅದಕ್ಕೂ ನೀವು ತೆರಿಗೆ ಪಾವತಿಸಿರುವ ದಾಖಲೆಗಳನ್ನು ನೀಡಬೇಕಾಗುತ್ತದೆ. ಹೀಗಾಗಿ, ನಿಮ್ಮ ಯೋಜನೆಯನ್ನು ಈ ವಿಚಾರಗಳ ಸುತ್ತ ಮರು ಪರಿಶೀಲನೆ ಮಾಡಬೇಕು ಹಾಗೂ ಸಮಯದ ಪರಿಧಿಯೊಳಗೆ ಮನೆ ನಿರ್ಮಾಣ ಪೂರೈಸಿ.

ಶಂಕರ್, ಮೈಸೂರು.

- **ಪ್ರಶ್ನೆ: ನಾನು ಬಹುರಾಷ್ಟ್ರೀಯ ಐ.ಟಿ ಕಂಪನಿಯಲ್ಲಿ ಒಂಬತ್ತು ವರ್ಷ ಏಳು ತಿಂಗಳ ಕಾಲ ಕೆಲಸ ನಿರ್ವಹಿಸಿ ನಂತರದಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿದ್ದೇನೆ. ಮೊದಲ ಕೆಲಸದ ಸಮಯದಲ್ಲಿ ಒಂಬತ್ತು ವರ್ಷ ಆರು ತಿಂಗಳಿಗಿಂತ ಹೆಚ್ಚು ಕಾರ್ಯ ನಿರ್ವಹಿಸಿರುವುದರಿಂದ ಇಪಿಎಸ್ ಅರ್ಹನಾಗಿದ್ದೇನೆ. ಈಗ ಸರ್ಕಾರಿ ನೌಕರಿಗೆ ಸೇರಿರುವುದರಿಂದ ಅಲ್ಲಿಯೂ ಎನ್‌ಪಿಎಸ್ ದೊರೆಯುತ್ತದೆ. ಇದರಿಂದ ನನಗೆ ಇಪಿಎಸ್ ಪಿಂಚಣಿ ದೊರೆಯುವುದೇ? ಒಂದು ವೇಳೆ ದೊರೆಯದಿದ್ದರೆ ಇಪಿಎಸ್ ಮೊತ್ತ ಹಿಂಪಡೆಯಬಹುದೇ?**

ಉತ್ತರ: ನೀವು ಈಗಾಗಲೇ ಸರ್ಕಾರಿ ಉದ್ಯೋಗಕ್ಕೆ ಸೇರಿದ್ದು ಅಲ್ಲಿ ನಿವೃತ್ತಿ ಸಂಬಂಧಿತ ಯೋಜನೆ ಹಾಗೂ ಅದಕ್ಕೆ ಪಾವತಿಗಳು ಪ್ರತ್ಯೇಕವಾದ ಎನ್‌ಪಿಎಸ್ ಅಡಿ ನಡೆಯುತ್ತಿದೆ ಎಂದು ತಿಳಿಸಿದ್ದೀರಿ. ನಿಮ್ಮ ಹಿಂದಿನ ಸಂಸ್ಥೆಯ ಸೇವೆಯ ಆಧಾರದ ಮೇಲೆ ನೀವು ಈಗಾಗಲೇ ಪಿಂಚಣಿಗೆ ಅರ್ಹರಾಗಲು ಅಗತ್ಯವಿರುವ ಕನಿಷ್ಠ ಸೇವಾವಧಿಯಾದ ಹತ್ತು ವರ್ಷ ಪೂರೈಸಿರುವುದರಿಂದ ನೀವು ಪಿಂಚಣಿಗೆ ಅರ್ಹರು.

ನೌಕರರ ಪಿಂಚಣಿ ಯೋಜನೆಯಡಿ ಹತ್ತು ವರ್ಷ ಸೇವಾವಧಿ ಪೂರೈಸಿದ ನಂತರ ಅವಧಿಗೂ ಮುನ್ನ ಪಿಂಚಣಿ ಪಡೆಯಲು ಅವಕಾಶವಿಲ್ಲ. ಆದರೆ, 50 ವರ್ಷ ಪೂರ್ತಿಯಾದ ನಂತರ 58 ವರ್ಷಕ್ಕೂ ಮೊದಲು, ಅವಧಿಗೂ ಮುನ್ನ ಪಿಂಚಣಿ ಪಡೆಯಲು ಅವಕಾಶವಿದೆ.

58 ವಯಸ್ಸು ಪೂರ್ತಿಯಾದ ನಂತರ ಖಾತೆದಾರರು ಸಹಜವಾಗಿ ಪೂರ್ಣ ಪ್ರಮಾಣದ ಪಿಂಚಣಿ ಪಡೆಯಲು ಅರ್ಹರು. ಸಂದರ್ಭದಲ್ಲಿ ಅವಧಿಗೂ ಮುನ್ನ, ಎಷ್ಟು ವರ್ಷ ಪೂರ್ವಭಾವಿಯಾಗಿ ಪಿಂಚಣಿ ಪಡೆಯುತ್ತೀರೋ ಅದಕ್ಕೆ ಅನುಗುಣವಾಗಿ ಪಿಂಚಣಿಯ ಪ್ರಮಾಣವೂ ಕಡಿಮೆಯಾಗುತ್ತದೆ.

ಪಿಂಚಣಿ ಖಾತೆದಾರರು ಪಿಂಚಣಿಗಾಗಿ ತಮ್ಮ ಕನಿಷ್ಠ ಸೇವಾವಧಿ ಪೂರೈಸದಿದ್ದ ಸಂದರ್ಭದಲ್ಲಿ ಮಾತ್ರ ಈಗಾಗಲೇ ಪಾವತಿಸಿರುವ ಮೊತ್ತ ಹಿಂಪಡೆಯಲು ಸಾಧ್ಯವಿದೆ. ನಿಮ್ಮ ವಿಚಾರದಲ್ಲಿ ಇದು 9 ವರ್ಷ 6 ತಿಂಗಳಿಗಿಂತ ಹೆಚ್ಚಿರುವ ಕಾರಣ ಹತ್ತು ವರ್ಷ ಸೇವಾವಧಿಗೆ ಸಮ. ಹೀಗಾಗಿ, ಮುಂದಿನ ಕೆಲವು ವರ್ಷ ನೀವು ಕಾಯಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

'ಬೇಳೆಕಾಳು ಚಿಲ್ಲರೆ ದರ ಇಳಿಸಿ'



ನವದೆಹಲಿ (ಪಿಟಿಐ): ಕಳೆದ ಒಂದು ತಿಂಗಳಿನಿಂದಲೂ ದೇಶದ ಪ್ರಮುಖ ಸಗಟು ಮಾರುಕಟ್ಟೆಗಳಲ್ಲಿ ತೊಗರಿ, ಉದ್ದು ಮತ್ತು ಕಡಲೆ ಬೇಳೆ ಬೆಲೆಯು ಶೇ 4ರಷ್ಟು ಇಳಿಕೆಯಾಗಿದೆ. ಹಾಗಾಗಿ, ಚಿಲ್ಲರೆ ಮಾರಾಟಗಾರರು ಈ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಮಂಗಳವಾರ ಈ ಕುರಿತು ಭಾರತೀಯ ಸಣ್ಣ ವ್ಯಾಪಾರಿಗಳ ಒಕ್ಕೂಟದೊಟ್ಟಿಗೆ (ಆರ್‌ಎಐ) ಸಭೆ ನಡೆಯಿತು. ಒಕ್ಕೂಟದ ವ್ಯಾಪ್ತಿಯಲ್ಲಿ 2,300ಕ್ಕೂ ಹೆಚ್ಚು ಪ್ರತಿನಿಧಿಗಳಿದ್ದಾರೆ. ದೇಶದಲ್ಲಿ 6 ಲಕ್ಷಕ್ಕೂ ಹೆಚ್ಚು ಚಿಲ್ಲರೆ ಮಳಿಗೆಗಳನ್ನು ಒಕ್ಕೂಟವು ಹೊಂದಿದೆ.

ಒಕ್ಕೂಟದ ಪ್ರತಿನಿಧಿಗಳು, ರಿಲಯನ್ಸ್ ರಿಟೇಲ್, ಡಿ-ಮಾರ್ಟ್, ಟಾಟಾ ಸ್ಟೋರ್ಸ್, ಸ್ಪೆನ್ಸರ್ಸ್ ರಿಟೇಲ್, ಆರ್‌ಎಸ್‌ಪಿಜಿ, ವಿ-ಮಾರ್ಟ್ ಸೇರಿ ಹಲವು ಕಂಪನಿಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸಗಟು ದರ ಇಳಿಕೆಗೆ ತಕ್ಕಂತೆ ಚಿಲ್ಲರೆ ಮಾರಾಟಗಾರರು ಈ ಪದಾರ್ಥಗಳಿಗೆ ಬೆಲೆ ನಿಗದಿಪಡಿಸಬೇಕು. ಬೆಲೆ ಏರಿಕೆಯಿಂದ ತತ್ತರಿಸಿದ್ದ ಗ್ರಾಹಕರಿಗೆ ಇದರ ಪ್ರಯೋಜನ ನೀಡಬೇಕು. ಮಾರುಕಟ್ಟೆಯಲ್ಲಿ ಬೇಳೆಕಾಳುಗಳ ದರ ಏರಿಸಿ ಲಾಭ ಪಡೆಯುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲಾಗುವುದು ಎಂದು ಕೇಂದ್ರ ಎಚ್ಚರಿಕೆ ನೀಡಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರು, ಬೇಳೆಕಾಳುಗಳ ದಾಸ್ತಾನು ಬಗ್ಗೆ ಪರಿಶೀಲನೆ ನಡೆಸಿದರು.

ಬೇಳೆಕಾಳುಗಳು ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಸಿಗುವಂತೆ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ. ಈ ಪ್ರಯತ್ನಕ್ಕೆ ರಿಟೇಲ್ ಕೈಗಾರಿಕಾ ವಲಯವು ಸಹಕಾರ ನೀಡಬೇಕಿದೆ ಎಂದು ಸೂಚಿಸಿದರು.

ಬೈಜುಸ್ ವಿರುದ್ಧ ದಿವಾಳಿ ಪ್ರಕ್ರಿಯೆಗೆ ಬಿಸಿಸಿಐ ಅರ್ಜಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ₹158 ಕೋಟಿ ಬಾಕಿ ಉಳಿಸಿಕೊಂಡಿರುವ ಬೈಜುಸ್ ಕಂಪನಿಯ ವಿರುದ್ಧ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆ ಆರಂಭಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮುಂದಾಗಿದೆ. ಮಂಗಳವಾರ ಈ ಕುರಿತು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಶಾಖೆಗೆ ಅರ್ಜಿ ಸಲ್ಲಿಸಿದೆ.

ಎನ್‌ಸಿಎಲ್‌ಟಿಯು ಈ ಅರ್ಜಿಯನ್ನು ಸ್ವೀಕರಿಸಿದ್ದು, ಆಡಳಿತ ಮಂಡಳಿಯ ನಿರ್ದೇಶಕರನ್ನು ಅಮಾನತುಗೊಳಿಸಿದೆ. ಜೊತೆಗೆ, ಕಂಪನಿಯ ಆಸ್ತಿಯನ್ನು ವಶಕ್ಕೆ ಪಡೆದಿದ್ದು, ಮಧ್ಯಂತರ ನಿರ್ಣಯ ಅಧಿಕಾರಿಯಾಗಿ ಪಂಕಜ್ ಶ್ರೀವಾಸ್ತವ ಅವರನ್ನು ನೇಮಿಸಿದೆ.

ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ಬೈಜುಸ್ ರವೀಂದ್ರನ್ ಅವರು, ಇನ್ನು ಮುಂದೆ ಪಂಕಜ್ ಶ್ರೀವಾಸ್ತವ ಅವರ ಬಳಿಕ ವರದಿ ಮಾಡಿಕೊಳ್ಳಬೇಕಿದೆ.

'ಬಿಸಿಸಿಐ ಜೊತೆಗಿನ ಈ ಪ್ರಕರಣವು ಸೌಹಾರ್ದಯುತವಾಗಿ ಇತ್ಯರ್ಥವಾಗುವ ಭರವಸೆ ಹೊಂದಿದ್ದೇವೆ. ನ್ಯಾಯಮಂಡಳಿಯಿಂದ ನೋಟಿಸ್ ಸ್ವೀಕರಿಸಿದ ಬಳಿಕ ಕಾನೂನು ಸಲಹೆಗಾರರು ಕಂಪನಿಯ ಹಿತಾಸಕ್ತಿ ಕಾಪಾಡುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದ್ದಾರೆ' ಎಂದು ಬೈಜುಸ್ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.



ಬಜೆಟ್ ತಯಾರಿ

2024-25ನೇ ಸಾಲಿನ ಕೇಂದ್ರ ಬಜೆಟ್‌ನ ಅಂತಿಮ ಪ್ರಕ್ರಿಯೆಗಳಿಗೆ ಚಾಲನೆ ನೀಡುವ ಮುನ್ನ ಮಂಗಳವಾರ ನವದೆಹಲಿಯ ನಾರ್ಥ್ ಬ್ಲಾಕ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಲ್ವಾ ತಯಾರಿಕೆಗೆ ಚಾಲನೆ ನೀಡಿದರು. ಬಜೆಟ್‌ಗೂ ತಯಾರಿಕೆಗೂ ಮೊದಲು ಹಲ್ವಾ ತಯಾರಿಸುವುದು ವಾಡಿಕೆಯಾಗಿದೆ -ಪಿಟಿಐ ಚಿತ್ರ

ಸಿಪ್ಲಾದಿಂದ ₹773 ಕೋಟಿ ತೆರಿಗೆ ಬಾಕಿ: ನೋಟಿಸ್ ಜಾರಿ

ನವದೆಹಲಿ (ಪಿಟಿಐ): 2015-16ರಿಂದ 2022-23ನೇ ಮೌಲ್ಯಮಾಪನ ವರ್ಷಗಳಿಗೆ ಸಂಬಂಧಿಸಿದಂತೆ ಒಟ್ಟು ₹773 ಕೋಟಿ ತೆರಿಗೆ ಪಾವತಿಸುವಂತೆ ಔಷಧಗಳ ತಯಾರಿಕಾ ಕಂಪನಿ ಸಿಪ್ಲಾಗೆ, ಆದಾಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

'ಈ ವರ್ಷಗಳಿಗೆ ಸಂಬಂಧಿಸಿ ಕಂಪನಿಯು ಕೆಲವು ವೆಚ್ಚಗಳ ಬಗ್ಗೆ ದಾಖಲೆ ಸಲ್ಲಿಸಿತ್ತು. ಇದಕ್ಕೆ ತೆರಿಗೆ ಇಲಾಖೆಯು ಅನುಮತಿ ನೀಡಿಲ್ಲ. ಮೌಲ್ಯಮಾಪನ ಮತ್ತು ಮರುಮೌಲ್ಯಮಾಪನ ನಡೆಸಿದ ಬಳಿಕ ತೆರಿಗೆ ಪಾವತಿಸುವಂತೆ ಆದೇಶ ನೀಡಿದೆ. ಇದು ಮರುಪಾವತಿ ಮೊತ್ತವನ್ನು ಒಳಗೊಂಡಿಲ್ಲ' ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ. ಇಲಾಖೆಯ ತೆರಿಗೆ ಬೇಡಿಕೆಯು ಕಾನೂನಿನಡಿ ಸಮರ್ಥನೀಯವಾಗಿಲ್ಲ ಎಂಬುದು ನಮ್ಮ ನಂಬಿಕೆಯಾಗಿದೆ. ಈ ನೋಟಿಸ್ ಕಂಪನಿಯ ಹಣಕಾಸು ವ್ಯವಸ್ಥೆ ಅಥವಾ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಕುರಿತು ಕಾನೂನು ಚೌಕಟ್ಟಿನಡಿ ಪ್ರಶ್ನಿಸಲಾಗುವುದು ಎಂದು ತಿಳಿಸಿದೆ.

ಸಮಾವೇಶದಲ್ಲಿ ಟ್ರಂಪ್ ಭಾಗಿ

ಮಿಲ್ವಾಕೀ (ಅಮೆರಿಕ) (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಇಲ್ಲಿ ಆರಂಭವಾದ ರಿಪಬ್ಲಿಕನ್ ರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಂಡರು. ತಮ್ಮ ಹತ್ಯೆ ಯತ್ನದಿಂದ ಪಾರಾದ ನಂತರ ಇದೇ ಮೊದಲ ಬಾರಿಗೆ ಟ್ರಂಪ್ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ.

ಗಾಯವಾಗಿರುವ ಬಲ ಕಿವಿಗೆ ಭಾಗಶಃ ಬ್ಯಾಂಡೇಜ್ ಹಾಕಿಕೊಂಡಿರುವ ಟ್ರಂಪ್, ಸಮಾವೇಶ ನಡೆಯುತ್ತಿರುವ ಫಿಸರ್ವ್ ಫೋರಂ ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ, ಪಕ್ಷದ ಕಾರ್ಯಕರ್ತರು ಭಾರಿ ಕರತಾಡನದ ಮೂಲಕ ಅವರನ್ನು ಸ್ವಾಗತಿಸಿದರು.

ನಾಮನಿರ್ದೇಶನ: ಅಮೆರಿಕದ ಎಲ್ಲ ರಾಜ್ಯಗಳಿಂದ ಬಂದಿದ್ದ ಪಕ್ಷದ ಪ್ರತಿನಿಧಿಗಳು, ನವೆಂಬರ್ 5ರಂದು ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಡೊನಾಲ್ಡ್ ಟ್ರಂಪ್ ಅವರನ್ನು ಪಕ್ಷದ ಅಭ್ಯರ್ಥಿಯಾಗಿ ನಾಮನಿರ್ದೇಶನ ಮಾಡಿದರು.



ಜೆ.ಡಿ.ವ್ಯಾನ್ಸ್

ಜೆ.ಡಿ.ವ್ಯಾನ್ಸ್ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ

ಮಿಲ್ವಾಕೀ(ಪಿಟಿಐ): ಅಮೆರಿಕ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿಯನ್ನಾಗಿ ರಿಪಬ್ಲಿಕನ್ ಪಕ್ಷದ ಒಹಿಯೊ ಸೆನೆಟರ್ ಜೆ.ಡಿ.ವ್ಯಾನ್ಸ್ ಅವರನ್ನು ಆಯ್ಕೆ ಮಾಡಲಾಗಿದ್ದು, ಇಲ್ಲಿ ಆರಂಭವಾಗಿರುವ ಪಕ್ಷದ ಸಮಾವೇಶದಲ್ಲಿ ಡೊನಾಲ್ಡ್ ಟ್ರಂಪ್ ಈ ಕುರಿತ ಘೋಷಣೆ ಮಾಡಿದ್ದಾರೆ.

39 ವರ್ಷದ ವ್ಯಾನ್ಸ್ ಅವರು ಭಾರತೀಯ ಅಮೆರಿಕನ್ ಉಷಾ ಚಿಲುಕೂರಿ ಅವರನ್ನು ಮದುವೆಯಾಗಿದ್ದಾರೆ. ಉಷಾ ಅವರು ಮೂಲತಃ ಆಂಧ್ರಪ್ರದೇಶದವರು.

ಯಾಲೆ ಲಾ ಸ್ಕೂಲ್‌ನಲ್ಲಿ ಅಧ್ಯಯನ ಮಾಡುತ್ತಿದ್ದಾಗ ಪರಿಚಿತರಾದ ಉಷಾ ಮತ್ತು ವ್ಯಾನ್ಸ್, 2014ರಲ್ಲಿ ಮದುವೆಯಾದರು. ದಂಪತಿಗೆ ಪುತ್ರರಾದ ಎವಾನ್, ವಿವೇಕ್ ಹಾಗೂ ಪುತ್ರಿ ಮಿರಾಬೆಲ್ ಇದ್ದಾರೆ. 'ವ್ಯಾನ್ಸ್ ಅವರು ಅಮೆರಿಕದ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಒಹಿಯೊ ಸ್ಟೇಟ್ ವಿಶ್ವ ವಿದ್ಯಾಲಯದಲ್ಲಿ ಪದವಿ ಪಡೆದಿರುವ ವ್ಯಾನ್ಸ್, ಯಾಲೆ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದಿದ್ದಾರೆ.

ಢಾಕಾದಲ್ಲಿ ಹಿಂಸಾಚಾರ ಐವರು ಸಾವು

ಢಾಕಾ (ಎಎಫ್‌ಪಿ): ಅರ್ಹತೆ ಆಧರಿಸಿಯೇ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿ ರಾಜಧಾನಿ ಢಾಕಾದಲ್ಲಿ ಮಂಗಳವಾರ ನಡೆದ ಬೃಹತ್ ರ‍್ಯಾಲಿ ವೇಳೆ ನಡೆದ ಹಿಂಸಾಚಾರದಲ್ಲಿ ಐವರು ಪ್ರತಿಭಟನಕಾರರು ಮೃತಪಟ್ಟಿದ್ದು, 400ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಪ್ರತಿಭಟನೆ ಕೈ ಬಿಟ್ಟು ತರಗತಿಗಳಿಗೆ ಹಾಜರಾಗುವಂತೆ ಬಾಂಗ್ಲಾದೇಶ ಪ್ರಧಾನಿ ಹಾಗೂ ಸುಪ್ರೀಂಕೋರ್ಟ್ ಸೂಚಿಸಿತ್ತು. ಇದರ ಹೊರತಾಗಿಯೂ, ಢಾಕಾದ ಎರಡು ವಿಶ್ವವಿದ್ಯಾಲಯಗಳಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ವೇಳೆ ಆಡಳಿತ ಪಕ್ಷದ ವಿದ್ಯಾರ್ಥಿ ಕಾರ್ಯಕರ್ತರು ಬಡಿಗೆ, ಕಲ್ಲು, ಭರ್ಜಿ, ಪೆಟ್ರೋಲ್ ತುಂಬಿದ ಬಾಟಲ್ ಎಸೆದು ದಾಳಿ ನಡೆಸಿದರು ಎಂದು ಪ್ರತಿಭಟನಕಾರರು ತಿಳಿಸಿದರು. ಈ ವೇಳೆ ಹಿಂಸಾಚಾರವು ತೀವ್ರ ಸ್ವರೂಪಕ್ಕೆ ತಿರುಗಿತು. ಚಿತ್ತಗಾಂಗ್‌ನಲ್ಲಿ ಮೂವರು ಮೃತಪಟ್ಟರು.

ತ್ಯಾಜ್ಯ ವಿಲೇವಾರಿ: ₹94 ಸಾವಿರ ಕೋಟಿ ಗುತ್ತಿಗೆ?

ಹೊಸ ಪ್ಯಾಕೇಜ್‌ಗೆ ಎಷ್ಟು ವೆಚ್ಚ?

ಪ್ಯಾಕೇಜ್	ಪ್ರದೇಶ	ಅಂದಾಜು ವೆಚ್ಚ
ಪ್ಯಾಕೇಜ್ -1	ದಾಸರಹಳ್ಳಿ, ಯಲಹಂಕ ವಲಯ	₹704 ಕೋಟಿ
ಪ್ಯಾಕೇಜ್-2	ಪಶ್ಚಿಮ, ರಾಜರಾಜೇಶ್ವರಿನಗರ ವಲಯ	₹847 ಕೋಟಿ
ಪ್ಯಾಕೇಜ್-3	ಪೂರ್ವ, ಮಹದೇವಪುರ ವಲಯ	₹768 ಕೋಟಿ
ಪ್ಯಾಕೇಜ್-4	ದಕ್ಷಿಣ, ಬೊಮ್ಮನಹಳ್ಳಿ ವಲಯ	₹844 ಕೋಟಿ

ಒಂದನೇ ಪುಟದಿಂದ...

ಎರಡನೇ ಹಂತದ ಕೇಂದ್ರಗಳು ಹಾಗೂ ಸಂಸ್ಕರಣೆ ಕೇಂದ್ರಕ್ಕೆ ಅಗತ್ಯ ಭೂಮಿ, ಅಲ್ಲಿ ಮೂಲಸೌಕರ್ಯ ಕಲ್ಪಿಸುವ ಜವಾಬ್ದಾರಿ ಬಿಬಿಎಂಪಿಯದ್ದಾಗಿರುತ್ತದೆ.

ಹೊಸ ವ್ಯವಸ್ಥೆಯಲ್ಲಿ ಗುತ್ತಿಗೆ ಜಾರಿಯಾದ ಮೇಲೆ, ಬಿಬಿಎಂಪಿ, ಗುತ್ತಿಗೆದಾರರು, ಬ್ಯಾಂಕರ್‌ಗಳ ನಡುವೆ ಒಪ್ಪಂದವಾಗಿ 'ಎಸ್ಕ್ರೋ ಖಾತೆ'ಯನ್ನು ತೆರೆಯಬೇಕು. ಬಿಬಿಎಂಪಿ ಮೂರು ತಿಂಗಳ ಬಿಲ್ ಮೊತ್ತವನ್ನು ಮುಂಗಡವಾಗಿ ಈ ಖಾತೆಯಲ್ಲಿ ಸದಾಕಾಲ ಇರಿಸಿರಬೇಕು. 30 ವರ್ಷದ ಗುತ್ತಿಗೆಯಲ್ಲಿ ಪ್ರತಿ ವರ್ಷ ಶೇ 10ರಷ್ಟು ಮೊತ್ತವನ್ನು ಹೆಚ್ಚಿಸಬೇಕು. 30 ವರ್ಷದ ನಂತರ ಮತ್ತೆ 30 ವರ್ಷಕ್ಕೆ ಗುತ್ತಿಗೆಯನ್ನು ನವೀಕರಿಸಬಹುದು. ಹೊಸ ವ್ಯವಸ್ಥೆ ಜಾರಿಯಾದರೆ, ಪ್ರತಿ ಮನೆಯಿಂದ ತ್ಯಾಜ್ಯ ಸಂಗ್ರಹ ಶುಲ್ಕವನ್ನು ಗುತ್ತಿಗೆದಾರರು ಸಂಗ್ರಹಿಸಬೇಕು ಎಂಬ ನಿಯಮಗಳನ್ನೂ ಡಿಪಿಆರ್‌ನಲ್ಲಿ ನಮೂದಿಸಲಾಗಿದೆ.

₹450 ಕೋಟಿ ವೆಚ್ಚ: ಪ್ರಸ್ತುತ ಬಿಬಿಎಂಪಿಯಲ್ಲಿ ಎರಡನೇ ಹಂತದ ವರ್ಗಾವಣೆ ಕೇಂದ್ರ, ಪೌರ ಕಾರ್ಮಿಕರ ವೇತನ ಹೊರತಾಗಿ ₹450 ಕೋಟಿಯನ್ನು ತ್ಯಾಜ್ಯ ವಿಲೇವಾರಿಗೆ ವೆಚ್ಚ ಮಾಡಲಾಗುತ್ತಿದೆ.

89 ಪ್ಯಾಕೇಜ್: 198 ವಾರ್ಡ್‌ಗಳನ್ನು 89 ಪ್ಯಾಕೇಜ್‌ಗಳಾಗಿ ವಿಂಗಡಿಸಿ, ಸುಮಾರು 3,500 ಟನ್ ಘನತ್ಯಾಜ್ಯ ನಿರ್ವಹಣೆಗೆ ₹450 ಕೋಟಿ ವೆಚ್ಚದ ಟೆಂಡರ್ ಅನ್ನು ಬಿಬಿಎಂಪಿ 2022ರಲ್ಲಿ ಆಹ್ವಾನಿಸಿದೆ. ಹೈಕೋರ್ಟ್‌ಗೆ ಪ್ರತಿ ಹಂತದಲ್ಲೂ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಟೆಂಡರ್ ಪ್ರಕ್ರಿಯೆಯ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆದಿದೆ. ಪ್ಯಾಕೇಜ್‌ಗಳಿಗೆ ಹೊಸ ಗುತ್ತಿಗೆದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಬಾಕಿ ಉಳಿದಿದೆ. ಈ ಮಧ್ಯದಲ್ಲಿ ಹೊಸ ವ್ಯವಸ್ಥೆ ಜಾರಿಗೆ ತರಲು ಬಿಎಸ್‌ಡಬ್ಲ್ಯುಎಂಎಲ್ ಮುಂದಾಗಿದೆ.

'₹15 ಸಾವಿರ ಕೋಟಿ ಕಮಿಷನ್'

'30 ವರ್ಷಗಳವರೆಗೆ ಯಾರು ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ, ಒಂದೇ ಬಾರಿಗೆ ಸುಮಾರು ₹15 ಸಾವಿರ ಕೋಟಿಯಷ್ಟು ಕಮಿಷನ್ ಬಾಚಿಕೊಳ್ಳಲು ರಾಜ್ಯ ಸರ್ಕಾರ ನಾಲ್ಕು ಪ್ಯಾಕೇಜ್‌ಗಳಲ್ಲಿ ಒಂದೇ ಸಂಸ್ಥೆಗೆ ಗುತ್ತಿಗೆ ನೀಡಲು ಮುಂದಾಗಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

'ಕಪ್ಪುಪಟ್ಟಿಯಲ್ಲಿರುವ ಸಂಸ್ಥೆಗೆ ಗುತ್ತಿಗೆ'

'ಸಮಗ್ರ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಹೆಸರಿನಲ್ಲಿ ರಾಜ್ಯ ಸರ್ಕಾರವು ಸುಮಾರು ₹45 ಸಾವಿರ ಕೋಟಿ ಹಣವನ್ನು ತ್ಯಾಜ್ಯ ವಿಲೇವಾರಿ, ನಿರ್ವಹಣೆಗೆ ಹೆಚ್ಚಾಗಿ ವೆಚ್ಚ ಮಾಡಲು ಮುಂದಾಗಿದೆ. ಕಪ್ಪುಪಟ್ಟಿಯಲ್ಲಿರುವ ರಾಮ್‌ಕೀ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ 30 ವರ್ಷಕ್ಕೆ ಗುತ್ತಿಗೆಯನ್ನು ಗುತ್ತಿಗೆ ನೀಡಲು ಅನುವಾಗುವಂತೆ ಎಲ್ಲ ನಿಯಮಗಳನ್ನೂ ರೂಪಿಸಿದೆ' ಎಂದು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ರಮೇಶ್ ಎನ್‌.ಆರ್. ದೂರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ರೈಟ್ಸ್ ಸಂಸ್ಥೆ ಈಗಾಗಲೇ ಹೊಸ ವ್ಯವಸ್ಥೆಗೆ ಡಿಪಿಆರ್ ಸಲ್ಲಿಸಿದೆ. ಮಂಡೂರು, ದೊಡ್ಡಬಳ್ಳಾಪುರ, ಗೊಲ್ಲಹಳ್ಳಿ ಮತ್ತು ಬಿಡದಿ ಪ್ರದೇಶಗಳಲ್ಲಿ ತಲಾ 100ಕ್ಕೂ ಹೆಚ್ಚು ಎಕರೆ ಪ್ರದೇಶವನ್ನು ಬಿಬಿಎಂಪಿ ಖರೀದಿಸಿ, ಮೂಲಸೌಕರ್ಯದೊಂದಿಗೆ ಗುತ್ತಿಗೆದಾರರಿಗೆ ನೀಡಲಿದೆ. ನಗರದಲ್ಲಿ 3,500 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದರೂ, 6,571 ಟನ್ ನಿರ್ವಹಣೆಗೆ ವೆಚ್ಚ ನೀಡಲು ಯೋಜಿಸಲಾಗಿದೆ. ಈಗ ಇರುವ ಪ್ರತಿ ಟನ್‌ಗೆ ₹260 ಟಿಪ್ಪಿಂಗ್ ಶುಲ್ಕವನ್ನು ₹650ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ' ಎಂದು ದೂರಿದ್ದಾರೆ.

ಜಮ್ಮು–ಕಾಶ್ಮೀರದ ಡೋಡಾ ಜಿಲ್ಲೆಯಲ್ಲಿ ಉಗ್ರರೊಂದಿಗೆ ಗುಂಡಿನ ಚಕಮಕಿ

ಮೇಜರ್ ಸೇರಿ ನಾಲ್ವರು ಹುತಾತ್ಮ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು–ಕಾಶ್ಮೀರದ ಡೋಡಾ ಜಿಲ್ಲೆಯ ದೇಸಾ ಅರಣ್ಯ ಪ್ರದೇಶದಲ್ಲಿ ಸೋಮವಾರ ತಡರಾತ್ರಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೇಜರ್ ಬ್ರಿಜೇಶ್ ಥಾಪಾ, ಒಬ್ಬ ಪೊಲೀಸ್ ಸೇರಿದಂತೆ ನಾಲ್ವರು ಸೇನೆಯ ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ಸಿಪಾಯಿಗಳಾದ ಬಿಜೇಂದ್ರ, ಅಜಯಕುಮಾರ್ ಸಿಂಗ್ ಮತ್ತು ದೊಕ್ಕರಿ ರಾಜೇಶ್ ಹುತಾತ್ಮರಾದ ಯೋಧರು. '10 ರಾಷ್ಟ್ರೀಯ ರೈಫಲ್ಸ್'ನ ಮೇಜರ್ ಥಾಪಾ, ಇತ್ತೀಚೆಗಷ್ಟೆ ಬಡ್ತಿ ಹೊಂದಿದ್ದರು.

ಅರಣ್ಯದಲ್ಲಿ ಭದ್ರತಾ ಪಡೆಗಳು ಶೋಧ ನಡೆಸುತ್ತಿದ್ದ ವೇಳೆ, ಉಗ್ರರು ಏಕಾಏಕಿ ಗುಂಡಿನ ದಾಳಿ ನಡೆಸಿದರು. ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳೂ ಗುಂಡಿನ ದಾಳಿ ನಡೆಸಿದವು ಎಂದು ಸೇನೆಯ ನಗ್ರೋತಾದಲ್ಲಿರುವ ವೈಟ್ ನೈಟ್ ಕೋರ್ ಮೂಲಗಳು ಹೇಳಿವೆ.

ಚಕಮಕಿ ಆರಂಭಗೊಂಡ ನಂತರ, ಪರಾರಿಯಾಗಲು ಯತ್ನಿಸಿದ ಉಗ್ರರನ್ನು ಯೋಧರು ಬೆನ್ನಟ್ಟಿದ್ದರು. ಈ ಪ್ರದೇಶವು ದಟ್ಟವಾದ ಅರಣ್ಯ ಮತ್ತು ಪರ್ವತಗಳಿಂದ ಕೂಡಿದ್ದರಿಂದ ಕಾರ್ಯಾಚರಣೆ ನಡೆಸುವುದು ಸವಾಲಿನಿಂದ ಕೂಡಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಕೆಳಮಟ್ಟದಲ್ಲಿ ಮೋಡಗಳಿದ್ದವು. ಮಳೆಯೂ ಸುರಿಯುತ್ತಿದ್ದ ಕಾರಣ, ಯಾವುದೂ ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ. ರಾತ್ರಿ 8.40ರ ಹೊತ್ತಿಗೆ ಜಂಟಿ ಕಾರ್ಯಾಚರಣೆ ಆರಂಭಿಸಲಾಯಿತು. ಅರಣ್ಯದಲ್ಲಿ ಅವಿತಿದ್ದ ಉಗ್ರರೊಂದಿಗೆ ಯೋಧರು ಸಂಪರ್ಕ ಸಾಧಿಸಿದರು'.

'ಈ ವೇಳೆ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ನಾಲ್ವರು ಸಿಬ್ಬಂದಿ ಗಾಯಗೊಂಡರು. ನಂತರ, ಗಾಯಗಳಿಂದಾಗಿ ಮೃತಪಟ್ಟರು. ಕಾರ್ಯಾಚರಣೆ ನಡೆಯುತ್ತಿರುವ ಸ್ಥಳಕ್ಕೆ ಹೆಚ್ಚುವರಿ ಯೋಧರನ್ನು ಕಳುಹಿಸಲಾಗಿದೆ' ಎಂದು ಸೇನೆಯ ಪ್ರಕಟಣೆ ತಿಳಿಸಿದೆ.



ಡೋಡಾ ಜಿಲ್ಲೆಯಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾದ ಯೋಧರಿಗೆ ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಗೌರವ ಸಲ್ಲಿಸಿದರು –ಪಿಟಿಐ ಚಿತ್ರ

> ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನೀತಿ ವಿಫಲವಾಗಿದೆ. ಕಾಶ್ಮೀರಿ ಪಂಡಿತರಿಗೆ ಪುನರ್ವಸತಿ ಕಲ್ಪಿಸಿಲ್ಲ, ಇನ್ನೊಂದೆಡೆ ಅಭಿವೃದ್ಧಿ ಕಾರ್ಯಗಳೂ ಆಗುತ್ತಿಲ್ಲ
>
> **ಸೌರಭ್ ಭಾರದ್ವಾಜ್,** ದೆಹಲಿ ಸಚಿವ

ಪ್ರಮುಖಾಂಶಗಳು

- ಉಗ್ರರ ಮೃತದೇಹಗಳಿದ್ದ ಸ್ಥಳದಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿರುವುದು ಪತ್ತೆ. ದೇಶದ ವಿರುದ್ಧ ಯುದ್ಧ ನಡೆಸಲು ಸಂಚು ರೂಪಿಸಿರುವ ಸಂಸ್ಥೆಗಳ ಕೈವಾಡವಿರುವುದು ವಿಶ್ಲೇಷಣೆಯಿಂದ ಪತ್ತೆ
- ಗುಪ್ತಚರ ವರದಿ ಆಧರಿಸಿ ಕಾಶ್ಮೀರ ಪ್ರದೇಶ ಹಾಗೂ ಪೀರ್ ಪಂಜಾಲ್ ಪರ್ವತ ಶ್ರೇಣಿಗಳಲ್ಲಿ ಕಾರ್ಯಾಚರಣೆ ಮುಂದುವರಿಕೆ
- ಗಡಿ ನಿಯಂತ್ರಣ ರೇಖೆ ಉದ್ದಕ್ಕೂ ಹಾಕಿರುವ ಬೇಲಿ ಭದ್ರವಾಗಿದ್ದು, ಜಾಗೃತರಾಗಿರುವಂತೆ ಯೋಧರಿಗೆ ಸೂಚನೆ

'ಉಗ್ರವಾದದ ಉಪದ್ರವ ನಿರ್ಮೂಲನೆಗೆ ಬದ್ಧ'

ಜಮ್ಮು(ಪಿಟಿಐ): 'ಜಮ್ಮು–ಕಾಶ್ಮೀರದಲ್ಲಿ ಉಗ್ರವಾದದ ಉಪದ್ರವವನ್ನು ನಿರ್ಮೂಲನೆ ಮಾಡಲು ಸೇನೆ ಬದ್ಧವಾಗಿದೆ' ಎಂದು ಉಧಂಪುರದಲ್ಲಿರುವ ಸೇನೆಯ ನಾರ್ದರ್ನ್ ಕಮಾಂಡ್ ಮಂಗಳವಾರ ಹೇಳಿದೆ.

ಡೋಡಾ ಜಿಲ್ಲೆಯಲ್ಲಿ ಉಗ್ರರೊಂದಿಗಿನ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾದ ನಾಲ್ವರು ಯೋಧರಿಗೆ ಗೌರವ ಸಲ್ಲಿಸಿದ ವೇಳೆ, ಸೇನೆ ಈ ಮಾತು ಹೇಳಿದೆ.

'ಗಡಿ ಮೂಲಕ ಒಳನುಸುಳಿ, ಉಧಂಪುರ, ಡೋಡಾ ಮತ್ತು ಕಿಶ್ತ್‌ವಾರ ಜಿಲ್ಲೆಗಳಲ್ಲಿ ತಮ್ಮ ಚಟುವಟಿಕೆ ವಿಸ್ತರಿಸುತ್ತಿರುವ ವಿದೇಶಿ ಉಗ್ರರನ್ನು ಹೊಡೆದುರುಳಿಸಲಾಗುವುದು. ಈ ಸಂಬಂಧ, ಜಮ್ಮು–ಕಾಶ್ಮೀರ ಪೊಲೀಸರೊಂದಿಗೆ ಸೇನೆಯು ಸರಣಿ ಜಂಟಿ ಕಾರ್ಯಾಚರಣೆಗಳನ್ನು ನಡೆಸುತ್ತಿದೆ' ಎಂದು ಸೇನೆ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಉಗ್ರರ ಉಪಟಳವನ್ನು ಮಟ್ಟ ಹಾಕುವುದಕ್ಕಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜಮ್ಮು–ಕಾಶ್ಮೀರ ಪೊಲೀಸರು ಹಾಗೂಸಿಆರ್‌ಪಿಎಫ್ ಯೋಧರೊಂದಿಗೆ ಜಂಟಿ ತರಬೇತಿ ಆಯೋಜಿಸಲಾಗುತ್ತಿದೆ. ಸೇನೆ, ಪೊಲೀಸರು ಮತ್ತು ಇತರ ಗುಪ್ತಚರ ಸಂಸ್ಥೆಗಳ ನಡುವೆ ಮಾಹಿತಿ ವಿನಿಮಯವೂ ನಡೆಯುತ್ತಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಸ್ಥಳೀಯರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ' ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಗನ ಬಗ್ಗೆ ಹೆಮ್ಮೆ ಇದೆ: ನಿವೃತ್ತ ಕರ್ನಲ್ ಥಾಪಾ

ಕೋಲ್ಕತ್ತ(ಪಿಟಿಐ): 'ಜಮ್ಮು–ಕಾಶ್ಮೀರದಲ್ಲಿ ಉಗ್ರರನ್ನು ಮಟ್ಟ ಹಾಕಲು ನಡೆದ ಹೋರಾಟದಲ್ಲಿ ಹತನಾದ ನನ್ನ ಮಗನ ಬಗ್ಗೆ ಹೆಮ್ಮೆ ಇದೆ' ಎಂದು ಹುತಾತ್ಮ ಮೇಜರ್ ಬ್ರಿಜೇಶ್ ಥಾಪಾ ಅವರ ತಂದೆ, ನಿವೃತ್ತ ಕರ್ನಲ್ ಭುವನೇಶ್ ಕೆ.ಥಾಪಾ ಮಂಗಳವಾರ ಹೇಳಿದ್ದಾರೆ.


'ಬ್ರಿಜೇಶ್ ನನ್ನಿಂದ ಸ್ಫೂರ್ತಿಗೊಂಡಿದ್ದ. ತಾನು ಸಹ ಸೇನೆ ಸೇರಬೇಕು ಎನ್ನುವುದು ಚಿಕ್ಕಂದಿನಿಂದಲೂ ಅವನ ಬಯಕೆಯಾಗಿತ್ತು' ಎಂದು ಹೇಳಿದ್ದಾರೆ.

'ಇದು ಸೇನಾ ಕಾರ್ಯಾಚರಣೆ. ಹೀಗಾಗಿ ಇಂತಹ ಕಾರ್ಯಾಚರಣೆಗಳಲ್ಲಿ ಅಪಾಯ ಇದ್ದೇ ಇರುತ್ತದೆ. ಎಂಥದೇ ಅಪಾಯವಿರಲಿ, ಸೇನೆಯ ಸಿಬ್ಬಂದಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು' ಎಂದು ದಾರ್ಜಿಲಿಂಗ್‌ನ ಲೆಬಾಂಗ್‌ನಲ್ಲಿರುವ ಜಿಂಗ್ ಟೀ ಎಸ್ಟೇಟ್‌ನಲ್ಲಿರುವ ನಿವೃತ್ತ ಕರ್ನಲ್ ಥಾಪಾ, ಪಿಟಿಐಗೆ ತಿಳಿಸಿದರು.

'ಈ ಅಪಾಯಕಾರಿ ಕಾರ್ಯಾಚರಣೆಯಲ್ಲಿ ನನ್ನ ಮಗ ಉತ್ತಮವಾಗಿ ಮತ್ತು ಪ್ರಾಮಾಣಿಕವಾಗಿ ಕರ್ತವ್ಯ ನಿಭಾಯಿಸಿದ್ದಾನೆ' ಎಂದೂ ಹೇಳಿದರು.

'ಎಂಜಿನಿಯರಿಂಗ್ ಪದವೀಧರನಾಗಿದ್ದ 27 ವರ್ಷದ ಬ್ರಿಜೇಶ್, ಐದು ವರ್ಷಗಳ ಹಿಂದೆ ಸೇನೆಗೆ ಸೇರಿದ್ದ. ಜುಲೈ 14ರಂದು ನಮ್ಮ ಜೊತೆಗೆ ಕೊನೆಯದಾಗಿ ಮಾತನಾಡಿದ್ದ. ಗುಂಡಿನ ಚಕಮಕಿಯಲ್ಲಿ ಬ್ರಿಜೇಶ್ ಹತನಾದ ಬಗ್ಗೆ ಸೋಮವಾರ ರಾತ್ರಿ ಅಧಿಕಾರಿಗಳು ನನಗೆ ಮಾಹಿತಿ ನೀಡಿದರು' ಎಂದೂ ಹೇಳಿದ್ದಾರೆ.

'ಭಯೋತ್ಪಾದನೆ ನಿರ್ಮೂಲನೆಗೆ ಸೈನಿಕರು ಬದ್ಧ'



ನವದೆಹಲಿ (ಪಿಟಿಐ): ಉಗ್ರ ವಿರೋಧಿ ಕಾರ್ಯಾಚರಣೆಯಲ್ಲಿ ನಾಲ್ವರು ಯೋಧರು ಹುತಾತ್ಮರಾಗಿರುವುದು ತಿಳಿದು ತೀವ್ರ ನೋವಾಗಿದೆ. ಭಯೋತ್ಪಾದನೆ ನಿರ್ಮೂಲನೆಗೆ ಭದ್ರತಾ ಪಡೆಗಳು ಬದ್ಧವಾಗಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ಹೇಳಿದರು.

ಸೇನಾ ಸಿಬ್ಬಂದಿ ಮುಖ್ಯಸ್ಥ ಜ.ಉಪೇಂದ್ರ ದ್ವಿವೇದಿ ಅವರು, ಉಗ್ರ ವಿರೋಧಿ ಕಾರ್ಯಾಚರಣೆ ಕುರಿತು ಸಿಂಗ್ ಅವರಿಗೆ ಸಂಕ್ಷಿಪ್ತವಾಗಿ ವಿವರಿಸಿದರು.

'ಉಗ್ರ ವಿರೋಧ ಕಾರ್ಯಾಚರಣೆಗಳು ನಡೆಯುತ್ತಲೇ ಇವೆ. ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಮತ್ತು ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಲು ನಮ್ಮ ಯೋಧರು ಬದ್ಧರಾಗಿದ್ದಾರೆ' ಎಂದು ಹೇಳಿದರು.

ಕೇಂದ್ರದ ವಿರುದ್ಧ ರಾಹುಲ್ ಗಾಂಧಿ ಟೀಕಾಪ್ರಹಾರ

ಬಿಜೆಪಿಯ ತಪ್ಪು ನೀತಿಗಳಿಂದ ಈ ದುಃಸ್ಥಿತಿ



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಡೋಡಾದಲ್ಲಿ ನಾಲ್ವರು ಸೈನಿಕರು ಹುತಾತ್ಮರಾದ ಬೆನ್ನಲ್ಲೇ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ.

ನಿರಂತರ ಭದ್ರತಾ ಲೋಪಗಳಿಗೆ ಕೇಂದ್ರ ಸರ್ಕಾರವೇ ಹೊಣೆ ಹೊರಬೇಕು ಮತ್ತು ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ.

ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿ, ಇಂಥ ಘಟನೆಗಳು ಪದೇ ಪದೇ ಮರುಕಳಿಸುತ್ತಿರುವುದು ತೀವ್ರ ದುಃಖ ಮತ್ತು ಆಘಾತವನ್ನು ಉಂಟುಮಾಡಿದೆ ಎಂದು ಹೇಳಿದ್ದಾರೆ.

'ನಿರಂತರ ಭಯೋತ್ಪಾದಕ ದಾಳಿಗಳು ಜಮ್ಮು ಮತ್ತು ಕಾಶ್ಮೀರದ ಕೆಟ್ಟ ಸ್ಥಿತಿಯನ್ನು ನಮ್ಮ ಮುಂದಿಟ್ಟಿವೆ. ಬಿಜೆಪಿಯ ತಪ್ಪು ನೀತಿಗಳಿಂದಾಗಿ ನಮ್ಮ ಯೋಧರು ಮತ್ತು ಅವರ ಕುಟುಂಬಸ್ಥರು ಈ ದುಃಸ್ಥಿತಿಯನ್ನು ಅನುಭವಿಸುತ್ತಿದ್ದಾರೆ' ಎಂದು 'ಎಕ್ಸ್' ಮೂಲಕ ಕಿಡಿಕಾರಿದ್ದಾರೆ.

'ಇಂಥ ದುಃಖದ ಸಂದರ್ಭದಲ್ಲಿ ಇಡೀ ದೇಶವೇ ಭಯೋತ್ಪಾದನೆ ವಿರುದ್ಧವಾಗಿ ನಿಂತಿದೆ' ಎಂದು ಹೇಳಿದರು.

> ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ 36 ದಿನಗಳಿಂದ ಪದೇ ಪದೇ ಭಯೋತ್ಪಾದಕ ದಾಳಿಗಳು ನಡೆಯುತ್ತಿದ್ದು, ನಮ್ಮ ಭದ್ರತಾ ತಂತ್ರಗಾರಿಕೆಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಆದರೆ ಮೋದಿ ಸರ್ಕಾರವು ಎಲ್ಲವನ್ನೂ ವ್ಯಾವಹಾರಿಕವಾಗಿಯೇ ನೋಡುತ್ತದೆ
>
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

ಇವಿಎಂ ಪರಿಶೀಲನೆ: ಹಲವು ಆಯ್ಕೆ

ಯಾವುದೇ ಮತಗಟ್ಟೆಯ ಇವಿಎಂ ಆಯ್ಕೆ ಮಾಡಬಹುದು: ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಮತ್ತು ವಿಧಾನ ಸಭಾ ಚುನಾವಣೆಗಳ ಫಲಿತಾಂಶದ ಬಳಿಕ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಮೇಲೆ ಅನುಮಾನ ವ್ಯಕ್ತಪಡಿಸಿರುವ ಅಭ್ಯರ್ಥಿಗಳಿಗೆ ಇವಿಎಂಗಳ ಪರಿಶೀಲನೆಗೆ ಚುನಾವಣಾ ಆಯೋಗ ಅವಕಾಶ ನೀಡಿದೆ.

ಚುನಾವಣೆಯಲ್ಲಿ ಎರಡು ಮತ್ತು ಮೂರನೇ ಸ್ಥಾನಗಳನ್ನು ಪಡೆದಿರುವ ಅಭ್ಯರ್ಥಿಗಳಿಗೆ ಇವಿಎಂಗಳ ಪರಿಶೀಲನೆಗೆ ಯಾವುದೇ ಮತಗಟ್ಟೆಯಿಂದ ಯಂತ್ರಗಳನ್ನು ಆರಿಸುವುದು ಸೇರಿದಂತೆ ಹಲವು ಆಯ್ಕೆಗಳನ್ನೂ ನೀಡಿದೆ.

ಇವಿಎಂಗಳಲ್ಲಿ ಅಳವಡಿಸಲಾಗಿರುವ ಮೈಕ್ರೋ ಕಂಟ್ರೋಲರ್ ಚಿಪ್‌ಗಳಲ್ಲಿ ಅಕ್ರಮವಾಗಿ ತಿದ್ದುಪಡಿ ಮಾಡಲಾಗಿದೆಯೇ ಅಥವಾ ಮಾರ್ಪಾಡು ಮಾಡಲಾಗಿದೆಯೇ ಎಂಬುದರ ಪರಿಶೀಲನೆಗೆ ಅವಕಾಶ ನೀಡಬೇಕು ಎಂದು ಎರಡು ಅಥವಾ ಮೂರನೇ ಸ್ಥಾನ ಪಡೆದ ಎಂಟು ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದರು.

ಪರಿಶೀಲನೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಮಂಗಳವಾರ ತಾಂತ್ರಿಕ–ಪ್ರಮಾಣಿತ ಕಾರ್ಯಾಚರಣೆ ವಿಧಾನ (ಟಿ–ಎಸ್‌ಒಪಿ) ಹೊರಡಿಸಿದೆ.

ಟಿ–ಎಸ್‌ಒಪಿ ಪ್ರಕಾರ, ಅರ್ಹ ಅಭ್ಯರ್ಥಿಗಳು ಒಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯೊಳಗಿನ ಯಾವುದೇ ಮತಗಟ್ಟೆಯಲ್ಲಿ ಬಳಸಿದ ಮತಯಂತ್ರಗಳನ್ನು ಪರಿಶೀಲನೆಗೆ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಪರಿಶೀಲನೆಗೆ ಒಳಪಡಿಸಬೇಕಾದ ಮತಯಂತ್ರಗಳ ಸೀರಿಯಲ್ ಸಂಖ್ಯೆಗಳನ್ನು ತಿಳಿಸಬಹುದು.

'ಅಭ್ಯರ್ಥಿಯು ಮೂರನೇ ವ್ಯಕ್ತಿ ಅಥವಾ ಅಧಿಕಾರಿಗಳ ಮಧ್ಯಪ್ರವೇಶ ಇಲ್ಲದೆಯೇ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಾವುದೇ ಭಾಗದಿಂದ ಇವಿಎಂಅನ್ನು ಪರಿಶೀಲನೆಗೆ ಆರಿಸಿಕೊಳ್ಳುವುದನ್ನು ಇದು ಖಚಿತಪಡಿಸುತ್ತದೆ' ಎಂದು ಆಯೋಗ ತಿಳಿಸಿದೆ.

ಮತಗಟ್ಟೆಯಲ್ಲಿ ಬಳಸಿದ ಇವಿಎಂ ಸೆಟ್‌ನ ಒಂದು ನಿರ್ದಿಷ್ಟ ಘಟಕವನ್ನು ಇನ್ನೊಂದು ಸೆಟ್‌ನ ಘಟಕದ ಜೊತೆ ಜೋಡಿಸಿ ಪರಿಶೀಲನೆ ನಡೆಸುವ ಆಯ್ಕೆಯನ್ನೂ ನೀಡಿದೆ.

ಪರಿಶೀಲನೆ ಬಯಸಿರುವ ಅಭ್ಯರ್ಥಿಯು ತನ್ನ ಆಯ್ಕೆಯ ಮತಗಟ್ಟೆಯ ಇವಿಎಂ ಸೆಟ್‌ನ ಒಂದು ಘಟಕ (ಬ್ಯಾಲೆಟ್‌ಯುನಿಟ್, ಕಂಟ್ರೋಲ್ ಯುನಿಟ್ ಅಥವಾ ವಿವಿಪ್ಯಾಟ್– ಇವುಗಳಲ್ಲಿ ಒಂದು) ಆಯ್ಕೆಮಾಡಿದರೆ, ಆ ಮತಗಟ್ಟೆಯಲ್ಲಿ ಬಳಸಿದ ಅದೇ ಸೆಟ್‌ನ ಇತರ ಘಟಕಗಳನ್ನು ಆಯ್ಕೆ ಮಾಡುವಂತಿಲ್ಲ. ಅದರ ಬದಲು, ಬೇರೆ ಮತಗಟ್ಟೆಯಲ್ಲಿ ಬಳಸಿದ ಇವಿಎಂನ ಇತರ ಘಟಕಗಳನ್ನು ಆಯ್ಕೆ ಮಾಡಿಕೊಂಡು ಸೆಟ್ ಅನ್ನು ಜೋಡಿಸಬೇಕು.

ಪ್ರತಿಯೊಂದು ಇವಿಎಂ ಸೆಟ್ ಕೂಡಾ ಕನಿಷ್ಠ ಒಂದು ಬ್ಯಾಲಟ್ ಯುನಿಟ್, ಒಂದು ಕಂಟ್ರೋಲ್ ಯುನಿಟ್ ಮತ್ತು ಒಂದು ವಿವಿಪ್ಯಾಟ್ ಅಥವಾ ಪೇಪರ್ ಟ್ರಯಲ್ ಮಷಿನ್‌ಅನ್ನು ಒಳಗೊಂಡಿರುತ್ತದೆ.

ಹೀಗೆ ಜೋಡಿಸಿದ ಮತಯಂತ್ರಗಳಲ್ಲಿ ಅಣಕು ಮತದಾನದ ವೇಳೆ ಗರಿಷ್ಠ 1,400 ಮತಗಳನ್ನು ಹಾಕಲು ಅವಕಾಶ ನೀಡಲಾಗಿದೆ. ಆಯೋಗವು ಸೂಚಿಸಿದ ಕಾರ್ಯವಿಧಾನದ ಪ್ರಕಾರವೇ ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆ ಮಾಡಲಾಗುತ್ತದೆ.

ಮುಖ್ಯಾಂಶಗಳು

- ಇವಿಎಂ ಪರಿಶೀಲನೆಗೆ ಅನುಮತಿ ಕೋರಿದ್ದ ಸೋತ ಅಭ್ಯರ್ಥಿಗಳು
- ಅಣಕು ಮತದಾನ, ವಿವಿಪ್ಯಾಟ್ ಸ್ಲಿಪ್ ಎಣಿಕೆಗೆ ಅವಕಾಶ
- ಎಸ್‌ಒಪಿ ಹೊರಡಿಸಿದ ಚುನಾವಣಾ ಆಯೋಗ



ಕವಿತಾ ಆಸ್ಪತ್ರೆಗೆ ದಾಖಲು



ಕವಿತಾ

ನವದೆಹಲಿ (ಪಿಟಿಐ): 'ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ಬಂಧಿಸಲಾಗಿದ್ದ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರನ್ನು ಮಂಗಳವಾರ ದೀನ್ ದಯಾಳ್ ಉಪಾಧ್ಯಾಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಣ ಅಕ್ರಮ ವರ್ಗಾವಣೆ ಸಂಬಂಧ ಜಾರಿ ನಿರ್ದೇಶನಾಲಯವು ಕವಿತಾ ಅವರನ್ನು ಬಂಧಿಸಿತ್ತು. ಸದ್ಯ ಅವರು ತಿಹಾರ್ ಜೈಲಿನಲ್ಲಿದ್ದಾರೆ. 'ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಕವಿತಾ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಭಕ್ತರ ಸಂಭ್ರಮ ಕೇರಳದ ತ್ರಿಶ್ಶೂರ್‌ನ ವಡುಕ್ಕುನಾಥನ್ ದೇವಸ್ಥಾನದಲ್ಲಿ ಆಷಾಢ ಮಾಸದ ಪ್ರಯುಕ್ತ ಭಕ್ತರು ಆನೆಗಳಿಗೆ ಆಹಾರ ತಿನ್ನಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

'ಶಂಭು ಗಡಿ ತೆರೆದಾಗ ದೆಹಲಿಗೆ ದಾಂಗುಡಿ'



ಚಂಡೀಗಢ ಪಿಟಿಐ: 'ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಾಪಿಸಲಾಗಿರುವ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿದಾಗ ಹರಿಯಾಣದ ಅಂಬಾಲದ ಬಳಿ ಶಂಭು ಗಡಿಯಲ್ಲಿ ಬೀಡುಬಿಟ್ಟಿರುವ ರೈತರು ದೆಹಲಿಯತ್ತ ನುಗ್ಗಲಿದ್ದಾರೆ' ಎಂದು ರೈತ ಮುಖಂಡ ಜಗಜೀತ ಸಿಂಗ್ ಡಲ್ಲೇವಾಲ್ ಮಂಗಳವಾರ ಹೇಳಿದ್ದಾರೆ.

ಶಂಭು ಗಡಿಯಲ್ಲಿ ಸ್ಥಾಪಿಸಲಾಗಿರುವ ಬ್ಯಾರಿಕೇಡ್‌ಗಳನ್ನು 'ಪ್ರಾಯೋಗಿಕ ಆಧಾರ'ದಲ್ಲಿ ತೆಗೆದುಹಾಕುವಂತೆ ಹರಿಯಾಣ ಸರ್ಕಾರಕ್ಕೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಸೂಚಿಸಿದ ಬೆನ್ನಲ್ಲೇ, ರೈತ ಮುಖಂಡ ಜಗಜೀತ ಸಿಂಗ್ ಡಲ್ಲೇವಾಲ್ ಅವರ ಈ ಹೇಳಿಕೆ ಹೊರಬಿದ್ದಿದೆ.

ಸಿಬಿಐ, ಇ.ಡಿ ಅಭಿಪ್ರಾಯ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾದ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಮನೀಶ್ ಸಿಸೋಡಿಯಾ ಜಾಮೀನು ಅರ್ಜಿ ಕುರಿತು ಅಭಿಪ್ರಾಯ ಸಲ್ಲಿಸುವಂತೆ ಸಿಬಿಐ ಹಾಗೂ ಜಾರಿ ನಿರ್ದೇಶನಾಲಯಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಸಿಸೋಡಿಯಾ ಅವರು ರಾಜ್ಯದ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ಹಾಗೂ ಅಕ್ರಮ ಹಣ ವರ್ಗಾವಣೆ ನಡೆಸಿದ ಆರೋಪದ ಮೇಲೆ ಕಳೆದ 16 ತಿಂಗಳಿನಿಂದ ಜೈಲಿನಲ್ಲಿದ್ದಾರೆ.

ಕಳೆದ ವರ್ಷ ಅಕ್ಟೋಬರ್ ತಿಂಗಳಿನಿಂದಲೂ ವಿಚಾರಣೆಯು ಅದೇ ಹಂತದಲ್ಲಿದ್ದು, ಜಾಮೀನು ನೀಡಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು.

ಈ ಪ್ರಕರಣದಲ್ಲಿ ಜಾಮೀನು ಅರ್ಜಿಗಳನ್ನು ಮರು ವಿಚಾರಣೆ ನಡೆಸುವಂತೆ ಸಿಸೋಡಿಯಾ ಮಾಡಿದ ಮನವಿಯನ್ನು ಪರಿಗಣಿಸಿದ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ನ್ಯಾಯಪೀಠವು, ಜುಲೈ 29ರ ಒಳಗಾಗಿ ಉತ್ತರ ಸಲ್ಲಿಸುವಂತೆ ಸಿಬಿಐ, ಇಡಿಗೆ ಸೂಚಿಸಿತು.

ಬಿಹಾರ; ವಿಐಪಿ ಪಕ್ಷದ ಮುಖ್ಯಸ್ಥನ ತಂದೆ ಹತ್ಯೆ

ದರಭಂಗಾ (ಬಿಹಾರ) (ಪಿಟಿಐ): ವಿಕಾಸಶೀಲ ಇನ್ಸಾನ್ ಪಕ್ಷದ (ವಿಐಪಿ) ಮುಖ್ಯಸ್ಥ ಮುಕೇಶ್ ಸಹಾನಿ ಅವರ ತಂದೆ ಜಿತನ್ ಸಹಾನಿ ಅವರನ್ನು ಅವರ ಪೂರ್ವಿಕರ ಮನೆಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಮನೆಯು ಬಿಹಾರ ರಾಜ್ಯದ ದರಭಂಗಾ ಜಿಲ್ಲೆಯಲ್ಲಿದೆ.

ಜಿತನ್ ಅವರ ಮೃತದೇಹವು ಅವರ ಮನೆಯ ಕೊಠಡಿಯಲ್ಲಿ ಪತ್ತೆಯಾಗಿದೆ. ಮೃತದೇಹದ ಎದೆ ಭಾಗದಲ್ಲಿ ಹಾಗೂ ಹೊಟ್ಟೆಯ ಮೇಲೆ ಹಲವು ಕಡೆ ಇರಿತದ ಹಾಗೂ ಗಾಯಗಳ ಗುರುತು ಇವೆ.

ಹಿರಿಯ ಅಧಿಕಾರಿಗಳ ತಂಡವೊಂದು ಸ್ಥಳಕ್ಕೆ ತಲುಪಿದೆ, ತನಿಖೆ ನಡೆಯುತ್ತಿದೆ ಎಂದು ದರಭಂಗಾ ಜಿಲ್ಲೆಯ ಹಿರಿಯ ಎಸ್‌ಪಿ ಜಗುನಾಥ್ ರೆಡ್ಡಿ ತಿಳಿಸಿದ್ದಾರೆ. ಹತ್ಯೆ ಪ್ರಕರಣದ ತನಿಖೆಗೆ ಜಿಲ್ಲಾ ಪೊಲೀಸರ ವಿಶೇಷ ತಂಡವೊಂದನ್ನು (ಎಸ್‌ಐಟಿ) ರಚಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಸಂಬಂಧ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಹತ್ಯೆ ನಡೆದ ಪ್ರದೇಶದಲ್ಲಿರುವ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿ, ಇವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಇಬ್ಬರು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಬಿಭವ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ನವದೆಹಲಿ (ಪಿಟಿಐ): ಎಎಪಿ ಸಂಸದೆ ಸ್ವಾತಿ ಮಾಲೀವಾಲ್ ಅವರ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸಹಾಯಕ ಬಿಭವ್ ಕುಮಾರ್ ವಿರುದ್ಧ 500 ಪುಟಗಳ ದೋಷಾರೋಪ ಪಟ್ಟಿಯನ್ನು ಪೊಲೀಸರು ಮಂಗಳವಾರ ಸಲ್ಲಿಸಿದರು.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಗೌರವ್ ಗೋಯಲ್ ಅವರಿಗೆ ದೋಷಾರೋಪ ಪಟ್ಟಿ ಸಲ್ಲಿಸಿದರು. ನಂತರ ಗೋಯಲ್ ಅವರು, ಬಿಭವ್ ನ್ಯಾಯಾಂಗ ಬಂಧನದ ಅವಧಿಯನ್ನು ಜುಲೈ 30ರವರೆಗೆ ವಿಸ್ತರಿಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್, ದೋಷಾರೋಪ ಪಟ್ಟಿಯಲ್ಲಿ 50 ಸಾಕ್ಷಿಗಳ ಹೇಳಿಕೆಗಳಿವೆ ಎಂದು ತಿಳಿಸಿತು.

ಬಿಭವ್ ಕುಮಾರ್ ಅವರು ಮೇ 13ರಂದು ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಮಾಲೀವಾಲ್ ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿದೆ.

ಪ್ರಕರಣದ ಸಂಬಂಧ ಮೇ 18ರಂದು ಬಿಭವ್ ಅವರನ್ನು ಬಂಧಿಸಲಾಗಿದೆ.

ಅಗತ್ಯಬಿದ್ದರೆ ಸುಪ್ರೀಂ ಕೋರ್ಟ್ ಕದತಟ್ಟಲು ನಿರ್ಧಾರ

ಚೆನ್ನೈ (ಪಿಟಿಐ): ರಾಜ್ಯದ ಪಾಲಿನ ಕಾವೇರಿ ನೀರು ಹರಿಸಲು ಕರ್ನಾಟಕ ಹಿಂದೇಟು ಹಾಕುತ್ತಿದ್ದು, ಈ ವಿಚಾರದಲ್ಲಿ ಅಗತ್ಯ ಬಿದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಮಂಗಳವಾರ ಇಲ್ಲಿ ನಡೆದ ತಮಿಳುನಾಡು ಸರ್ವಪಕ್ಷದ ಶಾಸಕಾಂಗ ಪಕ್ಷದ ಮುಖಂಡರ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ನಿರ್ದೇಶನದ ಪ್ರಕಾರ, ತಮಿಳುನಾಡಿಗೆ ನಿತ್ಯ 1 ಟಿಎಂಸಿ ಅಡಿ ನೀರು ಬಿಡಲು ನಿರಾಕರಿಸಿರುವ ಕರ್ನಾಟಕ ಸರ್ಕಾರದ ವಿರುದ್ಧ ಸಭೆಯು ಖಂಡನಾ ನಿರ್ಣಯ ಅಂಗೀಕರಿಸಿತು.

ಕಾವೇರಿ ನ್ಯಾಯಮಂಡಳಿ ಹಾಗೂ ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯಕ್ಕೆ ನೀರು ಹರಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು (ಸಿಡಬ್ಲ್ಯೂಎಂಎ) ಕರ್ನಾಟಕಕ್ಕೆ ಸೂಚನೆ ನೀಡಬೇಕು ಎಂದು ಸಭೆಯು ಮತ್ತೊಂದು ನಿರ್ಣಯ ತೆಗೆದುಕೊಂಡಿದೆ.

ನೀಟ್– ಯುಜಿ ಪ್ರಮುಖ ಆರೋಪಿ ಸೇರಿ ಇಬ್ಬರ ಬಂಧಿಸಿದ ಸಿಬಿಐ

ನವದೆಹಲಿ(ಪಿಟಿಐ): 'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಸೇರಿದಂತೆ ಇಬ್ಬರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಪಂಕಜ್ ಕುಮಾರ್ ಹಾಗೂ ರಾಜು ಸಿಂಗ್ ಬಂಧಿತರು. ಬೊಕಾರೊ ನಿವಾಸಿಯಾದ ಪಂಕಜ್ ಕುಮಾರ್ ಅವರನ್ನು ಪಟ್ನಾದಲ್ಲಿ ಹಾಗೂ ರಾಜು ಸಿಂಗ್ ಅವರನ್ನು ಹಜಾರಿಬಾಗ್‌ನಲ್ಲಿ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಇದರೊಂದಿಗೆ ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಬಂಧಿತರ ಸಂಖ್ಯೆ 14ಕ್ಕೆ ಏರಿದಂತಾಗಿದೆ.

ಪಂಕಜ್ ಕುಮಾರ್ ಸಿಂಗ್, ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕಚೇರಿಯಲ್ಲಿನ ಪೆಟ್ಟಿಗೆಯಿಂದ ಪ್ರಶ್ನೆಪತ್ರಿಕೆ ಕಳವು ಮಾಡಿದ ಆರೋಪ ಎದುರಿಸುತ್ತಿದ್ದಾರೆ.

ಪ್ರಶ್ನೆಪತ್ರಿಕೆ ಕಳವು ಮಾಡಲು ಹಾಗೂ ಅವುಗಳನ್ನು ಇತರ ಗುಂಪಿಗೆ ಸಾಗಿಸುವಲ್ಲಿ ಪಂಕಜ್‌ಕುಮಾರ್‌ಗೆ ರಾಜು ಸಿಂಗ್ ನೆರವಾಗುತ್ತಿದ್ದ ಎನ್ನಲಾಗಿದೆ.

ಪಂಕಜ್‌ಕುಮಾರ್, 2017ರಲ್ಲಿ ಜೆಮ್‌ಶೆಡ್‌ಪುರದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

23ಕ್ಕೆ ಐಎಎಸ್ ತರಬೇತಿ ಅಕಾಡೆಮಿಗೆ ತೆರಳಲು ಸೂಚನೆ

ಪೂಜಾ ಖೇಡ್ಕರ್ ತರಬೇತಿಗೆ ತಡೆ



ಮುಂಬೈ (ಪಿಟಿಐ): ವಿವಾದಿತ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರ ಜಿಲ್ಲಾ ತರಬೇತಿ ಕಾರ್ಯಕ್ರಮಕ್ಕೆ ಸರ್ಕಾರವು ಮಂಗಳವಾರ ತಡೆ ನೀಡಿದೆ.

ಐಎಎಸ್ ಪರೀಕ್ಷೆಯ ತೇರ್ಗಡೆಗಾಗಿ ಅಂಗವೈಕಲ್ಯತೆ ಸಮಸ್ಯೆಯಿಂದ ಬಳಲುತ್ತಿರುವಂತೆ ದಾಖಲೆಗಳನ್ನು ತಿದ್ದುಪಡಿ ಮಾಡಿದ ಆರೋಪಕ್ಕೆ ಗುರಿಯಾಗಿರುವ ಕಾರಣಕ್ಕಾಗಿ ಸರ್ಕಾರ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

ತಮ್ಮ ವಿರುದ್ಧ ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿಗಳನ್ನು ಹಬ್ಬಿಸಲಾಗುತ್ತಿದೆ ಎಂದು ಖೇಡ್ಕರ್ ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಅಧಿಕಾರಿಯೊಬ್ಬರು, 'ಜುಲೈ 23ರ ಒಳಗೆ ಮಸ್ಸೂರಿಯಲ್ಲಿ ಇರುವ ನಾಗರಿಕ ಸೇವಾ ತರಬೇತಿ ಕೇಂದ್ರ 'ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಅಕಾಡೆಮಿ'ಗೆ ಬರಬೇಕು ಎಂಬುದಾಗಿ ಖೇಡ್ಕರ್ ಅವರಿಗೆ ಸೂಚಿಸಲಾಗಿದೆ. ಮುಂದಿನ ಕ್ರಮಕ್ಕಾಗಿ ಅವರನ್ನು ವಾಪಸ್ ಕರೆಸಿಕೊಳ್ಳಲು ಅಕಾಡೆಮಿ ನಿರ್ಧರಿಸಿದೆ' ಎಂದಿದ್ದಾರೆ.

'ಮಹಾರಾಷ್ಟ್ರ ರಾಜ್ಯ ಸರ್ಕಾರದ ಜಿಲ್ಲಾ ತರಬೇತಿ ಯೋಜನೆಯಿಂದ ನಿಮ್ಮನ್ನು ಬಿಡುಗಡೆಗೊಳಿಸಲಾಗಿದೆ. 2024ರ ಜುಲೈ 23ರ ಒಳಗೆ ಅಕಾಡೆಮಿಗೆ ತೆರಳಬೇಕು' ಎಂದು ಮಹಾರಾಷ್ಟ್ರ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನಿತಿನ್ ಗದ್ರೆ ಅವರು ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ವಾಶೀಂ ಜಿಲ್ಲಾಧಿಕಾರಿ ಭುವನೇಶ್ವರಿ ಎಸ್, 'ಸಹಾಯಕ ಜಿಲ್ಲಾಧಿಕಾರಿ ಸ್ಥಾನದಿಂದ ಖೇಡ್ಕರ್ ಅವರನ್ನು ತಕ್ಷಣದಿಂದಲೇ ಬಿಡುಗಡೆಗೊಳಿಸಲಾಗಿದೆ' ಎಂದಿದ್ದಾರೆ.

'ನನ್ನ ವಿರುದ್ಧ ಸುಳ್ಳು ಸುದ್ದಿಗಳ ಪ್ರಸಾರ': 'ನನ್ನ ವಿರುದ್ಧ ಪ್ರತಿದಿನವೂ ಸುಳ್ಳು ಸುದ್ದಿಗಳ ಆಂದೋಲನವೇ ನಡೆಯುತ್ತಿದೆ' ಎಂದು ವಿವಾದಿತ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಮಾಣಪತ್ರಗಳ ಪರಿಶೀಲನೆ

ಪುಣೆ (ಪಿಟಿಐ): ಅಂಗವೈಕಲ್ಯ (ಪಿಡಬ್ಲ್ಯುಬಿಡಿ) ಮತ್ತು ಒಬಿಸಿ ಕೋಟಾವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವ ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ ಡಾ.ಪೂಜಾ ಖೇಡ್ಕರ್ ಅವರು ಸಲ್ಲಿಸಿದ್ದ ವೈದ್ಯಕೀಯ ಪ್ರಮಾಣಪತ್ರಗಳ ಸತ್ಯಾಸತ್ಯತೆ ಬಗ್ಗೆ ಪುಣೆ ಪೊಲೀಸರು ತನಿಖೆ ನಡೆಸಲಿದ್ದಾರೆ.

ಕೇಂದ್ರ ಲೋಕಸೇವಾ ಆಯೋಗಕ್ಕೆ (ಯುಪಿಎಸ್‌ಸಿ) ಖೇಡ್ಕರ್ ಸಲ್ಲಿಸಿದ್ದ ವೈದ್ಯಕೀಯ ಪ್ರಮಾಣಪತ್ರಗಳನ್ನು ಪರಿಶೀಲಿಸುವಂತೆ ಅಂಗವಿಕಲ ಆಯುಕ್ತರ ಕಾರ್ಯಾಲಯವು ಪುಣೆ ಪೊಲೀಸರು ಮತ್ತು ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ.

ಜಿಲ್ಲಾಧಿಕಾರಿ ವಿರುದ್ಧ ದೂರು: ತಮ್ಮ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಪುಣೆ ಜಿಲ್ಲಾಧಿಕಾರಿ ಸುಹಾಸ್ ದಿವಾಸೆ ಅವರ ವಿರುದ್ಧ ವಾಶೀಂ ಪೊಲೀಸ್ ಠಾಣೆಯಲ್ಲಿ ಪೂಜಾ ಖೇಡ್ಕರ್ ದೂರು ದಾಖಲಿಸಿದ್ದಾರೆ.

ಸಿಜೆಐ ಸೇರಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆ

'ಸುಪ್ರೀಂ'ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳಾದ ನೊಂಗ್‌ಮೀಕಾಪಂ ಕೋಟೀಶ್ವರ ಸಿಂಗ್ ಮತ್ತು ಆರ್.ಮಹದೇವನ್ ಅವರಿಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಬಡ್ತಿ ದೊರೆತಿದೆ.

'ಸುಪ್ರೀಂ' ನ್ಯಾಯಮೂರ್ತಿಗಳಾಗಿ ಈ ಇಬ್ಬರ ನೇಮಕಾತಿ ಕುರಿತು ಕಾನೂನು ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಪ್ರಸ್ತುತ ಇವರು ಕ್ರಮವಾಗಿ ಜಮ್ಮು–ಕಾಶ್ಮೀರ ಹಾಗೂ ಮದ್ರಾಸ್ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು ಪ್ರಮಾಣ ವಚನ ಸ್ವೀಕರಿಸುವುದರೊಂದಿಗೆ ಸಿಜೆಐ ಒಳಗೊಂಡು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಲಿದೆ.

ಈ ಪೈಕಿ ನೊಂಗ್‌ಮೀಕಾಪಂ ಕೋಟೀಶ್ವರ ಸಿಂಗ್ ಅವರು ಮಣಿಪುರದವರಾಗಿದ್ದು, ಆ ರಾಜ್ಯದಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸ್ಥಾನಕ್ಕೇರಿದ ಮೊದಲಿಗರಾಗಿದ್ದಾರೆ.

'ಇವರ ನೇಮಕದ ಮೂಲಕ ಉನ್ನತ ನ್ಯಾಯಾಲಯದಲ್ಲಿ ಈಶಾನ್ಯ ರಾಜ್ಯಗಳಿಗೂ ಪ್ರಾತಿನಿಧ್ಯ ಸಿಕ್ಕಂತಾಗಿದೆ' ಎಂದು ಸುಪ್ರಿಂ ಕೋರ್ಟ್‌ನ ಕೊಲಿಜಿಯಂ ಜುಲೈ 11ರಂದು ಇವರ ನೇಮಕಕ್ಕೆ ಶಿಫಾರಸು ಮಾಡಿದ ಸಂದರ್ಭದಲ್ಲಿ ಅಭಿಪ್ರಾಯಪಟ್ಟಿತ್ತು.



ನ್ಯಾಯಮೂರ್ತಿಗಳಾದ ನೊಂಗ್‌ಮೀಕಾಪಂ ಕೋಟೀಶ್ವರ ಸಿಂಗ್ ಮತ್ತು ಆರ್‌.ಮಹದೇವನ್

ಸೆಪ್ಟೆಂಬರ್‌ಗೆ ಒಂದು ಸ್ಥಾನ ತೆರವು: ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರು ಸೆಪ್ಟೆಂಬರ್ ತಿಂಗಳಲ್ಲಿ ನಿವೃತ್ತರಾಗಲಿದ್ದು, ಆ ಬಳಿಕ ಒಂದು ಸ್ಥಾನ ತೆರವಾಗಲಿದೆ.

ಸಿಂಗ್ ಅವರ ನೇಮಕದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ತಾಶಿ ರಬ್‌ಸ್ತಾನ್ ಅವರು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಹೈಕೋರ್ಟ್‌ಗಳ ಪ್ರಭಾರ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸುವರು ಎಂದು ಕಾನೂನು ಸಚಿವಾಲಯವು ತಿಳಿಸಿದೆ.

ಅದೇ ರೀತಿ, ನ್ಯಾಯಮೂರ್ತಿ ಡಿ.ಕೃಷ್ಣ ಕುಮಾರ್ ಅವರು ಮದ್ರಾಸ್ ಹೈಕೋರ್ಟ್‌ನ ಪ್ರಭಾರ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸುವರು ಎಂದು ತಿಳಿಸಿದೆ.

ಆರ್.ಮಹದೇವನ್: ಹಿಂದುಳಿದ ಸಮುದಾಯಕ್ಕೆ ಪ್ರಾತಿನಿಧ್ಯ

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿರುವ ಆರ್. ಮಹದೇವನ್ ಅವರು ಪ್ರಸ್ತುತ ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ.

'ಇವರು, ಮೂಲತಃ ತಮಿಳುನಾಡಿನವರಾಗಿದ್ದು, ಹಿಂದುಳಿದ ಸಮುದಾಯಕ್ಕೆ ಸೇರಿದವರು. ಇವರ ನೇಮಕದ ಮೂಲಕ ನ್ಯಾಯಪೀಠ ವೈವಿಧ್ಯ ಪಡೆಯಲಿದೆ' ಎಂದು ಕೊಲಿಜಿಯಂ ಇವರ ಹೆಸರು ಶಿಫಾರಸು ಮಾಡುವ ಸಂದರ್ಭದಲ್ಲಿ ಅಭಿಪ್ರಾಯ ದಾಖಲಿಸಿದೆ.

'ಮದ್ರಾಸ್ ಹೈಕೋರ್ಟ್‌ನ ಹಾಲಿ ಸೇವೆಯಲ್ಲಿರುವ ನ್ಯಾಯಮೂರ್ತಿಗಳ ಹಿರಿತನದಲ್ಲಿ ಆರ್.ಮಹದೇವನ್ ಮೂರನೇ ಸ್ಥಾನದಲ್ಲಿದ್ದಾರೆ. ಆದರೂ, ಹಿಂದುಳಿದ ಸಮುದಾಯಗಳಿಗೆ ಪೀಠದಲ್ಲಿ ಪ್ರಾತಿನಿಧ್ಯ ಇರಬೇಕು ಎಂಬ ಕಾರಣದಿಂದಲೇ ಇವರ ಹೆಸರು ಪರಿಗಣಿಸಲಾಗಿದೆ' ಎಂದು ತಿಳಿಸಿದೆ.

1963ರ ಜೂನ್ 10ರಂದು ಜನಿಸಿರುವ ಮಹದೇವನ್ ಅವರ ಸೇವಾವಧಿ ಜೂನ್ 2028ಕ್ಕೆ ಅಂತ್ಯವಾಗಲಿದೆ.

ಎನ್.ಕೋಟೀಶ್ವರ ಸಿಂಗ್ 'ಸುಪ್ರೀಂ'ನಲ್ಲಿ ಈಶಾನ್ಯದ ಪ್ರತಿನಿಧಿ

ನ್ಯಾಯಮೂರ್ತಿ ನೊಂಗ್‌ಮೀಕಾಪಂ ಕೋಟೀಶ್ವರ ಸಿಂಗ್ ಅವರು ಮೂಲತಃ ಮಣಿಪುರದವರು.

ಅಕ್ಟೋಬರ್ 2011ರಲ್ಲಿ ಗುವಾಹಟಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ಮಣಿಪುರ ಹೈಕೋರ್ಟ್ ಸ್ಥಾಪನೆ ಬಳಿಕ ಅಲ್ಲಿಗೆ ವರ್ಗಾವಣೆ ಆಗಿತ್ತು.

2023ರ ಫೆಬ್ರುವರಿಯಲ್ಲಿ ಅವರನ್ನು ಜಮ್ಮು ಮತ್ತು ಕಾಶ್ಮೀರ ಹಾಗೂ ಕಾಶ್ಮೀರ್ ಮತ್ತು ಲಡಾಖ್ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿತ್ತು. ಫೆಬ್ರುವರಿ 2028ರಲ್ಲಿ ಅವರು 65 ವರ್ಷ ವಯಸ್ಸು ಪೂರ್ಣವಾಗಲಿದ್ದು, ಸೇವೆಯಿಂದ ನಿವೃತ್ತರಾಗಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಜಾವೆಲಿನ್ ಥ್ರೋ ಅಥ್ಲೀಟ್ ಕಿಶೋರ್ ಜೇನಾ

ಹೋದ ವರ್ಷ ಕ್ರೀಡೆ ತೊರೆಯಲು ಯೋಚಿಸಿದ್ದೆ



ಕಿಶೋರ್ ಜೇನಾ

ನವದೆಹಲಿ (ಪಿಟಿಐ): 'ನಿರೀಕ್ಷೆಗೆ ತಕ್ಕಂತೆ ಸಾಮರ್ಥ್ಯ ತೋರಲು ಸಾಧ್ಯವಾಗದ ಕಾರಣ ಹೋದವರ್ಷವೇ ಕ್ರೀಡೆಯಿಂದ ದೂರ ಸರಿಯಲು ನಿರ್ಧರಿಸಿದ್ದೆ. ಆದರೆ ನನ್ನ ತಂದೆಯ ಪ್ರೇರಣೆಯ ನುಡಿಗಳಿಂದಾಗಿ ನಿರ್ಧಾರ ಬದಲಿಸಿದೆ. ಕ್ರೀಡೆಯಲ್ಲಿ ಮುಂದುವರೆದೆ' ಎಂದು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆದಿರುವ ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ಕಿಶೋರ್ ಜೇನಾ ಹೇಳಿದ್ದಾರೆ.

'ಶ್ರೀಲಂಕಾದಲ್ಲಿ ನಡೆದಿದ್ದ ಸ್ಪರ್ಧೆಯಲ್ಲಿ ಕೊನೆಯ ಬಾರಿಗೆ ನನ್ನ ಸಾಮರ್ಥ್ಯ ಪರೀಕ್ಷೆಗೊಡ್ಡಲು ನಿರ್ಧರಿಸಿದ್ದೆ. ವಿಫಲನಾದರೆ ಕೆಲಸಕ್ಕೆ ಮರಳಿ, ಕುಟುಂಬದೊಂದಿಗೆ ಇರಲು ತೀರ್ಮಾನಿಸಿದ್ದೆ. ಆದರೆ ದೇವರ ದಯೆ ಇತ್ತು. 84.38 ಮೀಟರ್ಸ್ ದೂರ ಥ್ರೋ ಮಾಡಿದ್ದೆ. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದೆ' ಎಂದು ಜೇನಾ ಅವರು ಜಿಯೊ ಸಿನಿಮಾದ 'ದ ಡ್ರೀಮರ್ಸ್' ಕಾರ್ಯಕ್ರಮದಲ್ಲಿ ನೆನಪಿಸಿಕೊಂಡರು.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಚಿನ್ನ ಗೆದ್ದಾಗ ಕುಣಿದಾಡಿದ್ದೆ. ಬಹಳ ಖುಷಿಯಿಂದ ಸಂಭ್ರಮಿಸಿದ್ದೆ. ಅದೇ ಸಂದರ್ಭದಲ್ಲಿ ನಾನು ಆಡುವ ಕ್ರೀಡೆಯಲ್ಲಿಯೇ ನೀರಜ್ ಸಾಧನೆ ಮಾಡಿದ್ದು ಬಹಳ ದೊಡ್ಡ ಪ್ರೇರಣೆಯಾಯಿತು. ನಾನು ಇದರಲ್ಲಿ ದೊಡ್ಡ ಸಾಧನೆ ಮಾಡುವ ಛಲ ಗರಿಗೆದರಿತು' ಎಂದು ಹೇಳಿದರು.

ಜೇನಾ ಅವರು 2022ರವರೆಗೂ 80 ಮೀಟರ್ ದೂರ ಥ್ರೋ ಮಾಡಿರಲಿಲ್ಲ. 2023ರಲ್ಲಿ ತಿರುವನಂತಪುರದಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರೀ ಅಥ್ಲೆಟಿಕ್ಸ್‌ನಲ್ಲಿ ಮೊದಲ ಬಾರಿಗೆ ಈ ಮಜಲು (81.05ಮೀ) ದಾಟಿದ್ದರು. ಬುಡಾಪೆಸ್ಟ್‌ನಲ್ಲಿ ಹೋದ ವರ್ಷ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು 85 ಮೀಟರ್ಸ್ ದೂರದ ಕ್ವಾಲಿಫಿಕೇಷನ್ ಮಟ್ಟವನ್ನು ತಲುಪುವಲ್ಲಿ ವಿಫಲರಾಗಿದ್ದರು.

'ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ (84.77 ಮೀ) ಐದನೇ ಸ್ಥಾನ ಪಡೆದಿದ್ದೆ. ನೀರಜ್ ಅಲ್ಲಿ ಚಿನ್ನ (88.17ಮೀ) ಜಯಿಸಿದ್ದರು. ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ (87.54 ಮೀ) ನನ್ನ ವೈಯಕ್ತಿಕ ಶ್ರೇಷ್ಠ ಥ್ರೋ ಮಾಡಿದ್ದೆ. ಬೆಳ್ಳಿಯ ಜೊತೆಗೆ ಒಲಿಂಪಿಕ್ಸ್ ಪ್ರವೇಶವೂ ಲಭಿಸಿತು' ಎಂದರು.

ಆದರೆ ಕಳೆದ ಆರು ಸ್ಪರ್ಧೆಗಳಲ್ಲಿ ಜೇನಾ ಅವರು ಒಂದು ಬಾರಿ ಮಾತ್ರ 80 ಮೀಟರ್ಸ್ ಥ್ರೋ ಮಾಡುವಲ್ಲಿ ಸಫಲರಾಗಿದ್ದಾರೆ. ಉಳಿದಂತೆ ಲಯ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅವರು ಈಚೆಗೆ ಪಂಚಕುಲಾದಲ್ಲಿ ನಡೆದಿದ್ದ ರಾಷ್ಟ್ರೀಯ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

ಬಾಲಾಜಿ ಮೇಲೆ ರೋಹನ್ ಬೋಪಣ್ಣಗೆ ವಿಶ್ವಾಸ


ರೋಹನ್ ಬೋಪಣ್ಣ

ನವದೆಹಲಿ (ಪಿಟಿಐ): ಟೆನಿಸ್ ತಾರೆ ರೋಹನ್ ಬೋಪಣ್ಣ ಅವರು ತಮ್ಮ ವೃತ್ತಿಜೀವನದ ಕೊನೆಯ ಒಲಿಂಪಿಕ್ಸ್‌ನಲ್ಲಿ ಆಡಲು ಸಿದ್ಧರಾಗಿದ್ದಾರೆ.

ಪ್ಯಾರಿಸ್‌ನಲ್ಲಿ ಅವರು ಎನ್. ಶ್ರೀರಾಮ್ ಬಾಲಾಜಿ ಅವರೊಂದಿಗೆ ಡಬಲ್ಸ್‌ನಲ್ಲಿ ಆಡಲಿದ್ದಾರೆ. 44 ವರ್ಷದ ಬೋಪಣ್ಣ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ ಹತ್ತರಲ್ಲಿದ್ದರು. ಅದರಿಂದಾಗಿ ಒಲಿಂಪಿಕ್ ಅರ್ಹತೆ ಪಡೆಯುವುದು ಭಾರತಕ್ಕೆ ಸರಾಗವಾಯಿತು. ಅವರು ಬಾಲಾಜಿ ಅಥವಾ ಯೂಕಿ ಭಾಂಬ್ರಿ ಅವರಲ್ಲಿ ಒಬ್ಬರನ್ನು ತಮ್ಮ ಜೊತೆಗಾರನಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ಇತ್ತು.

ತಮ್ಮ ಕೋಚ್ ಸ್ಕಾಟ್ ಡೇವಿಡಾಫ್ ಮತ್ತು ಬಾಲಚಂದರನ್ ಮಣಿಕಾಂತ್ ಅವರ ಸಲಹೆ ಪಡೆದ ನಂತರ ಬಾಲಾಜಿ ಅವರನ್ನು ಆಯ್ಕೆ ಮಾಡಿಕೊಂಡಿದ್ದರು.

'ನಾವು ಕಣಕ್ಕಿಳಿದಾಗ ಪ್ರತಿಯೊಂದು ಪಂದ್ಯದಲ್ಲಿಯೂ ಗೆಲುವಿನ ಉತ್ತಮ ಅವಕಾಶ ಇರುತ್ತದೆ. ನಮ್ಮ ಎದುರಾಳಿ ಯಾರೇ ಇರಲಿ. ಅವರಿಗೆ ದಿಟ್ಟ ಪೈಪೋಟಿ ಯೊಡ್ಡಬೇಕು. ಮಹತ್ವದ ಘಟ್ಟಗಳಲ್ಲಿ ಪುಟಿದೇಳುವ ಸಾಮರ್ಥ್ಯ ಬಾಲಾಜಿಗೆ ಇದೆ. ಚುರುಕಾದ ಆಟವಾಡುವ ಅವರು ಉತ್ತಮ ಫಲಿತಾಂಶ ನೀಡುವ ನಿರೀಕ್ಷೆ ಇದೆ' ಎಂದು ಪಿಟಿಐ ಸಂದರ್ಶನದಲ್ಲಿ ಬೋಪಣ್ಣ ಹೇಳಿದ್ದಾರೆ.

ಸಂಕಷ್ಟ ದಿನಗಳಿಂದ ಯಶಸ್ಸಿನವರೆಗೆ...

ನವದೆಹಲಿ (ಪಿಟಿಐ): ಹಾಕಿ ವೃತ್ತಿಜೀವನದ ಆರಂಭದಲ್ಲೇ ಟಿವಿ ಚಾನೆಲ್‌ವೊಂದು ನಡೆಸಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಬಲಿಪಶುವಾದ ಈ ಆಟಗಾರ ನಂತರ ಪರಿಶ್ರಮಪಟ್ಟರು. ಭಾರತ ತಂಡಕ್ಕೆ ಮರಳಿದ ನಂತರ ಹಿಂತಿರುಗಿ ನೋಡಲಿಲ್ಲ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಭಾರತ ತಂಡದ ಡಿಫೆಂಡರ್ ಲಲಿತ್ ಉಪಾಧ್ಯಾಯ ಅವರೇ ಈ ಆಟಗಾರ.

ಅಂದು ಬೇಗನೇ ಅಂತ್ಯಗೊಳ್ಳುವಂತೆ ಕಂಡಿದ್ದ ವೃತ್ತಿಜೀವನವನ್ನು ಮರುರೂಪಿಸುವಲ್ಲಿ ಲಲಿತ್ ಪಟ್ಟಪಾಡು ಅಷ್ಟಿಷ್ಟಲ್ಲ. ಯಾತನೆಯಿಂದ ವ್ಯಾಕುಲರಾಗದೇ ಅದನ್ನೇ ವರದಾನವಾಗಿ ಪರಿವರ್ತಿಸಿದರು.

2008 ರಲ್ಲಿ ಟಿ.ವಿ. ಚಾನೆಲ್ ಒಂದು ನಡೆಸಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಅವರ ಹೆಸರು ಕೇಳಿಬಂದಿತ್ತು. ಭಾರತ ಹಾಕಿ ಫೆಡರೇಷನ್‌ನ ಆಗಿನ ಕಾರ್ಯದರ್ಶಿ ಕೆ.ಜ್ಯೋತಿಕುಮಾರನ್ ಅವರೊಂದಿಗೆ 'ಏಜಂಟ್' ಎಂದು ಹೇಳಿಕೊಂಡ ಚಾನೆಲ್ ವರದಿಗಾರ, 'ವ್ಯವಹಾರದ' ಮಾತುಕತೆ ನಡೆಸಿದ್ದರು. ತಮ್ಮಿಷ್ಟದ ಆಟಗಾರರನ್ನು ಸೇರ್ಪಡೆ ಮಾಡಿದರೆ, ಪ್ರಾಯೋಜಕತ್ವ ಕುದುರಿಸಿಕೊಡುವುದಾಗಿ ಹೇಳಿದರು. ಆಗ ಏಜಂಟ್ ಹೇಳಿದ ಹೆಸರೇ ಲಲಿತ್ ಅವರದು.

ಅಮಾಯಕರಾದ ಲಲಿತ್ ತಮ್ಮ ಹೆಸರು ಕೇಳಿಬಂದಾಗ ಕಂಗಾಲಾದರು. ಆಟದಿಂದ ದೂರವಾಗುವ ಮಟ್ಟಕ್ಕೆ ಹೋಗಿದ್ದರು. 'ದೊಡ್ಡ ಕನಸಿನೊಡನೆ ತಂಡಕ್ಕೆ ಬರುವ ಆಟಗಾರನೊಬ್ಬ ಹೀಗಾದಲ್ಲಿ ಆಟವನ್ನೇ ಬಿಡುತ್ತಿದ್ದ. ಆದರೆ ಆ ಪ್ರಕರಣ ಸಂಕಷ್ಟದಲ್ಲೂ ವರದಾನದಂತೆ ಆಯಿತು. ಆರಂಭದಲ್ಲೇ ಇದನ್ನು ಎದುರಿಸಿ ಮೆಟ್ಟಿನಿಂತಿದ್ದರಿಂದ ಮಾನಸಿಕವಾಗಿ ಗಟ್ಟಿಯಾದೆ. ಆ ಘಟನೆಯನ್ನು ಮರೆತುಬಿಟ್ಟಿದ್ದೇನೆ' ಎಂದು ಅವರು ಪಿಟಿಐಗೆ ತಿಳಿಸಿದರು.

'ಒಲಿಂಪಿಕ್ಸ್‌ನಲ್ಲಿ ಭಾರತ ಎಂಟು ಪದಕಗಳನ್ನು ಗೆದ್ದಿರುವುದನ್ನು ಕೇಳಿ ತಿಳಿದಿದ್ದೆವು. ಆದರೆ ತಂಡ ಪದಕ ಗೆದ್ದಿರುವುದನ್ನು ನಾವು ನೋಡಿರಲಿಲ್ಲ. ಒಲಿಂಪಿಕ್ಸ್‌ನಲ್ಲಿ ಆಡಿ ಪದಕ ಗಳಿಸುವುದು ನನ್ನ ಕನಸಾಗಿತ್ತು' ಎಂದರು.

'ಈಗ ಪರಿಸ್ಥಿತಿ ಬದಲಾಗಿದೆ. ಸಾಮಾಜಿಕ ಜಾಲತಾಣಗಳು ಬಂದಿವೆ. ಈಗ ಯಾರಿಗೂ ಈ ರೀತಿ ಆಗುವುದಿಲ್ಲ. ನಾನು ಅದನ್ನೆಲ್ಲಾ ಮರೆತು ಎರಡನೇ ಬಾರಿ ಒಲಿಂಪಿಕ್ಸ್ ಆಡಲು ತೆರಳುತ್ತಿದ್ದೇನೆ. ತಂಡದ ಜರ್ಸಿ ಧರಿಸಿದಾಗಲೆಲ್ಲಾ ಏನಾದರೂ ವಿಶೇಷವಾದುದನ್ನು ಸಾಧಿಸಬೇಕೆಂಬ ಸ್ಫೂರ್ತಿ ಮೂಡುತ್ತದೆ' ಎಂದು 30 ವರ್ಷ ವಯಸ್ಸಿನ ಲಲಿತ್ ಹೇಳಿದರು.

ಒಲಿಂಪಿಕ್ಸ್ ಕಂಚು, ಏಷ್ಯನ್ ಗೇಮ್ಸ್ ಚಿನ್ನವನ್ನು ಈಗಾಗಲೇ ಗೆದ್ದಿರುವ ಲಲಿತ್, ಇದೇ 26ರಂದು ಆರಂಭವಾಗುವ ಪ್ಯಾರಿಸ್ ಕ್ರೀಡೆಗಳಲ್ಲಿ ಈ ಬಾರಿ ಇನ್ನೂ ಹೆಚ್ಚಿನ ಸಾಧನೆಯತ್ತ ಗಮನ ಕೇಂದ್ರೀಕರಿಸಿದ್ದಾರೆ.

ಭಾರತ ತಂಡದ ಪರ 168 ಪಂದ್ಯಗಳಲ್ಲಿ ಅವರು 45 ಗೋಲುಗಳನ್ನು ಗಳಿಸಿದ್ದಾರೆ. 'ಟೋಕಿಯೊದಲ್ಲಿ ಕಂಚಿನ ಪದಕ ಗೆದ್ದ ನಂತರ ನಿರೀಕ್ಷೆಯ ಮಟ್ಟ ಮೇಲೇರಿದೆ. ಈ ಬಾರಿ ಪದಕದ ಬಣ್ಣ ಬದಲಾಗುತ್ತದೆ ಎನ್ನುವ ವಿಶ್ವಾಸವಿದೆ' ಎಂದು ಲಲಿತ್ ಹೇಳಿದರು.

ಟೋಕಿಯೊದಲ್ಲಿ ಆಡಿದ್ದ ತಂಡದಲ್ಲಿದ್ದ 11 ಆಟಗಾರರು ಪ್ಯಾರಿಸ್‌ನಲ್ಲಿ ಆಡಲಿದ್ದಾರೆ. ಐದು ಮಂದಿ ಮೊದಲ ಸಲ ಒಲಿಂಪಿಕ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ.



ಲಲಿತ್ ಕುಮಾರ್ ಉಪಾಧ್ಯಾಯ

ಅರ್ಜೆಂಟಿನಾ ಕೋಪಾ ಅಮೇರಿಕಾ 2024 ರ ಕಪ್ ಜಯಿಸಿದೆ!

ಬೈಲ್ಸ್‌ಗೆ ಗತವೈಭವಕ್ಕೆ ಮರಳುವ ಛಲ



ಲಾಸ್ ಏಂಜಲಿಸ್ (ಎಎಫ್‌ಪಿ): ಅಮೆರಿಕದ ಸಿಮೊನ್ ಬೈಲ್ಸ್ ಎಂದರೆ ಜಿಮ್ನಾಸ್ಟಿಕ್ಸ್ ಕ್ರೀಡೆಯ 'ರಾಣಿ'ಯೆಂದೇ ಹೆಸರಾದವರು. ಯಶಸ್ಸಿನ ಉತ್ತುಂಗ ಮತ್ತು ಸೋಲಿನ ಪ್ರಪಾತಗಳೆರಡನ್ನೂ ಕಂಡವರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಆಲ್‌ರೌಂಡ್, ವಾಲ್ಟ್, ಫ್ಲೋರ್ ಎಕ್ಸೈಜ್ ಮತ್ತು ತಂಡ ವಿಭಾಗಗಳಲ್ಲಿ ಚಿನ್ನ ಗೆದ್ದಿದ್ದರು. ಆದರೆ 2021ರಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಾನಸಿಕ ಖಿನ್ನತೆಯನ್ನು ಮೀರುವ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.


ಇದೀಗ ಆ ಕಹಿ ನೆನಪುಗಳನ್ನು ಬದಿಗಿಟ್ಟು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ತಮ್ಮ 'ಗತವೈಭವ' ಮರಳಿ ಗಳಿಸುವ ಛಲದೊಂದಿಗೆ ಕಣಕ್ಕಿಳಿಯಲಿದ್ದಾರೆ. 27 ವರ್ಷದ ಬೈಲ್ಸ್ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ಅಮೆರಿಕದ ಅತ್ಯಂತ ಹಿರಿಯ ವಯಸ್ಸಿನ ಮಹಿಳಾ ಜಿಮ್ನಾಸ್ಟ್ ಆಗಿದ್ದಾರೆ.

2016ರ ಒಲಿಂಪಿಕ್ಸ್‌ನಲ್ಲಿ ಬೈಲ್ಸ್ ಅವರು ತಮ್ಮ ಪ್ರತಿಸ್ಪರ್ಧಿಯಾಗಿದ್ದ ಅಲೈ ರೈಸ್‌ಮನ್ ಅವರನ್ನು 'ಅಜ್ಜಿ' ಎಂದು ಛೇಡಿಸಿದ್ದರು. ಆಗ ಅಲೈಗೆ 22 ವರ್ಷವಾಗಿತ್ತು.

'ಅಲೈ ಅವರಲ್ಲಿ ನಾನೀಗ ಕ್ಷಮೆಯಾಚಿಸುತ್ತೇನೆ. ಈಗ ನಾನೇ ಹೆಚ್ಚು ವಯಸ್ಸಿನವಳಾಗಿದ್ದೇನೆ' ಎಂದು ಬೈಲ್ಸ್ ಹೇಳಿದ್ದಾರೆ.

'ಮಾನಸಿಕ ಸ್ವಾಸ್ಥ್ಯ ಮತ್ತು ದೃಢತೆಗಾಗಿ ಹೆಚ್ಚು ಗಮನ ಕೊಡುತ್ತಿದ್ದೇನೆ. ಪ್ರತಿವಾರವೂ ಥೆರಪಿಯ ತರಗತಿಗಳನ್ನು ತಪ್ಪಿಸುವುದೇ ಇಲ್ಲ. ಅದರಿಂದಾಗಿಯೇ ನಾನು ಮತ್ತೆ ಇಲ್ಲಿಗೆ ಬರಲು ಸಾಧ್ಯವಾಗಿದೆ' ಎಂದು ಬೈಲ್ಸ್ ಹೇಳಿದರು.

ಸ್ಕ್ವಾಷ್: ಪದಕ ಖಚಿತಪಡಿಸಿದ ಶೌರ್ಯ



ನವದೆಹಲಿ (ಪಿಟಿಐ): ಭಾರತದ ಶೌರ್ಯ ಬಾವ ಹೂಸ್ಟನ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಸ್ಕ್ವಾಷ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಆದರೆ, ಮಹಿಳಾ ಸಿಂಗಲ್ಸ್‌ನಲ್ಲಿ ಅನಾಹತ್ ಸಿಂಗ್ ನಿರಾಸೆ ಅನುಭವಿಸಿದರು.


18 ವರ್ಷದ ಶೌರ್ಯ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 2-11, 11-4, 10-12, 11-8, 12-10ರಿಂದ ಮಲೇಷ್ಯಾದ ಲೋ ವಾ-ಸರ್ನ್ ಅವರನ್ನು ಮಣಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ಮುನ್ನಡೆದರು. ಈ ಮೂಲಕ ಕನಿಷ್ಠ ಕಂಚಿನ ಪದಕ ಖಚಿತಪಡಿಸಿದರು. ರಾಷ್ಟ್ರೀಯ ಚಾಂಪಿಯನ್ ಅನಾಹತ್ ಸಿಂಗ್ 8–11, 9–11, 11–5, 12–10, 11–13 ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಈಜಿಪ್ಟ್‌ನ ನಾಡಿಯನ್ ಎಲ್ಹಮ್ಮಿ ಅವರಿಗೆ ಶರಣಾದರು.



ಅಭಿಮಾನದ ಹೊಳೆ

ಅದ್ಧೂರಿ ಸ್ವಾಗತ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ದಾಖಲೆಯ ನಾಲ್ಕನೇ ಬಾರಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಸ್ಪೇನ್ ತಂಡಕ್ಕೆ ಸೋಮವಾರ ತವರಿನಲ್ಲಿ ಅದ್ಧೂರಿ ಸ್ವಾಗತ ದೊರೆಯಿತು. ಕಿಕ್ಕಿರಿದು ಸೇರಿದ್ದ ಅಭಿಮಾನಿಗಳ ಮಧ್ಯೆ ತಂಡದ ಆಟಗಾರರು ತೆರೆದ ಬಸ್‌ನಲ್ಲಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ರಿಯಲ್ ಮ್ಯಾಡ್ರಿಡ್‌ಗೆ ಎಂಬಾಪೆ: ಪ್ರೀತಿಗೆ ಭಾವುಕನಾದ ಆಟಗಾರ



ಮ್ಯಾಡ್ರಿಡ್ (ಎಎಫ್‌ಪಿ): ಫ್ರಾನ್ಸ್‌ನ ಸ್ಟಾರ್ ಆಟಗಾರ ಕೀಲಿಯನ್ ಎಂಬಾಪೆ ಅವರು ಮಂಗಳವಾರ ರಿಯಲ್ ಮ್ಯಾಡ್ರಿಡ್ ತಂಡಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು. 'ನನ್ನ ಬಾಲ್ಯಕಾಲದ ಕನಸು ಇಂದು ನನಸಾಗಿದೆ' ಎಂದು ಕ್ಲಬ್‌ನ ಸ್ಯಾಂಟಿಯಾಗೊ ಬೆರ್ನಬೇವು ಕ್ರೀಡಾಂಗಣದಲ್ಲಿ ನೆರೆದಿದ್ದ 80,000 ಫುಟ್‌ಬಾಲ್ ಅಭಿಮಾನಿಗಳನ್ನು ಉದ್ದೇಶಿಸಿ ಹೇಳಿದರು.

ಎಂಬಾಪೆ ಅವರನ್ನು ಕ್ಲಬ್ ತಂಡಕ್ಕೆ ಸ್ವಾಗತಿಸಲು ದಾಖಲೆ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರು. ಅವರು ಐದು ವರ್ಷಗಳ ಒಪ್ಪಂದಕ್ಕೆ ಸಹಿ ಮಾಡಿದರು. 25 ವರ್ಷದ ಆಟಗಾರನಿಗೆ ಕ್ಲಬ್ ಅಧ್ಯಕ್ಷ ಫ್ಲೊರೆಂಟಿನೊ ಪೆರೆಝ್ 9ನೇ ನಂಬರ್ ಜರ್ಸಿ ಹಸ್ತಾಂತರಿಸಿದರು.

ಎಂಬಾಪೆ ಜೊತೆ ತಂದೆ-ತಾಯಿ ಇದ್ದರು. ಸಮಾರಂಭದಲ್ಲಿ ಕ್ಲಬ್‌ನ ಮಾಜಿ ತಾರಾ ಆಟಗಾರ ಜಿನೆದಿನ್ ಜಿದಾನೆ ಕೂಡ ಇದ್ದರು. ಪ್ರೇಕ್ಷಕರು ತಮ್ಮ ಹೆಸರನ್ನು ಕೂಗುತ್ತಿದ್ದಂತೆ ಅವರು ಭಾವುಕರಾದರು. ತಮಗೆ ನೀಡಿದ ಜರ್ಸಿಗೆ ಚುಂಬಿಸಿದರು.

'ನನ್ನ ಕುಟುಂಬಕ್ಕೆ ಸಂತಸವಾಗಿದೆ. ನನ್ನ ತಾಯಿ ಭಾವನೆಗಳನ್ನು ತಡೆಯಲಾಗದೇ ಅತ್ತಿದ್ದಾರೆ' ಎಂದು ಪ್ಯಾರಿಸ್ ಸೇಂಟ್-ಜರ್ಮನ್ ಕ್ಲಬ್‌ನ ಮಾಜಿ ಆಟಗಾರ ತಿಳಿಸಿದರು. 'ಈ ಕ್ಲಬ್‌ಗೆ ನನ್ನ ಜೀವ ಮುಡಿಪಾಗಿಡುತ್ತೇನೆ' ಎಂದೂ ಹೇಳಿದರು.

ಫುಟ್‌ಬಾಲ್: ಸೆಮಿಗೆ ರಾಜಾಜಿನಗರ

ಬೆಂಗಳೂರು: ಶಾಂತಿನಗರ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರ ತಂಡಗಳು ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಹಾಕಿವೆ.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶಾಂತಿನಗರ ತಂಡವು 3–0ಯಿಂದ ಪುಲಕೇಶಿನಗರ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ರಾಜಾಜಿನಗರ ತಂಡವು 4–2ರಿಂದ ಯಲಹಂಕ ತಂಡವನ್ನು ಮಣಿಸಿತು.

ಶ್ರೀಲಂಕಾ ಪ್ರವಾಸ: ಏಕದಿನ ಸರಣಿಗೆ ಪಾಂಡ್ಯ ಅಲಭ್ಯ

ಟಿ20 ಸರಣಿಗೆ ಹಾರ್ದಿಕ್ ನಾಯಕ



ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಶ್ರೀಲಂಕಾ ವಿರುದ್ಧ ಜುಲೈ 27ರಂದು ಆರಂಭವಾಗುವ ಮೂರು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಗೆ ನಾಯಕರಾಗಿದ್ದಾರೆ. ಆದರೆ ನಂತರ ನಡೆಯುವ ಏಕದಿನ ಸರಣಿಗೆ ಅವರು ಲಭ್ಯರಿರುವುದಿಲ್ಲ.

ಟಿ20 ಪಂದ್ಯಗಳು ಜುಲೈ 27, 28 ಮತ್ತು 30ರಂದು ಪೆಲೆಕೆಲೆಯಲ್ಲಿ ನಡೆಯಲಿವೆ. ಮೂರು ಏಕದಿನ ಪಂದ್ಯಗಳು, ಆಗಸ್ಟ್ 2, 4 ಮತ್ತು 7ರಂದು ನಿಗದಿಯಾಗಿವೆ.

ಟಿ20 ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರರಲ್ಲಿ ಒಬ್ಬರಾದ ಪಾಂಡ್ಯ, ಏಕದಿನ ಸರಣಿಗೆ 'ವೈಯಕ್ತಿಕ ಕಾರಣ'ಗಳಿಂದ ಅಲಭ್ಯರಾಗಿದ್ದಾರೆ.

'ಪಾಂಡ್ಯ ಸಂಪೂರ್ಣವಾಗಿ ಫಿಟ್ ಆಗಿದ್ದು, ಶ್ರೀಲಂಕಾ ವಿರುದ್ಧದ ಟಿ20 ಸರಣಿಯಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ' ಎಂದು ಬಿಸಿಸಿಐನ ಮೂಲವೊಂದು ಪಿಟಿಐಗೆ ತಿಳಿಸಿದೆ. ಇತ್ತೀಚಿನ ವಿಶ್ವಕಪ್ ಫೈನಲ್ ನಂತರ ರೋಹಿತ್ ಶರ್ಮಾ ಅವರು ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಟಿ20 ತಂಡದ ಉಪನಾಯಕ ಯಾರೆಂದು ಸ್ಪಷ್ಟವಾಗಿಲ್ಲ. ಜಿಂಬಾಬ್ವೆ ವಿರುದ್ಧ 4–1ರಲ್ಲಿ ಸರಣಿ ಗೆದ್ದ ತಂಡದ ನಾಯಕರಾಗಿದ್ದ ಶುಭಮನ್ ಗಿಲ್ ಮತ್ತು ಕಳೆದ ವರ್ಷ ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಗೆ ನಾಯಕರಾಗಿದ್ದ ಸೂರ್ಯಕುಮಾರ್ ಯಾದವ್ ಇವರಲ್ಲಿ ಒಬ್ಬರು ಉಪನಾಯಕರಾಗುವ ಸಾಧ್ಯತೆ ದಟ್ಟವಾಗಿದೆ.

ಏಕದಿನ ಸರಣಿಗೆ ಪಾಂಡ್ಯ ಅವರು ಈಗಾಗಲೇ ವಿರಾಮ ಕೇಳಿದ್ದಾರೆ. ನಾಯಕ ರೋಹಿತ್ ಶರ್ಮಾ ಅವರಿಗೂ ಮಾಹಿತಿ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಏಕದಿನ ಸರಣಿಗೆ ನಾಯಕಪಟ್ಟ ಕೆ.ಎಲ್. ರಾಹುಲ್ ಅಥವಾ ಗಿಲ್ ಇವರಲ್ಲಿ ಒಬ್ಬರಿಗೆ ಒಲಿಯಬಹುದು.

'ದುಲೀಪ್ ಟ್ರೋಫಿ: ವಲಯ ಆಯ್ಕೆ ಸಮಿತಿ ಇಲ್ಲ'

ರಾಷ್ಟ್ರೀಯ ತಂಡದ ಕರ್ತವ್ಯದಲ್ಲಿಲ್ಲದ ವೇಳೆ, ಭಾರತ ತಂಡದ ಪ್ರಮುಖ ಆಟಗಾರರೂ ದೇಶಿಯ ಟೂರ್ನಿಯಲ್ಲಿ ಆಡಬೇಕೆಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ. ಇದರ ನಡುವೆಯೂ ಅಪವಾದವೆನ್ನುವಂತೆ ರೋಹಿತ್, ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ ಅವರಂಥ ಆಟಗಾರರಿಗೆ ರಿಯಾಯಿತಿ ದೊರೆತಿದೆ.

ಆದರೆ ಟೆಸ್ಟ್ ಪರಿಣತ ಆಟಗಾರರು, ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ಸರಣಿಗೆ ಪೂರ್ವಭಾವಿಯಾಗಿ ಆಗಸ್ಟ್‌ನಲ್ಲಿ ನಡೆಯಲಿರುವ ದುಲೀಪ್ ಟ್ರೋಫಿಯಲ್ಲಿ ಒಂದೆರಡು ಪಂದ್ಯಗಳನ್ನಾದರೂ ಆಡಬೇಕು ಎಂದು ಬಿಸಿಸಿಐ ಬಯಸಿದೆ. ಈ ಬಾರಿ ದುಲೀಪ್ ಟ್ರೋಫಿಗೆ ವಲಯ ಮಟ್ಟದ ಆಯ್ಕೆ ಸಮಿತಿ ಇರುವುದಿಲ್ಲ. ರಾಷ್ಟ್ರೀಯ ಆಯ್ಕೆ ಸಮಿತಿಯೇ ದುಲೀಪ್ ಟ್ರೋಫಿಗೆ ತಂಡಗಳ ಆಯ್ಕೆ ಮಾಡಲಿದೆ.

ಟೆಸ್ಟ್ ತಂಡಕ್ಕೆ ರೇಸ್‌ನಲ್ಲಿರುವವರನ್ನು ದುಲೀಪ್ ಟ್ರೋಫಿ ಆಯ್ಕೆ ಮಾಡಲಾಗುವುದು. ರೋಹಿತ್, ವಿರಾಟ್ ಮತ್ತು ಬೂಮ್ರಾ ಅವರಿಗೆ ಸಂಬಂಧಿಸಿದಂತೆ ಆಡಬೇಕೇ, ಬೇಡವೇ ಎಂಬುದನ್ನು ಅವರಿಗೆ ಬಿಡಲಾಗುವುದು ಎಂದು ಮೂಲವೊಂದು ತಿಳಿಸಿದೆ.

ರ‍್ಯಾಂಕಿಂಗ್: 68ನೇ ಸ್ಥಾನಕ್ಕೆ ನಗಾಲ್

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಜೀವನಶ್ರೇಷ್ಠ 68ನೇ ಸ್ಥಾನಕ್ಕೆ ಏರಿದ್ದಾರೆ.

ಮಂಗಳವಾರ ಬಿಡುಗಡೆಯಾಗಿರುವ ಕ್ರಮಾಂಕಪಟ್ಟಿಯಲ್ಲಿ 26 ವರ್ಷ ವಯಸ್ಸಿನ ಭಾರತದ ಟೆನಿಸ್ ತಾರೆ ಐದು ಸ್ಥಾನ ಏರಿಕೆ ಕಂಡಿದ್ದಾರೆ.

ಅವರು ಈ ಹಿಂದಿನ ಪಟ್ಟಿಯಲ್ಲಿ 71ನೇ ಸ್ಥಾನದಲ್ಲಿದ್ದುದು ಅವರ ಶ್ರೇಷ್ಠ ರ‍್ಯಾಂಕಿಂಗ್ ಆಗಿತ್ತು.

ಸುಮಿತ್ ಶುಭಾರಂಭ: ಭಾರತದ ಸುಮಿತ್ ನಗಾಲ್, ನಾರ್ಡಿಯಾ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮಂಗಳವಾರ ಆತಿಥೇಯ ದೇಶದ ಆಟಗಾರ ಇಲಿಯಾಸ್ ಎಮೆರ್ ಅವರನ್ನು ಸೋಲಿಸಿದರು.

ನಗಾಲ್ 6–4, 6–3 ರಿಂದ ಜಯ ಗಳಿಸಿ ಎರಡನೇ ಸುತ್ತಿಗೇರಿದರು.

ಕೆಎಸ್‌ಸಿಎ ಟಿ20 ಸೂಪರ್ ಲೀಗ್ ಕ್ರಿಕೆಟ್ ಟೂರ್ನಿ

ನವೀನ್ ಮಿಂಚು: ಜೈದುರ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಉತ್ತಮ ಬೌಲಿಂಗ್ ಮಾಡಿದ ಎಂ.ಬಿ. ನವೀನ್ (23ಕ್ಕೆ3) ಮತ್ತು ಬಿ.ವಿ. ಆರ್ಯನ್ (37 ರನ್) ಬ್ಯಾಟಿಂಗ್ ಬಲದಿಂದ ಜೈದುರ್ ಕ್ರಿಕೆಟರ್ಸ್ ತಂಡವು ಕೆಎಸ್‌ಸಿಎ ಟಿ20 ಸೂಪರ್ ಲೀಗ್ ಜಿ. ಕಸ್ತೂರಿರಂಗನ್ ಸ್ಮಾರಕ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬಾಲಗಂಗಾಧರನಾಥ ಸ್ವಾಮಿ ಶಾಲೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಜೈದುರ್ ಕ್ರಿಕೆಟರ್ಸ್ ತಂಡವು 14 ರನ್‌ಗಳಿಂದ ಸೆಂಚುರಿ ಕ್ರಿಕೆಟರ್ಸ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಬಿಜಿಎಸ್ ಕ್ರೀಡಾಂಗಣ: ಜೈದುರ್ ಕ್ರಿಕೆಟರ್ಸ್: 20 ಓವರ್‌ಗಳಲ್ಲಿ 9ಕ್ಕೆ150 (ಬಿ.ವಿ. ಆರ್ಯನ್ 37, ಚಿರಂಜೀವಿ ನಾಗರಾಜರೆಡ್ಡಿ 22, ಕೆ. ವಿನಯಕುಮಾರ್ 33, ಹರ್ಷಿತ್ ಗೌಡ 36ಕ್ಕೆ2, ಮಾಧವ್ ಬಾಲಾಜಿ 18ಕ್ಕೆ4, ಶಿವಪ್ರತಾಪ್ ಸಿಂಗ್ 10ಕ್ಕೆ2) **ಸೆಂಚುರಿ ಕ್ರಿಕೆಟರ್ಸ್:** 19.1 ಓವರ್‌ಗಳಲ್ಲಿ 136 (ಹರಿ ರಾಜೀವ 45, ಲಿಖಿತ್ ಗೌಡ 28, ಎಂ.ಬಿ. ನವೀನ್ 23ಕ್ಕೆ3, ರೋಹಿತ್ ಅಂತಾಲ್ 23ಕ್ಕೆ2, ಬಿ.ಟಿ. ಸಂಜು 18ಕ್ಕೆ2) **ಫಲಿತಾಂಶ:** ಜೈದುರ್ ಕ್ರಿಕೆಟರ್ಸ್‌ಗೆ 14 ರನ್‌ಗಳ ಜಯ.

ಆಲೂರು ಕ್ರೀಡಾಂಗಣ: ವಿಜಯಾ ಸಿಸಿ: 17 ಓವರ್‌ಗಳಲ್ಲಿ 5ಕ್ಕೆ157 (ಯಶ್ ಜಾಧವ್ 54, ಲಿಯಾನ್ ಖಾನ್ 20, ಅನಿಕೇತ್ ರೆಡ್ಡಿ 23, ಅಬ್ದುಲ್ ಮಜೀದ್ 37, ವಿಜಯಕುಮಾರ್ ಪಾಟೀಲ 25ಕ್ಕೆ4) **ಹಮಂಡ್ಸ್ ಸಿಸಿ:** 17 ಓವರ್‌ಗಳಲ್ಲಿ 4ಕ್ಕೆ111 (ಕವೀಶ್ ಉಮೇಶ್ ಮುಕ್ಕಣ್ಣವರ್ 42, ವಿಜಯಕುಮಾರ್ ಪಾಟೀಲ ಔಟಾಗದೆ 32, ಲವೀಶ್ ಕುಶಾಲ್ 23ಕ್ಕೆ1) **ಫಲಿತಾಂಶ:** ವಿಜಯಾ ಸಿಸಿಗೆ 52 ರನ್‌ಗಳ ಜಯ (ಮಳೆಯ ಅಡಚಣೆಯಿಂದಾಗಿ ವಿ.ಜಯದೇವನ್ ನಿಯಮದನ್ವಯ ಪರಿಷ್ಕೃತ ಗುರಿಯನ್ನು 17 ಓವರ್‌ಗಳಲ್ಲಿ 164 ರನ್‌ಗಳಿಗೆ ನಿಗದಿ ಮಾಡಲಾಗಿತ್ತು)

ಆರ್‌ಎಸ್‌ಐ ಮೈದಾನ: ಹೆರಾನ್ಸ್ ಸಿಸಿ: 20 ಓವರ್‌ಗಳಲ್ಲಿ 7ಕ್ಕೆ129 (ವಿನೀತ್ ಮಂಜುನಾಥ್ 20, ಸಾಯಿ ಸುಶೀಲ ರೆಡ್ಡಿ 30, ಫೈಜಾನ್ ಖಾನ್ 24, ಅಮನ್ ಮಲ್ಯ 17ಕ್ಕೆ3) **ಮಾಡರ್ನ್ ಸಿಸಿ:** 17.1 ಓವರ್‌ಗಳಲ್ಲಿ 6ಕ್ಕೆ132 (ಆರ್. ಸುಹಾಸ್ 24, ಎಂ.ಕೆ. ಯಶವಂತ್ 21, ಎಸ್.ಎ. ಸಚಿನ್ ಔಟಾಗದೆ 54, ಕೆ.ಎಂ. ಪ್ರವೇಶ್ 28ಕ್ಕೆ2, ಆದಿತ್ಯ ಮಣಿ 31ಕ್ಕೆ2) **ಫಲಿತಾಂಶ:** ಮಾಡರ್ನ್ ಸಿಸಿಗೆ 4 ವಿಕೆಟ್‌ಗಳ ಜಯ.

(ಮಾಹಿತಿ: ಕೆಎಸ್‌ಸಿಎ ವೆಬ್‌ಸೈಟ್)